ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಫೆಬ್ರವರಿ 18, 2022

ಸಂಪುಟ : 48 ಸಂಚಿಕೆ : 279 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com

## ಖಾತ್ರಿ ಹಣ ದುರುಪಯೋಗ: ಜಿಲ್ಲೆಯಲ್ಲಿ 26 ಕೋಟಿ ರೂ. ವಸೂಲಿಗೆ ಕ್ರಮ


**ದಾವಣಗೆರೆ ಜಿಲ್ಲೆಯಲ್ಲಿ ಆರು ತಾಲ್ಲೂಕುಗಳಲ್ಲಿ ಜಗಳೂರು ಸಿಂಹಪಾಲು. ದುರುಪಯೋಗವಾಗಿರುವ 23.47 ಕೋಟಿ ರೂ. ವಸೂಲಿ ಆಗಬೇಕಾಗಿದೆ.**

ಬಿ.ಪಿ.ಸುಭಾನ್

ದಾವಣಗೆರೆ: ಕೇಂದ್ರ ಸರ್ಕಾರದ ಬಹುನಿರೀಕ್ಷಿತ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನದಲ್ಲಿ ಜಿಲ್ಲೆಯಲ್ಲಿನ ವೈಫಲ್ಯ ಹಾಗೂ ಹಲವಾರು ಪಂಚಾಯಿತಿಗಳಲ್ಲಿ ಆಗಿರುವ ಹಣ ದುರುಪಯೋಗದ ಬಗ್ಗೆ ಸಾಮಾಜಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಗುರುತಿಸಲಾಗಿರುವ 2013-14ನೇ ಸಾಲಿನಿಂದ 2018-19 ನೇ ಸಾಲಿನ ವರೆಗೆ ಸುಮಾರು 26 ಕೋಟಿ ರೂ. ದುರುಪಯೋಗವಾಗಿದೆ ಎಂಬ ವರದಿಯ ಆಧಾರದ ಮೇಲೆ, ಹಣ ದುರುಪಯೋಗಕ್ಕೆ ಕಾರಣರಾದವರಿಂದ ವಸೂಲಾತಿ ಮಾಡಬೇಕಾದ ಮೊತ್ತದ ಪ್ರಮಾಣವನ್ನು ನಿರ್ಧರಿಸುವುದಕ್ಕೆ ಸರ್ಕಾರ ಈಗಾಗಲೇ ಮಾನದಂಡ ನಿಗದಿಪಡಿಸಿ 2020 ಜನವರಿ 4ರಂದು ಸುತ್ತೋಲೆ ಹೊರಡಿಸಿದೆ.

ಜಿಲ್ಲೆಯ ದಾವಣಗೆರೆ, ಚನ್ನಗಿರಿ, ನ್ಯಾಮತಿ, ಹೊನ್ನಾಳಿ, ಹರಿಹರ ಮತ್ತು ಜಗಳೂರು ಸೇರಿದಂತೆ ಆರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಸುಮಾರು 26.63 ಕೋಟಿ ರೂ. ವಸೂಲಾತಿಗಾಗಿ ಸಾಮಾಜಿಕ ಲೆಕ್ಕ ಪರಿಶೋಧನೆ ವರದಿಯಲ್ಲಿ ಸೂಚಿಸಲಾಗಿದೆ ಎಂದು ತಿಳಿದುಬಂದಿದೆ.

ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಂಟಿ ನಿರ್ದೇಶಕ (ಆಡಳಿತ) ಅರುಣ್ ಕುಮಾರ್ ಹಡಗಲಿ ಅವರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಈ ಸುತ್ತೋಲೆಯ ಬಗ್ಗೆ ಕ್ರಮ ಕೈಗೊಳ್ಳಲು ತಾಲ್ಲೂಕುವಾರು ಈಗಾಗಲೇ ಸಭೆಗಳನ್ನು ನಡೆಸಿದ್ದಾರೆ.




**ಗ್ರಾ.ಪಂ. ಅಧ್ಯಕ್ಷರು, ಪಿಡಿಓ ಹಾಗೂ ಇಂಜಿನಿಯರ್‌ಗಳಿಂದ ಹಣ ವಸೂಲಿಗೆ ಕ್ರಮ**

ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು, ಈ ಸಮಿತಿಯು ಗ್ರಾಮ ಪಂಚಾಯ್ತಿ ವಾರು ದುರುಪಯೋಗವಾಗಿರುವ ಹಣ ಎಷ್ಟು? ಯಾರು, ಯಾರಿಂದ ಎಷ್ಟು ಹಣ ವಸೂಲಾತಿ ಮಾಡಬೇಕು ಎಂಬುದರ ಬಗ್ಗೆ ಈಗಾಗಲೇ ಲೆಕ್ಕಾಚಾರ ಹಾಕುವ ಕಾರ್ಯ ಆರಂಭವಾಗಿದೆ. ಕೆಲವೇ ದಿನಗಳಲ್ಲಿ ಜಿಲ್ಲಾ ಪಂಚಾಯತ್ ಸಿಇಓ ಅವರಿಗೆ ಆರು ತಾಲ್ಲೂಕಿನ ಇಓಗಳು ಅಂತಿಮ ವರದಿಯನ್ನು ಸಲ್ಲಿಸಲಿದ್ದಾರೆ ಎಂದು ತಿಳಿದು ಬಂದಿದೆ.

**ತಪ್ಪಿತಸ್ಥ ರಿಂದ ವಸೂಲಿ ಮಾಡಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳು:** 1) ಕಾಮಗಾರಿ ನಿರ್ವಹಣೆ ಹಣ ಪಾವತಿ ಯಾಗಿದ್ದರೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂ ಅಧ್ಯಕ್ಷರಿಂದ ತಲಾ ಶೇಕಡ 20 ಪರ್ಸೆಂಟ್, ಚೆಕ್ ಮೆಜರ್‌ಮೆಂಟ್ ಮಾಡಿದವರು ಎಂಬಿ ಬುಕ್ ದಾಖಲು ಮಾಡಿದವರಿಂದ ತಲಾ ಶೇ.30 ಪರ್ಸೆಂಟ್ ಹಣ ವಸೂಲಾತಿ ಮಾಡಬೇಕಾಗಿದೆ.

2) ಭೌತಿಕ ಕಾಮಗಾರಿಗಿಂತ ಹೆಚ್ಚುವರಿ ಹಣ ಪಾವತಿಯಾಗಿದ್ದರೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಪಂಚಾಯತ್ ಅಧ್ಯಕ್ಷರು ತಲಾ ಶೇಕಡ 40ರಷ್ಟು ಮೊತ್ತವನ್ನು ವಸೂಲಿ ಮಾಡಬೇಕಾಗಿದೆ. (2ನೇ ಪುಟಕ್ಕೆ)

## ದುಗ್ಗಮ್ಮನ ಜಾತ್ರೆಗೆ ಅಗತ್ಯ ಸೌಲಭ್ಯ: ಮೇಯರ್

### ಕುಡಿಯುವ ನೀರು, ಬೀದಿ ದೀಪ, ಸ್ವಚ್ಛತೆಗೆ ಆದ್ಯತೆ ನೀಡಲು ಸದಸ್ಯರ ಸಲಹೆ

ದಾವಣಗೆರೆ, ಫೆ. 17- ಬರುವ ಮಾರ್ಚ್ 13 ರಿಂದ 16ರವರೆಗೆ ನಡೆಯಲಿರುವ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಪಾಲಿಕೆಯಿಂದ ನೀರು, ಸ್ವಚ್ಛತೆ, ಬೀದಿ ದೀಪ, ಮೊಬೈಲ್ ಟಾಯ್ಲೆಟ್, ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಿ, ಜಾತ್ರೆ ಸಂಭ್ರಮದಿಂದ ನಡೆಯಲು ನೆರವು ನೀಡಲಾಗುವುದು ಎಂದು ಮೇಯರ್ ಎಸ್. ಟಿ. ವೀರೇಶ್ ಹೇಳಿದರು.



ಪಾಲಿಕೆ ಸಭಾಂಗಣದಲ್ಲಿ ಗುರುವಾರ ನಡೆದ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿ ಬಾರಿ ಜಾತ್ರಾ ಮಹೋತ್ಸವದಂದು ಪಾಲಿಸುತ್ತಿದ್ದ ಜವಾಬ್ದಾರಿಯನ್ನು ಈ ಬಾರಿಯೂ ಪಾಲಿಕೆ ವಹಿಸಲಿದೆ ಎಂದರು.

ಪಾಲಿಕೆ ಆಯುಕ್ತರು, ಎಲ್ಲಾ ಇಲಾಖೆಗಳ ಮುಖ್ಯಸ್ಥರು, ಸದಸ್ಯರು ದೇವಸ್ಥಾನದ ಸುತ್ತಲಿನ ಪ್ರದೇಶ ವೀಕ್ಷಿಸಿ, ಆಗಬೇಕಾದ ವ್ಯವಸ್ಥೆಗಳ ಬಗ್ಗೆ ಕ್ರಮ ಕೈಗೊಳ್ಳಲಿದ್ದಾರೆ ಎಂದು ಹೇಳಿದರು.

ಸದಸ್ಯ ಚಮನ್ ಸಾಬ್, ಕೊರೊನಾ ನಾಲ್ಕನೇ ಅಲೆ ಬರುವ ಸಂಭವವಿದೆ ಎಂದು ಹೇಳಲಾಗುತ್ತಿದೆ. ಅದು ದಾವಣಗೆರೆಯಲ್ಲಾದ ಜಾತ್ರೆಯಿಂದಲೇ ಬಂತು ಎಂಬ ಅಪವಾದಕ್ಕೆ ಎಡೆಮಾಡಿ ಕೊಡದೆ, ಸ್ವಚ್ಛತೆಗೆ ಹೆಚ್ಚಿನ ಗಮನ ಹರಿಸುವಂತೆ ಸಲಹೆ ನೀಡಿದರು.

ಎಲ್.ಡಿ. ಗೋಣೆಪ್ಪ ಮಾತನಾಡಿ, ಜಾತ್ರೆಯ ಎರಡೂ ದಿನ ದೇವಸ್ಥಾನದ ಬಳಿ ಸ್ವಚ್ಛತೆಗಾಗಿ 20 ಪೌರ ಕಾರ್ಮಿಕರನ್ನು ನೇಮಿಸಿ, ಕಸ ಸಾಗಿಸಲು 2 ಟ್ರ್ಯಾಕ್ಟರ್ ವ್ಯವಸ್ಥೆ ಮಾಡಿ. 24 ಗಂಟೆ ಕಾರ್ಯ ನಿರ್ವಹಿಸುವ ಎರಡು ತಾತ್ಕಾಲಿಕ ಆರೋಗ್ಯ ಕೇಂದ್ರಗಳನ್ನು ತೆರೆಯಿರಿ. ಹಳೆಯ ಭಾಗದಲ್ಲಿ ಬೀದಿ ದೀಪ ಅಳವಡಿಸಿ ಎಂದು ಸಲಹೆ ನೀಡಿದರು.

ಜಲಸಿರಿ ಯೋಜನೆಯಡಿ ಗುಂಡಿ ತೆಗೆದು ಸರಿಯಾಗಿ ಮುಚ್ಚಿಲ್ಲ. ಜನರು ನಮಗೆ ಶಾಪ ಹಾಕುತ್ತಿದ್ದಾರೆ. ಜಾತ್ರೆಗೆ ಹೊರ ಭಾಗದಿಂದ ಜನರು ಬರುತ್ತಿದ್ದಾರೆ. ಗುಂಡಿಗಳನ್ನು ಮುಚ್ಚಿಸಿ, ರಸ್ತೆ ಸರಿಪಡಿಸಿ. ಹಳೇ ಭಾಗದಲ್ಲಿ ನಾಲ್ಕೂ ದಿನ ನೀರು ಪೂರೈಕೆ ಇರಬೇಕು. 50 ಟ್ಯಾಂಕರ್ ನೀರು ಪೂರೈಸಬೇಕು ಎಂದರು.

ಎ.ನಾಗರಾಜ್ ಮಾತನಾಡಿ, ಪಾಲಿಕೆಯಿಂದ (5ನೇ ಪುಟಕ್ಕೆ)

## ಜಲಸಿರಿ ದರ ನಿಗದಿಗೆ ಸಮಿತಿ ರಚನೆ

### ಮಹಾನಗರ ಪಾಲಿಕೆ ತುರ್ತು ಸಭೆಯಲ್ಲಿ ಮೇಯರ್ ಎಸ್.ಟಿ. ವೀರೇಶ್

ದಾವಣಗೆರೆ, ಫೆ.17- ನಗರದಲ್ಲಿ ಜಲಸಿರಿ ಯೋಜನೆಯಡಿ 24x7 ನೀರಿನ ಸಂಪರ್ಕ ಕಲ್ಪಿಸಲಾಗುತ್ತಿದ್ದು, ನೀರಿನ ದರ ನಿಗದಿಗೆ ಸಮಿತಿ ರಚಿಸಿ, ವರದಿ ನಂತರ ತೀರ್ಮಾನಿಸಲಾಗುವುದು ಎಂದು ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಹೇಳಿದರು.

ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಗುರುವಾರ ನಡೆದ ತುರ್ತುಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಲಸಿರಿ ಯೋಜನೆ ಕಾರ್ಯರೂಪಕ್ಕೆ ಬಂದರೆ ನಗರದಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಕೆಲಸಗಳನ್ನು ಬಿಟ್ಟು ನೀರಿಗಾಗಿ ಕಾಯುವುದು ತಪ್ಪುತ್ತದೆ. ದುಡಿಮೆ ಹೆಚ್ಚಾಗುತ್ತದೆ. ಶುದ್ಧ ನೀರನ್ನು ಪೂರೈಸುವುದರಿಂದ ಬೋರ್ ನೀರು ಬಳಕೆ ಕಡಿಮೆಯಾಗಿ, ಆರೋಗ್ಯ ಹೆಚ್ಚಾಗುತ್ತದೆ. ನೀರಿನ ಅಪವ್ಯಯ ತಪ್ಪುತ್ತದೆ ಎಂದರು.

ಇದಕ್ಕೂ ಮುನ್ನ ಯೋಜನೆಯ ಸಾಧಕ-ಬಾಧಕಗಳ ಬಗ್ಗೆ ಸದಸ್ಯರು, ಅಧಿಕಾರಿಗಳೊಂದಿಗೆ ಚರ್ಚಿಸಿದರು. ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಅಧಿಕಾರಿ ಎಸ್.ಸುಬ್ರಮಣ್ಯ ಅವರು, ವಿಪಕ್ಷ ನಾಯಕರು ಹಾಗೂ ಸದಸ್ಯರ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರು.

ಆರಂಭದಲ್ಲಿ ಮಾತನಾಡಿದ ವಿಪಕ್ಷ ನಾಯಕ ಎ.ನಾಗರಾಜ್, ಜಲಸಿರಿ ಯೋಜನೆಗೆ ಆಗಸ್ಟ್ 1, 2017ರಲ್ಲಿ ವರ್ಕ್ ಆರ್ಡರ್ ನೀಡಲಾಗಿತ್ತು. 2020ಕ್ಕೆ ಕಾಮಗಾರಿ ಮುಗಿಸಬೇಕಾಗಿತ್ತು. ಕಾಮಗಾರಿ ಅವಧಿ ವಿಸ್ತರಿಸಿದ್ದರೂ ಪೂರ್ಣಗೊಂಡಿಲ್ಲ. ಹೆಚ್ಚು ಮನೆಗಳಿಲ್ಲದ ಜೆ.ಹೆಚ್. ಪಟೇಲ್ ಬಡಾವಣೆ, ಬನಶಂಕರಿ ಬಡಾವಣೆ, ಕೆಹೆಚ್‌ಬಿ ಮುಂತಾದ ಕಡೆ ಮನೆಗಳಿಗೆ ನಲ್ಲಿಗಳನ್ನು ಅಳವಡಿಸಲಾಗಿದೆ. ಹೆಚ್ಚು ಜನರಿರುವ ವಿನೋಬನಗರದಲ್ಲಿ ಅರ್ಧ ಕೆಲಸ ಮಾತ್ರವಾಗಿದೆ ಎಂದು ಆರೋಪಿಸಿದರು.

ಯೋಜನೆ ಮೈಸೂರಿನಲ್ಲಿ ವಿಫಲವಾಗಿ, ಅಲ್ಲಿನ ಶಾಸಕರು ಗಲಾಟೆ ಮಾಡಿದ್ದಾರೆ. ಹುಬ್ಬಳ್ಳಿ-ಧಾರವಾಡದಲ್ಲಿ ಸಫಲವಾಗಿದೆ. ಅಲ್ಲಿ ತೆಗೆದುಕೊಂಡ ಕ್ರಮಗಳನ್ನು ಚರ್ಚಿಸಿ, ನಿರ್ಣಯ ತೆಗೆದುಕೊಳ್ಳುವಂತೆ ಹೇಳಿದರು.

ಹಿರಿಯ ಸದಸ್ಯ ಚಮನ್ ಸಾಬ್, ರಸ್ತೆ ಅಗೆದು ಸರಿಯಾಗಿ ಮುಚ್ಚಿಲ್ಲ ಎಂದರೆ, ಉಮಾ ಪ್ರಕಾಶ್, ಪೈಪ್ ಅಳವಡಿಕೆ ಸರಿಯಾಗಿಲ್ಲ. ಬೇಗ ಸರಿಪಡಿಸಬೇಕು ಎಂದರು.

ಮೇಯರ್ ವೀರೇಶ್ ಮಾತನಾಡಿ, (2ನೇ ಪುಟಕ್ಕೆ)



### ಜಲಸಿರಿ 'ಕ್ರೆಡಿಟ್' ಗಾಗಿ ಜಟಾಪಟಿ

24x7 ನೀರು ಪೂರೈಸುವ ಜಲಸಿರಿ ಕ್ರೆಡಿಟ್‌ಗಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ಸಭೆಯಲ್ಲಿ ವಾಗ್ಯುದ್ಧ ನಡೆಯಿತು.

ವಿಪಕ್ಷ ನಾಯಕ ಎ.ನಾಗರಾಜ್, 2017ರ ಕಾಂಗ್ರೆಸ್ ಅವಧಿಯಲ್ಲಿ ಶಾಮನೂರು ಶಿವಶಂಕರಪ್ಪ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪರಿಶ್ರಮದಿಂದಾಗಿ ಜಲಸಿರಿ ಯೋಜನೆ ಆರಂಭವಾಗಿದ್ದಾಗಿ ಹೇಳಿದರು.

ಯೋಜನೆಗೆ ಹೆಚ್ಚಿನ ಅನುದಾನ ಮೀಸಲಿರಿಸುವಲ್ಲಿ, ನೀರು ಪೂರೈಕೆಗೆ ಬೇಕಾದ ಸ್ಟೋರೇಜ್ ಪಾಯಿಂಟ್‌ಗಳನ್ನು ತುಂಬಿಸಲು ಬ್ಯಾರೇಜ್ ನಿರ್ಮಾಣಕ್ಕೆ ಕ್ಯಾಬಿನೆಟ್‌ನಲ್ಲಿ ಚರ್ಚಿಸಿ ಅನುದಾನ ಬಿಡುಗಡೆ ಮಾಡಿಸುವಲ್ಲಿ ಎಸ್ಸೆಸ್ಸೆಂ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದರು.

ಬಿಜೆಪಿ ಸದಸ್ಯ ಪ್ರಸನ್ನಕುಮಾರ್, ಜಲಸಿರಿ ಯೋಜನೆ 2014ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಕಲ್ಪನೆಯಾಗಿತ್ತು. ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್ ಅವರು ಯೋಜನೆ ಕಾರ್ಯರೂಪಕ್ಕಿದ್ದ ಸಮಸ್ಯೆಗಳನ್ನು ಪರಿಹರಿಸಿ, ಸಾಫಲ್ಯಕ್ಕೆ ಶ್ರಮಿಸಿದ್ದಾರೆ ಎಂದು ತಿರುಗೇಟು ನೀಡಿದರು. ಮಧ್ಯಪ್ರವೇಶಿಸಿದ ಎ.ನಾಗರಾಜ್, ಜಲಸಿರಿ ಡಿಪಿಆರ್‌ನಲ್ಲಿ ಬ್ಯಾರೇಜ್ ನಿರ್ಮಾಣದ ಪ್ರಸ್ತಾಪವೇ ಇರಲಿಲ್ಲ. ಎಸ್ಸೆಸ್ಸೆಂ ಅವರ ದೂರದೃಷ್ಟಿ (5ನೇ ಪುಟಕ್ಕೆ)

### ಒಬ್ಬ ಬ್ರೋಕರ್ ಸಹ ಕಚೇರಿಗೆ ಕಾಲಿಟ್ಟಿಲ್ಲ: ವೀರೇಶ್

ನಾನು ಮೇಯರ್ ಆದಾಗಿನಿಂದ ಒಬ್ಬ ಬ್ರೋಕರ್ ಸಹ ನನ್ನ ಕಚೇರಿಗೆ ಕಾಲಿಟ್ಟಿಲ್ಲ ಎಂದು ಎಸ್.ಟಿ. ವೀರೇಶ್ ಹೇಳಿದರು. ಕಾಲಿಟ್ಟಿದ್ದಾರೆ. ಆದರೆ ಅವರು ಬ್ರೋಕರ್ ಎಂದು ನಿಮಗೆ ತಿಳಿದಿಲ್ಲ ಎಂದು ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ನಗುತ್ತಲೇ ಟಾಂಗ್ ಕೊಟ್ಟ ಘಟನೆ ಸಭೆಯಲ್ಲಿ ನಡೆಯಿತು. ಅಧಿಕಾರಿಗಳು ಕಡತ ತಂದಾಗ ಮಾತ್ರ ನಾನು ಸಹಿ ಮಾಡಿದ್ದೇನೆ ಎಂದು ವೀರೇಶ್ ಹೇಳಿದಾಗ, ಡೋರ್ ನಂಬರ್ ವಿಚಾರದಲ್ಲಿ ಬ್ರೋಕರ್‌ಗಳಿಗೆ ಹಣ ನೀಡಿದರೆ ಮಾತ್ರ ಕೆಲಸ ಸರಾಗವಾಗುತ್ತದೆ. ಅಧಿಕಾರಿಗಳಿಂದಲ್ಲ ಎಂದು ಚಮನ್ ಸಾಬ್ ಕಾಲೆಳೆದರು.

## ನಕಲಿ ಕಟ್ಟಡ ಕಾರ್ಮಿಕರ ನೋಂದಣಿ ತಡೆಗೆ ಸಮಿತಿ

ಬೆಂಗಳೂರು, ಫೆ. 17- ಸರ್ಕಾರಿ ಸೌಲಭ್ಯ ಪಡೆಯಲು ನಕಲಿ ಕಟ್ಟಡ ಕಾರ್ಮಿಕರ ನೋಂದಣಿಯಾಗಿರುವುದು ಪತ್ತೆಯಾಗಿದ್ದು, ಮುಂದಿನ ದಿನಗಳಲ್ಲಿ ನಕಲು ನೋಂದಣಿಯನ್ನು ತಡೆಯಲು ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳ ಸಮಿತಿ ರಚಿಸಲಾಗಿದೆ ಎಂದು ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ತಿಳಿಸಿದ್ದಾರೆ.

ವಿಧಾನ ಪರಿಷತ್‌ನ ಪ್ರಶ್ನೋತ್ತರದಲ್ಲಿ ಆಡಳಿತ ಪಕ್ಷದ ಸದಸ್ಯ ಡಾ.ತಳವಾರ್ ಸಾಬಣ್ಣ ಪ್ರಶ್ನೆಗೆ ಉತ್ತರಿಸಿದ ಸಚಿವರು, ನಕಲಿ ಕಾರ್ಡ್ ನೋಂದಣಿ ಬೆಳಕಿಗೆ ಬಂದ ಮೇಲೆ ತಾತ್ಕಾಲಿಕವಾಗಿ ನೋಂದಣಿಯನ್ನು ಸ್ಥಗಿತಗೊಳಿಸಿದ್ದೇವೆ. ತನಿಖೆಗಾಗಿ ಅಧಿಕಾರಿಗಳ ಸಮಿತಿ ರಚನೆ ಮಾಡಿದ್ದೇವೆ. ವರದಿ ಬಂದ ಬಳಿಕ ನಕಲಿ ಕಾರ್ಡ್ ಪಡೆದವರು, ನೋಂದಣಿಗೆ ಸಹಕರಿಸಿದ ಅಧಿಕಾರಿಗಳ (2ನೇ ಪುಟಕ್ಕೆ)

## ಬೆಂಬಲ ಬೆಲೆಯಡಿ ಕಡಲೆಕಾಳು ಖರೀದಿ: ಇಂದಿನಿಂದಲೇ ನೋಂದಣಿ

ದಾವಣಗೆರೆ, ಫೆ.17- ಬೆಂಬಲ ಬೆಲೆ ಯೋಜನೆಯಡಿ ಕಡಲೆಕಾಳು ಖರೀದಿಸಲು ಸರ್ಕಾರ ಆದೇಶ ಹೊರಡಿಸಿದ್ದು, ಅದರನ್ವಯ ಜಿಲ್ಲೆಯಲ್ಲಿ ಕಡಲೆಕಾಳು ಖರೀದಿಗೆ ನೋಂದಣಿ ಕಾರ್ಯವನ್ನು ನಾಳೆ ದಿನಾಂಕ 18 ರಿಂದ ಪ್ರಾರಂಭಿಸಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅಧಿಕಾರಿಗಳಿಗೆ ಸೂಚಿಸಿದರು.

ರೈತರಿಗೆ ಯಾವುದೇ ಗೊಂದಲವಾಗದಂತೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು

ಕಡಲೆಕಾಳು ಖರೀದಿ ಸಂಬಂಧ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಂದು ಜರುಗಿದ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಉತ್ತಮ ಗುಣಮಟ್ಟದ ಕಡಲೆಕಾಳಿಗೆ ಸರ್ಕಾರ ಪ್ರತಿ ಕ್ವಿಂಟಾಲ್‌ಗೆ 5230 ರೂ. ನಿಗದಿಪಡಿಸಿದೆ. ರೈತರಿಗೆ ಯಾವುದೇ ಗೊಂದಲವಾಗದಂತೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು.

ಪ್ರಸ್ತುತ ಮಾರುಕಟ್ಟೆಯಲ್ಲಿ ಕಡಲೆಕಾಳಿನ ಬೆಲೆ ಕುಸಿದಿದ್ದು, ರೈತರು ನಷ್ಟಕ್ಕೆ ಒಳಗಾಗುತ್ತಿದ್ದಾರೆ. ಹೀಗಾಗಿ ರೈತರ ಹಿತಕಾಯಲು ಸರ್ಕಾರದ ವತಿಯಿಂದ ಜಿಲ್ಲೆಯಲ್ಲಿ ಕೂಡಲೇ ಬೆಂಬಲ ಬೆ ಲೆ ಯ ಲ್ಲಿ (2ನೇ ಪುಟಕ್ಕೆ)

## ಹಿಜಾಬ್‌ಗೆ ಅವಕಾಶ ನೀಡದಿದ್ದರೆ ಮಕ್ಕಳನ್ನು ಕಾಲೇಜಿಗೆ ಕಳುಹಿಸಲ್ಲ

**ಮಲೇಬೆನ್ನೂರು ಸರ್ಕಾರಿ ಕಾಲೇಜಿನಲ್ಲಿ ನಡೆದ ಸಭೆಯಲ್ಲಿ ಪೋಷಕರ ಅಭಿಪ್ರಾಯ**

ಮಲೇಬೆನ್ನೂರು, ಫೆ. 17- ಹಿಜಾಬ್‌ಗೆ ಅವಕಾಶ ನೀಡದಿದ್ದರೆ ನಮ್ಮ ಮಕ್ಕಳನ್ನು ಕಾಲೇಜಿಗೆ ಕಳುಹಿಸುವುದಿಲ್ಲ ಎಂಬ ಅಭಿಪ್ರಾಯವನ್ನು ಪೋಷಕರು ವ್ಯಕ್ತಪಡಿಸಿದ ಘಟನೆ ಗುರುವಾರ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕರೆದಿದ್ದ ಪೋಷಕರ ಸಭೆಯಲ್ಲಿ ನಡೆದಿದೆ.

ಹಿಜಾಬ್ ವಿವಾದದ ಹಿನ್ನೆಲೆಯಲ್ಲಿ ಹೈಕೋರ್ಟ್ ನೀಡಿರುವ ಸೂಚನೆ ಮತ್ತು ಸರ್ಕಾರದ ಆದೇಶವನ್ನು ಸಭೆಯ ಆರಂಭದಲ್ಲಿ ಪೋಷಕರಿಗೆ ಪ್ರಾಚಾರ್ಯ ರಂಗಪ್ಪ ತಿಳಿಸಿದರು.

ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಹಿಜಾಬ್ ಅಥವಾ ಯಾವುದೇ ತರಹದ ಶಾಲು ಧರಿಸಲು ಅವಕಾಶವಿಲ್ಲ ಎಂಬ ಸ್ಪಷ್ಟ ಮಾಹಿತಿಯನ್ನು ನೋಡಲ್ ಅಧಿಕಾರಿಗಳೂ ಆದ ಯೋಜನಾ ನಿರ್ದೇಶಕರಾದ ಶ್ರೀಮತಿ ನಜ್ಮಾ ಅವರು ಪೋಷಕರಿಗೆ ಮನವೊಲಿಕೆ ಮಾಡಿಕೊಟ್ಟರು.

ಆರಂಭದಲ್ಲಿ ಅಧಿಕಾರಿಗಳ ಮನವೊಲಿಕೆಗೆ ಶೇ. 80ರಷ್ಟು ಪೋಷಕರು ಒಪ್ಪಿಗೆ ಕೊಟ್ಟಿದ್ದರು. ಸಭೆಯ ಕೊನೆಯಲ್ಲಿ ಹಿಜಾಬ್ ಅಥವಾ ವೇಲ್ ಹಾಕಿಕೊಳ್ಳಲು ಅವಕಾಶ ನೀಡದಿದ್ದರೆ ನಮ್ಮ ಮಕ್ಕಳನ್ನು ಕಾಲೇಜಿಗೆ ಕಳುಹಿಸುವುದಿಲ್ಲ ಎಂಬ ಅಭಿಪ್ರಾಯ ತಿಳಿಸಿ ಸಭೆಯಿಂದ ಹೊರಟು ಹೋದರು.

ಪೋಷಕರೊಂದಿಗೆ ಕೆಲವು ವಿದ್ಯಾರ್ಥಿನಿಯರು ಮನೆಗೆ ವಾಪಸ್ಸಾದರು.

ಪೋಷಕರ ಈ ಅಭಿಪ್ರಾಯದಿಂದ ಸುಮಾರು ಒಂದು ತಾಸು ಮನವೊಲಿಸಿದ ಅಧಿಕಾರಿಗಳೂ ಬೇಸರಗೊಂಡರು.

ಸೋಮವಾರದಿಂದ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳು ಇರುವುದರಿಂದ ಪರೀಕ್ಷೆಯ ಅನುಮತಿ ಪಡೆದ 13 ವಿದ್ಯಾರ್ಥಿನಿಯರೂ ಕೂಡಾ ತರಗತಿಗಳಿಗೆ ಹೋಗದೆ ಮನೆಗೆ ತೆರಳಿದರು.

ಹಿಜಾಬ್ ಧರಿಸದ 4 ವಿದ್ಯಾರ್ಥಿನಿಯರು ಮಾತ್ರ ತರಗತಿಗೆ ಹಾಜರಾಗಿದ್ದರು. ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಒಟ್ಟು 363 ವಿದ್ಯಾರ್ಥಿಗಳಿದ್ದು, 156 ವಿದ್ಯಾರ್ಥಿನಿಯರ ಪೈಕಿ 37 ಅಲ್ಪ ಸಂಖ್ಯಾತ ವಿದ್ಯಾರ್ಥಿನಿಯರಿದ್ದಾರೆ.

37 ವಿದ್ಯಾರ್ಥಿನಿಯರಲ್ಲಿ ಬುಧವಾರ 15 ವಿದ್ಯಾರ್ಥಿನಿಯರು ಮಾತ್ರ ಕಾಲೇಜಿಗೆ ಬಂದು ಅದರಲ್ಲಿ 10 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯುವುದಿಲ್ಲ ಎಂದು ಹೇಳಿದರು. 5 ವಿದ್ಯಾರ್ಥಿನಿಯರು ಮಾತ್ರ ಹಿಜಾಬ್ ತೆರವು ಮಾಡಿ ತರಗತಿಗೆ ಹಾಜರಾಗಿದ್ದರು. (2ನೇ ಪುಟಕ್ಕೆ)

## ವೇತನ ಪರಿಷ್ಕರಣೆಗೆ 7ನೇ ವೇತನ ಆಯೋಗ: ಸಿಎಂ

**ರಾಜ್ಯ ಸರ್ಕಾರ ತನ್ನ ಆರ್ಥಿಕ ಇತಿಮಿತಿಗಳಲ್ಲಿ ನೌಕರರ ಅನುಕೂಲಕ್ಕಾಗಿ ಏಳನೇ ವೇತನ ಆಯೋಗ ರಚನೆ ಮಾಡಲು ಬಜೆಟ್‌ನಲ್ಲಿ ಕ್ರಮ ಕೈಗೊಳ್ಳಲಿದೆ: ಸಿಎಂ**

ಬೆಂಗಳೂರು, ಫೆ. 17- ಸರ್ಕಾರಿ ನೌಕರರ ವೇತನ ಪರಿಷ್ಕರಣೆಗಾಗಿ ಏಳನೇ ವೇತನ ಆಯೋಗ, ನಿರೋದ್ಯೋಗಿಗಳಿಗೆ 40,000 ಸರ್ಕಾರಿ ನೌಕರಿ ದೊರೆಯಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಪರಿಷತ್ತಿನಲ್ಲಿ ಇಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಕೆ.ಟಿ. ಶ್ರೀಕಂಠೇಗೌಡ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಮುಖ್ಯಮಂತ್ರಿ, ಮುಂಬರುವ ಬಜೆಟ್‌ನಲ್ಲಿ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗಾಗಿ ಏಳನೇ ವೇತನ ಆಯೋಗ ರಚನೆ ಮಾಡುವ ಸುಳಿವು ನೀಡಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರ ನಡುವೆ ವೇತನ ತಾರತಮ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಐದಾರು ವರ್ಷಗಳಿಗೊಮ್ಮೆ ವೇತನ ಆಯೋಗವನ್ನು ರಚನೆ ಮಾಡಿ ವೇತನ ಪರಿಷ್ಕರಣೆ ಮಾಡುತ್ತಿದೆ. 2018ರಲ್ಲಿ ಅನುಷ್ಠಾನಕ್ಕೆ ಬಂದು ಆರನೇ ವೇತನ ಆಯೋಗ ಪ್ರಸ್ತುತ ಜಾರಿಯಲ್ಲಿದೆ.

ಕೇಂದ್ರ ಸರ್ಕಾರದಲ್ಲಿ ಏಳನೇ ವೇತನ ಆಯೋಗ ಜಾರಿಯಲ್ಲಿದೆ. ರಾಜ್ಯ ಸರ್ಕಾರ ತನ್ನ ಆರ್ಥಿಕ ಇತಿಮಿತಿಗಳಲ್ಲಿ ನೌಕರರ ಅನುಕೂಲಕ್ಕಾಗಿ ಏಳನೇ ವೇತನ ಆಯೋಗ ರಚನೆ ಮಾಡಲು ಬಜೆಟ್‌ನಲ್ಲಿ ಕ್ರಮ ಕೈಗೊಳ್ಳಲಿದೆ ಎಂದು ಭರವಸೆ ನೀಡಿದರು.

ರಾಜ್ಯ ಸರ್ಕಾರಿ ನೌಕರರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಕೋವಿಡ್‌ನಂತಹ ಸಂಕಷ್ಟ ಸಂದರ್ಭದಲ್ಲಿ ಅವರ ಕರ್ತವ್ಯ ನಿರ್ವಹಣೆ ಶ್ಲಾಘನೀಯ. ಒಬ್ಬೊಬ್ಬರು ಎರಡು ಮೂರು ಹುದ್ದೆಗಳನ್ನು ನಿಭಾಯಿಸಿದ್ದಾರೆ.

ಸರ್ಕಾರದಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ನಮ್ಮ ಸರ್ಕಾರ ಕ್ರಮ ಕೈಗೊಂಡಿದೆ. ಕೋವಿಡ್‌ನಿಂದಾಗಿ ನೇಮಕಾತಿಗೆ ನಿರ್ಬಂಧಗಳನ್ನು ವಿಧಿಸಲಾಗಿತ್ತು. ಹಂತ ಹಂತವಾಗಿ ಅದನ್ನು ಸಡಿಲಗೊಳಿಸುತ್ತಿದ್ದೇವೆ. ಅಗತ್ಯ ಇರುವ ಕಡೆ ನೇಮಕಾತಿಗಳಿಗೆ ಅವಕಾಶ ನೀಡುತ್ತಿದ್ದು, ಹೊಸ ಹುದ್ದೆಗಳ ಸೃಷ್ಟಿ ಪ್ರಕ್ರಿಯೆಯೂ ನಡೆಯುತ್ತಿದೆ ಎಂದರು. (2ನೇ ಪುಟಕ್ಕೆ)

## ಹರಪನಹಳ್ಳಿ ಪಟ್ಟಣ ಅಭಿವೃದ್ಧಿಗೆ 8.50 ಕೋಟಿ ಮಂಜೂರು

**ಪುರಸಭೆ ಸಾಮಾನ್ಯ ಸಭೆಯಲ್ಲಿ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್**

ಹರಪನಹಳ್ಳಿ, ಫೆ. 17- ಮುಖ್ಯಮಂತ್ರಿ ನಗರೋತ್ಥಾನ ಯೋಜನೆಯ 4ನೇ ಹಂತದಲ್ಲಿ ಹರಪನಹಳ್ಳಿ ಪಟ್ಟಣದ ಸಮಗ್ರ ಅಭಿವೃದ್ಧಿಗೆ 8.50 ಕೋಟಿ ರೂ. ಮಂಜೂರಾಗಿದೆ ಎಂದು ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಹೇಳಿದರು.

ಪಟ್ಟಣದ ಪುರಸಭೆಯ ಸಾಮಾನ್ಯ ಸಭೆಯಲ್ಲಿ ಈ ವಿಷಯ ತಿಳಿಸಿದ ಅವರು, ಪುರಸಭೆಯ ಹೊಸ ಕಛೇರಿ ನಿರ್ಮಾಣಕ್ಕೆ 3 ಕೋಟಿ ರೂ., ಸುಸಜ್ಜಿತ ಗ್ರಂಥಾಲಯ ಸ್ಥಾಪನೆಗೆ 62 ಲಕ್ಷ ರೂ., ಪ್ರವಾಸಿ ಮಂದಿರ ವೃತ್ತದ ಅಭಿವೃದ್ಧಿಗೆ 1 ಕೋಟಿ ರೂ., ಉಳಿದಂತೆ ಪಟ್ಟಣದ ವಿವಿಧ ಅಭಿವೃದ್ಧಿಗೆ ಆ ಹಣ ಬಳಸಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಹರಪನಹಳ್ಳಿ ಪಟ್ಟಣದ ಮೂರು ಕೆರೆಗಳ ಅಭಿವೃದ್ಧಿಗೆ ಯೋಜನಾ ವರದಿ ಸಿದ್ಧತೆ ಮಾಡಿಕೊಳ್ಳುತ್ತಾ ಇದ್ದೇವೆ. ಹಿರೇಕೆರೆ, ಅಯ್ಯನಕೆರೆ, ನಾಯಕನಕೆರೆ ಈ ಮೂರೂ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯಿಂದ ಪುರಸಭೆಗೆ ಹಸ್ತಾಂತರ ಮಾಡಿಕೊಳ್ಳಲಾಗುವುದು ಎಂದು ಮುಖ್ಯಾಧಿಕಾರಿ ಮತ್ತು ಅಧ್ಯಕ್ಷರು ತಿಳಿಸಿದರು.

ಹರಪನಹಳ್ಳಿ ಪಟ್ಟಣದ ಹೊರ ವಲಯದಲ್ಲಿರುವ ಸ್ವಾಗತ ಫಲಕದಲ್ಲಿ ವಿದ್ಯಾಸಿರಿ ನಾಡಿಗೆ ಸ್ವಾಗತ ಎಂದು ಬರೆಸಲು ಪುರಸಭಾ ಮುಖ್ಯಾಧಿಕಾರಿ ಶಿವಕುಮಾರ್ ಹಾಗೂ ಅಧ್ಯಕ್ಷ ಮಂಜುನಾಥ ಇಜಂತಕರ್ ಅವರು ಈ ವಿಚಾರವನ್ನು ಸಭೆಯಲ್ಲಿ ಪ್ರಸ್ತಾಪಿಸಿದರು. ಮುಖ್ಯಾಧಿಕಾರಿ ಶಿವಕುಮಾರ್ ಅವರು ಹರಪನಹಳ್ಳಿ ಪಟ್ಟಣದಲ್ಲಿ ಸಾಕಷ್ಟು ವಿವಿಧ ಶಿಕ್ಷಣ ಸಂಸ್ಥೆಗಳು ಇವೆ. ಆದ್ದರಿಂದ ವಿದ್ಯಾಸಿರಿ ನಾಡು ಎಂದು ಸ್ವಾಗತ ಫಲಕದಲ್ಲಿ ಬರೆಸೋಣ ಎಂದು ಹೇಳಿದರು.

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖಾ ವತಿಯಿಂದ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಕುರಿತು ಎನ್‌ಓಸಿ ತಗೆದುಕೊಳ್ಳಬೇಕು ಎಂದು ಆಕ್ಷೇಪ ವ್ಯಕ್ತಪಡಿಸಿ, ಜಿಲ್ಲಾಧಿಕಾರಿಯವರಿಗೆ ಲಿಖಿತ ದೂರು ನೀಡಿರುವ ಸದಸ್ಯ ಜಾಕೀರ್ ಹಾಗು ಇತರೆ ನಾಲ್ವರ ವಿರುದ್ಧ ಅಧ್ಯಕ್ಷ ಮಂಜುನಾಥ ಇಜಂತಕರ್, ವಿನಯಕುಮಾರ, ಕಿರಣ್ ಶಾನಭೋಗ್, ಟಿ. ವೆಂಕಟೇಶ್, ಅಬ್ದುಲ್ ರಹಿಮಾನ್, ಎಂ. ವಿ. ಅಂಜಿನಪ್ಪ, ಉದ್ದಾರ ಗಣೇಶ್, ಜಾವೇದ್ ಇತರರು ಕಾನೂನು ರೀತಿ ನಿಯಮಾನುಸಾರ ಕ್ರಮ ಕೈಗೊಳ್ಳಿ ಎಂದು ಹೇಳಿದ್ದೇವೆ ಎಂದು (2ನೇ ಪುಟಕ್ಕೆ)

# ಹರಪನಹಳ್ಳಿ : 8.50 ಕೋಟಿ ಮಂಜೂರು



**(1ನೇ ಪುಟದಿಂದ)** ಆಕ್ರೋಶ ವ್ಯಕ್ತಪಡಿಸಿದರು.

ಆಗ ಜಾಕೀರ್ ಎನ್‌ಓಸಿ ತೆಗೆದುಕೊಂಡು ಡೋರ್ ನಂಬರ್ ಕೊಡಿ ಎಂದು ಹೇಳಿದ್ದೇನೆಯೇ ಹೊರತು, ದುರ್ನಡತೆ ಪ್ರದರ್ಶಿಸಿಲ್ಲ ಎಂದು ಪ್ರತಿಪಾದಿಸಿದರು.

ಈ ವಿಚಾರ ಕುರಿತು ಸ್ವಲ್ಪ ಹೊತ್ತು ವಾಗ್ವಾದ ನಡೆದು ನಂತರ ಸುಮ್ಮನೆ ದೂರು ನೀಡಿರುವ ಸದಸ್ಯರ ವಿರುದ್ಧ ಕ್ರಮ ಜರುಗಿಸುವುದಾಗಿ ಅಧ್ಯಕ್ಷ ಮಂಜುನಾಥ ಇಜಂತಕರ್ ಹೇಳಿದಾಗ, ಆ ಚರ್ಚೆ ಅಂತ್ಯಗೊಂಡಿತು.

ಪಟ್ಟಣದ ಪ್ರತಿ ವಾರ್ಡ್‌ಗಳಿಗೆ ನಾಮಫಲಕಗಳನ್ನು ಹಾಕಲು ಸಾಕಷ್ಟು ಬಾರಿ ಮನವಿ ಮಾಡಿದರೂ ಕ್ರಮ ಕೈಗೊಂಡಿಲ್ಲ ಎಂದು ಅಶೋಕ ಅಸಮಾಧನ ವ್ಯಕ್ತಪಡಿಸಿದರು.

**ಸಿಎ ಸೈಟ್ ಮಂಜೂರಿಗೆ ಅನುಮೋದನೆ :** ತಾಲ್ಲೂಕು ಉಪ್ಪಾರ ಸಂಘ, ಗಂಗಾಮತ ಸಂಘ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಗಳಿಗೆ ಸಮುದಾಯ ಭವನ, ಕಛೇರಿ ಕಟ್ಟಡ, ವಸತಿ ನಿಲಯಗಳನ್ನು ನಿರ್ಮಿಸಿಕೊಳ್ಳಲು ನಾಗರಿಕ ಸೌಲಭ್ಯಕ್ಕಾಗಿ (ಸಿಎ) ಕಾಯ್ದಿರಿಸಿದ ನಿವೇಶನಗಳನ್ನು ಮಂಜೂರು ಮಾಡಲು ತೀರ್ಮಾನಿಸಲಾಯಿತು.

ಉಪಾಧ್ಯಕ್ಷೆ ನಿಟ್ಟೂರು ಭೀಮವ್ವ ಸಣ್ಣ ಹಾಲಪ್ಪ, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ, ಕಿರಿಯ ಆರೋಗ್ಯ ನಿರೀಕ್ಷಕಿ ಶೋಭ ಉಪಸ್ಥಿತರಿದ್ದರು.

# ಇಷ್ಟಲಿಂಗ ಪೂಜೆಯಿಂದ ಅಂತರಂಗ-ಬಹಿರಂಗ ಶುದ್ಧಿ

## ರಾಂಪುರದಲ್ಲಿನ ಶಿವದೀಕ್ಷೆ ಕಾರ್ಯಕ್ರಮದಲ್ಲಿ ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಸಾಸ್ವೆಹಳ್ಳಿ, ಫೆ.17- ಪ್ರತಿಯೊಬ್ಬರೂ ಇಷ್ಟ ಲಿಂಗ ಪೂಜೆ ಮಾಡುವ ಮೂಲಕ ಅಂತರಂಗ ಹಾಗೂ ಬಹಿರಂಗವನ್ನು ಶುದ್ಧವಾಗಿಟ್ಟುಕೊಳ್ಳಬೇಕು ಎಂದು ಕೋಣಂದೂರು ಶ್ರೀ ಶಿವಲಿಂಗೇಶ್ವರ ಬೃಹನ್ಮಠದ ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ರಾಂಪುರ ಕ್ಷೇತ್ರದ ಶ್ರೀ ಹಾಲಸ್ವಾಮೀಜಿ ಮಹಾರಥೋತ್ಸವದ ಅಂಗವಾಗಿ ಬುಧವಾರ ಬೆಳಿಗ್ಗೆ ಶ್ರೀ ಹಾಲಸ್ವಾಮೀಜಿಯ ವರ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ ಹಾಗೂ ಉಚಿತ ಶಿವದೀಕ್ಷೆ, ಜಗದ್ಗುರು ಪಂಚಾ ಚಾರ್ಯರ ಧ್ವಜಾರೋಹಣ, ಮಹಾ ರಥೋತ್ಸವದ ಕಂಕಣಧಾರಣೆ ಕಾರ್ಯಕ್ರಮ ದಲ್ಲಿ ಜಂಗಮ ವಟುಗಳಿಗೆ ಮಂತ್ರೋಪದೇಶ ನೀಡಿ ಅವರು ಆಶೀರ್ವಚನ ನೀಡಿದರು.

ಪ್ರಪಂಚದಲ್ಲಿ ಶಿವದೀಕ್ಷೆಗಿಂತ ದೊಡ್ಡ ದೀಕ್ಷೆ ಬೇರೊಂದಿಲ್ಲ. ಶಿವದೀಕ್ಷೆ ತೆಗೆದುಕೊಂಡವರಿಗೆ



ಲೌಕಿಕ ಬದುಕಿನಲ್ಲೂ ದೈವೀ ಗುಣ ಹೆಚ್ಚಾಗಲಿದೆ. ರುದ್ರಾಕ್ಷಿ ಮಾಲೆಯೊಂದಿಗೆ ಲಕ್ಷಾಂತರ ವರ್ಷದ ಹಿಂದೆಯೂ ಇಷ್ಟ ಲಿಂಗ ಪೂಜೆ ಮಾಡಲಾಗುತ್ತಿತ್ತು. ಶಿವದೀಕ್ಷೆ ಪಡೆದವರು ಮನಸ್ಸನ್ನು ಕೇಂದ್ರೀಕೃತ ಮಾಡಿಕೊಂಡು ಪಂಚಾಕ್ಷರಿ ಮಂತ್ರವನ್ನು ಪ್ರತಿನಿತ್ಯ ಹೇಳುತ್ತಾ ಬಂದರೆ, ಮನಸ್ಸಿನಲ್ಲಿ ಆತ್ಮವಿಶ್ವಾಸ ಬೆಳೆಯಲಿದೆ. ರುದ್ರಾಕ್ಷಿ ಮಾಲೆ ಧರಿಸುವುದರಿಂದ ಆಯುರ್ವೇದದ ಪ್ರಕಾರ ಆರೋಗ್ಯವೂ ವೃದ್ಧಿಯಾಗಲಿದೆ, ಆಯಸ್ಸು ಜಾಸ್ತಿಯಾಗಲಿದೆ. ಎಲ್ಲಾ ವರ್ಗದವರು ಸಹ ಶಿವದೀಕ್ಷೆ ಪಡೆಯಬಹುದಾಗಿದೆ ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀ ಹಾಲಸ್ವಾಮೀಜಿ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಮಾತನಾಡಿ, ಹಿಂದೂ ಧರ್ಮವು ಮಾನವೀಯತೆಯ ನೆಲೆಗಟ್ಟಿನ ಮೇಲೆ ನಿಂತಿದೆ. ರಾಷ್ಟ್ರಕವಿ ಕುವೆಂಪು ಹೇಳಿದಂತೆ ಸರ್ವ ಜನಾಂಗದ ಶಾಂತಿಯ ತೋಟ ಎಂಬುದು ಎಲ್ಲಾ ಧರ್ಮಗಳಂತೆ ಹಿಂದೂ ಧರ್ಮದ ಮುಖ್ಯ ತಿರುಳಾಗಿದೆ ಎಂದರು.

ಈ ಸಂದರ್ಭದಲ್ಲಿ ಹೊನ್ನಾಳಿಯ ಎಂ. ಎಸ್.ಶಾಸ್ತ್ರಿ ಹೊಳೆಮಠ್, ಪ್ರಕಾಶಯ್ಯ, ಚೀಲೂರು ಮಠದ ವಿಶ್ವನಾಥಯ್ಯ, ಕಿರಣಶಾಸ್ತ್ರಿ, ರೇಣುಕಯ್ಯ ಶಾಸ್ತ್ರಿ ಕ್ಯಾಸಿನಕೆರೆ, ಚಂದ್ರ ಶೇಖರಯ್ಯ ಶಾಸ್ತ್ರಿ ಸೋಗಿ, ಗಂಗಾಧರಯ್ಯಶಾಸ್ತ್ರಿ ಅಶೋಕನಗರ ಸೇರಿದಂತೆ ಇತರರು ಇದ್ದರು.

# ನಗರದಲ್ಲಿ ನಾಳೆ ಶ್ರೀ ಶಿವ ಛತ್ರಪತಿ ಶಿವಾಜಿ ಜಯಂತಿ : ಮೆರವಣಿಗೆ ರದ್ದು



ದಾವಣಗೆರೆ,ಫೆ.17- ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ 395ನೇ ಜಯಂತ್ಯೋತ್ಸವವನ್ನು ನಾಡಿದ್ದು ದಿನಾಂಕ 19ರ ಶನಿವಾರ ನಗರದ ಡಿ. ದೇವರಾಜ ಅರಸು ಬಡಾವಣೆ ಬಿ ಬ್ಲಾಕ್‌ನಲ್ಲಿರುವ ಶ್ರೀ ಕೃಷ್ಣ ಭವಾನಿ (ಅಂಬಾ ಭವಾನಿ) ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಮುಂಜಾನೆ 6 ಗಂಟೆಗೆ ಶ್ರೀ ಕೃಷ್ಣಬಾಯಿ ಅಮ್ಮನವರ ದೇವಸ್ಥಾನದ ಆವರಣದಲ್ಲಿ ಶ್ರೀ ಪಾತಾಳ ಲಿಂಗೇಶ್ವರ ಸ್ವಾಮಿ ಮತ್ತು ಶ್ರೀ ಕೃಷ್ಣಬಾಯಿ ಅಮ್ಮನವರಿಗೆ ಅಭಿಷೇಕ, ಅರ್ಚನೆ, ಬನ್ನಿ ಮಹಾಂಕಾಳಿ ಪೂಜೆ, ಬೆಳಿಗ್ಗೆ 6.30ಕ್ಕೆ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ, ಬೆಳಿಗ್ಗೆ 8 ಗಂಟೆಗೆ ತೊಟ್ಟಿಲು ಪೂಜೆ, ಬೆಳಿಗ್ಗೆ 11 ಗಂಟೆಗೆ ಕೃಷ್ಣಭವಾನಿ ಕಲ್ಯಾಣ ಮಂಟಪದಲ್ಲಿ ಸಭಾ ಕಾರ್ಯಕ್ರಮಗಳು ಏರ್ಪಾಡಾಗಿವೆ.

ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಈ ಎಲ್ಲಾ ಕಾರ್ಯಕ್ರಮಗಳು ನಡೆಯಲಿದ್ದು, ಶ್ರೀ ಬಸವ ಪ್ರಭು ಸ್ವಾಮೀಜಿ ದಿವ್ಯ ಸಾನ್ನಿಧ್ಯ ಮತ್ತು ಸಮಾಜದ ಅಧ್ಯಕ್ಷ ಡಿ.ಮಾಲತೇಶರಾವ್ ಜಾಧವ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಗೌರವಾಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದ್ದಾರೆ.

ಅದೇ ದಿನ ಸಂಜೆ 5 ಗಂಟೆಗೆ ನಡೆಸಲುದ್ದೇಶಿಸಿದ್ದ ಛತ್ರಪತಿ ಶಿವಾಜಿ ಮಹಾ ರಾಜರ ಮೆರವಣಿಗೆಯನ್ನು ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಯನ್ವಯ ರದ್ದುಪಡಿಸಲಾಗಿದೆ ಎಂದು ಕಾರ್ಯದರ್ಶಿ ಜಿ. ಯಲ್ಲಪ್ಪ ಡಮಾಳೆ, ಖಜಾಂಚಿ ಎಂ. ಗೋಪಾಲರಾವ್ ಮಾನೆ ವಿವರಿಸಿದ್ದಾರೆ.

# ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಇಂದು

ದಾವಣಗೆರೆಯ ಕೊಂಡಜ್ಜಿ ರಸ್ತೆಯಲ್ಲಿರುವ ಶಿಬಾರ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 21 ರವರೆಗೆ ಭರತ ಹುಣ್ಣಿಮೆ ಅಂಗವಾಗಿ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಇಂದು ಬೆಳಿಗ್ಗೆ ಪಂಚಾಮೃತ ಅಭಿಷೇಕ, ತ್ರಿಶೂಲ ಪೂಜೆ, ಹೂವಿನ ಅಲಂಕಾರ, ಸಂಜೆ 5-30 ಕ್ಕೆ ಮೈಲಾರದಲ್ಲಿ ಕಾರಣಿಕೋತ್ಸವ ರಾತ್ರಿ ಅಖಂಡ ಭಜನೆ ಇರಲಿದೆ.

# ಜಲಸಿರಿ ದರ ನಿಗದಿಗೆ ಸಮಿತಿ ರಚನೆ

**(1ನೇ ಪುಟದಿಂದ)** ಈ ಸಮಸ್ಯೆಗಳ ಬಗ್ಗೆ ಒತ್ತು ನೀಡಿ ಸರಿಪಡಿಸುವಂತೆ ಸೂಚಿಸಿದರು.

ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಮಾತನಾಡಿ, 2018ರಲ್ಲಿ ಯೋಜನೆಗೆ ವರ್ಕ್ ಆರ್ಡರ್ ನೀಡಲಾಯಿತು. 31.1.2022ಕ್ಕೆ ಮುಕ್ತಾಯವಾಗಬೇಕಾಗಿತ್ತು. ಆದರೆ ಕೊರೊನಾ ಹಿನ್ನೆಲೆಯಲ್ಲಿ ಕೂಲಿ ಕಾರ್ಮಿಕರ ಕೊರತೆ ಉಂಟಾಗಿದ್ದರಿಂದ ತಡವಾಯಿತು. ಶೇ.30ರಷ್ಟು ಕಾರ್ಯ ಬಾಕಿ ಇದ್ದು, 2023ರ ಜನವರಿ ವರೆಗೆ ಕೆಲಸ ಮುಗಿಸಲು ಅವಧಿ ವಿಸ್ತರಿಸಲಾಗಿದೆ. ಅಷ್ಟರೊಳಗೆ ನೀರು ಪೂರೈಕೆ ಮಾಡಲಾಗುವುದು ಎಂದು ಹೇಳಿದರು.

ಎ.ನಾಗರಾಜ್, ಯೋಜನೆಯಲ್ಲಿ ಅಕ್ರಮ ನಲ್ಲಿಗಳನ್ನು ಸಕ್ರಮಗೊಳಿಸಲು ಅವಕಾಶವಿದೆಯೇ? ಎಂದು ಪ್ರಶ್ನಿಸಿದಾಗ, ಉತ್ತರಿಸಿದ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಅಧಿಕಾರಿ ಎಸ್.ಸುಬ್ರಹ್ಮಣ್ಯ, ಜಲಸಿರಿ ಯೋಜನೆಯಲ್ಲಿ ಸಿವಿಲ್ ಕೆಲಸ ಒಂದೆಡೆಯಾದರೆ, ಯೋಜನೆ ಸುಧಾರಣೆಗಾಗಿ ಏಳು ಆದೇಶಗಳನ್ನು ನೀಡಿದೆ. ಅದರಲ್ಲಿ ಅಕ್ರಮ ನಲ್ಲಿಗಳನ್ನು ಸಕ್ರಮ ಮಾಡುವ ಕ್ರಮವೂ ಒಂದಾಗಿದೆ ಎಂದು ಹೇಳಿದರು.

ನಲ್ಲಿಗಳನ್ನು ಸಕ್ರಮಗೊಳಿಸಲು ಪಾಲಿಕೆ ವ್ಯಾಪ್ತಿಯ ಎಲ್ಲಾ ನಲ್ಲಿಗಳ ವಿವರಗಳನ್ನು ದಾಖಲಿಸಿ, ಕಂಪ್ಯೂಟರೀಕರಣಗಳಿಸಬೇಕಿದೆ ಎಂದರು.

ಪ್ರಸ್ತುತ 97 ಸಾವಿರ ನಲ್ಲಿ ಸಂಪರ್ಕವಿದ್ದು, 47 ಸಾವಿರ ಸಂಪರ್ಕಗಳಿಂದ ಮಾತ್ರ 16 ಕೋಟಿ ರೂ. ತೆರಿಗೆ ವಸೂಲಿ ಮಾಡಲಾಗಿದೆ. 2011ರಿಂದ ಇಲ್ಲಿಯವರೆಗೆ ಶೇ.10ರಷ್ಟು ಸಂಪರ್ಕಗಳು ಹೆಚ್ಚಾಗಿವೆ ಎಂದು ಅಂದಾಜಿಸಿದರೂ, 1.10 ಲಕ್ಷ ಮನೆಗಳಿಗೆ ಅಧಿಕೃತ ನಲ್ಲಿ ಸಂಪರ್ಕ ಕಲ್ಪಿಸಬಹುದು. ಇದರಿಂದ ತೆರಿಗೆ ವಸೂಲು ಮಾಡಿದರೆ ಕಾರ್ಯಾಚರಣೆ ಹಾಗೂ ನಿರ್ವಹಣೆ ವೆಚ್ಚವನ್ನು ಸುಲಭವಾಗಿ ಭರಿಸಿ, ನೀರು ಸರಬರಾಜು ಮಾಡಬಹುದಾಗಿದೆ ಎಂದು ಅಭಿಪ್ರಾಯಿಸಿದರು.

ನಲ್ಲಿ ಸಂಪರ್ಕವನ್ನು ಸಕ್ರಮಗೊಳಿಸುವ ಸಂಬಂಧ ನಾಗರಿಕರಿಗೆ ಹೊರೆಯಾಗದಂತೆ, ಕನಿಷ್ಠ ದರ ನಿಗದಿಪಡಿಸುವ ಅಧಿಕಾರವನ್ನು ಸರ್ಕಾರವು ಪಾಲಿಕೆಗೆ ನೀಡಿದೆ. ಗೃಹ, ಗೃಹೇತರ, ವಾಣಿಜ್ಯ ಹಾಗೂ ಕೈಗಾರಿಕೆಗೆ ಸಂಬಂಧಿಸಿದಂತೆ ನೀರಿನ ಬಳಕೆಗೆ ಪ್ರತ್ಯೇಕ ದರ ವಿಧಿಸಲಾಗುತ್ತದೆ. ಪ್ರತಿ ಮೂರು ವರ್ಷಗಳಿಗೊಮ್ಮೆ ದರ ಪರಿಷ್ಕರಿಸಿ,ಅನುಷ್ಠಾನಗೊಳಿಸಬೇಕಿದೆ ಎಂದರು.

ದರ ನಿರ್ಧಾರಕ್ಕೆ ಸಂಬಂಧಿಸಿದಂತೆ ಸಮಿತಿ ರಚಿಸಬೇಕು. ತಂಡವು ಬೇರೆ ನಗರಗಳಿಗೆ ತೆರಳಿ ಅಧ್ಯಯನ ಮಾಡಲಿ. ನಂತರ ಚರ್ಚಿಸಿ, ದರ ನಿಗದಿ ಪಡಿಸುವಂತೆ ಸದಸ್ಯ ಪ್ರಸನ್ನಕುಮಾರ್ ಸಲಹೆ ನೀಡಿದರು.

ಜನರು ಹೆಚ್ಚಾಗಿರುವ ಸಾರ್ವಜನಿಕ ಸ್ಥಳದಲ್ಲಿನ ನಲ್ಲಿಗಳಿಗೂ ಕಡ್ಡಾಯವಾಗಿ ಮೀಟರ್ ಅಳವಡಿಸಬೇಕಿದೆ. ಅದರ ಹಣವನ್ನು ಸ್ಥಳೀಯ ಸಂಸ್ಥೆಗಳೇ ಭರಿಸಬೇಕು. ತೀರಾ ಹಿಂದುಳಿದ ಅಥವಾ ಸ್ಲಂ ಪ್ರದೇಶಗಳನ್ನು ಆಯ್ಕೆ ಮಾಡಿ ಎಸ್ಸಿ-ಎಸ್ಟಿಗಾಗಿ ಮೀಸಲಿಡುವ ಅನುದಾನವನ್ನು ಬಳಕೆ ಮಾಡಿಕೊಳ್ಳಬಹುದು ಎಂದರು.

ಕೆಲ ತಿಂಗಳು ಟ್ರಯಲ್ ಅಂಡ್ ರನ್ ನಡೆಸುವಾಗ ಸಮಿತಿ ರಚಿಸಿ, ದಾಖಲೆ ಸಂಗ್ರಹಿಸಿದರೆ ಯೋಜನೆ ಪರಿಣಾಮಕಾರಿ ಅನುಷ್ಠಾನ ಸಾಧ್ಯ ಎಂದು ಸುಬ್ರಮಣ್ಯ ಸಲಹೆ ನೀಡಿದರು. ಅಂತಿಮವಾಗಿ ಸಮಿತಿ ರಚನೆಗೆ ನಿರ್ಧರಿಸಲಾಯಿತು.

ಸಭೆಯಲ್ಲಿ ಉಪ ಮೇಯರ್ ಶಿಲ್ಪ ಜಯಪ್ರಕಾಶ್, ಆಯುಕ್ತ ವಿಶ್ವನಾಥ ಮುದಜ್ಜಿ, ವಿವಿಧ ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಎಲ್.ಡಿ. ಗೋಣೆಪ್ಪ, ರೇಣುಕಾ ಶ್ರೀನಿವಾಸ್, ಗೀತಾ ದಿಳ್ಯಪ್ಪ, ಉಮಾ ಪ್ರಕಾಶ್ ಸೇರಿದಂತೆ ಸದಸ್ಯರು ಉಪಸ್ಥಿತರಿದ್ದರು.

## ಶ್ರೀರಾಮನಗರಕ್ಕೆ ತೆರಳುವ ರಸ್ತೆ ವಿವಾದ ಅಂತ್ಯ

ಹಲವಾರು ವರ್ಷಗಳಿಂದ ನಗರದಿಂದ ಶ್ರೀರಾಮ ನಗರಕ್ಕೆ ತೆರಳಲು ರಸ್ತೆ ಮಾರ್ಗವಿಲ್ಲದೆ ಎದುರಿಸುತ್ತಿದ್ದ ಸಮಸ್ಯೆಗೆ ಇದೀಗ ಪಾಲಿಕೆ ಅಂತ್ಯ ಹಾಡಿದೆ.

ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.41ರ ಆವರಗೆರೆ ವಿಭಾಗದ ಬುದ್ಧ ಬಸವ ಭೀಮ ನಗರದ ರಿ.ಸ.ನಂ. 213ರಲ್ಲಿ ಸಾರ್ವಜನಿಕ ರಸ್ತೆ ಅಭಿವೃದ್ಧಿಗೆ ಇಂದಿನ ತುರ್ತು ಸಭೆಯಲ್ಲಿ ಒಪ್ಪಿಗೆ ದೊರೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮೇಯರ್ ವೀರೇಶ್, ಲೋಕಿಕೆರೆ ರಸ್ತೆಯಿಂದ ಶ್ರೀರಾಮನಗರದ ಕಡೆ ಸಾಗಲು ಅರ್ಧ ಕಿ. ಮೀ.ನಷ್ಟು ರಸ್ತೆ ಇರಲಿಲ್ಲ. ಸಿಟಿ ಬಸ್‌ಗಳು ಎಸ್.ಎಸ್. ಹೈಟೆಕ್ ಆಸ್ಪತ್ರೆ ಮಾರ್ಗದಲ್ಲಿ ಮಾತ್ರ ಸಂಚರಿಸುತ್ತಿದ್ದವು. ಆಪೇ ಆಟೋಗಳಲ್ಲಿ ಹಲವಾರು ಜನರನ್ನು ತುಂಬಿಕೊಂಡು ಸಂಚರಿಸುತ್ತಿದ್ದರಿಂದ ಅಪಘಾತಗಳು ಹೆಚ್ಚಾಗುತ್ತಿದ್ದವು.

ಇದೀಗ ರಸ್ತೆಗಾಗಿ ನಾಗಭೂಷಣ್ ಅವರು ತಮಗೆ ಸೇರಿದ ಜಾಗವನ್ನು ನೀಡಲು ಒಪ್ಪಿಗೆ ನೀಡಿದ್ದಾರೆ. ಅದರ ಬದಲಿಗೆ ಪಾಲಿಕೆಗೆ ಸೇರಿದ ಜಾಗವನ್ನು ಬಿಟ್ಟು ಕೊಡಲು ತೀರ್ಮಾನಿಸ ಲಾಗಿದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈ ಬಗ್ಗೆ ಸಭೆಗಳು ನಡೆಸಲಾಗಿತ್ತು ಎಂದು ಹೇಳಿದರು.

ವಿಪಕ್ಷ ನಾಯಕ ಎ. ನಾಗರಾಜ್ ಸಾರ್ವಜನಿಕರಿಗೆ ಒಳಿತಾಗುವ ಕೆಲಸಕ್ಕೆ ನಮ್ಮ ಅಭ್ಯಂತರ ಇಲ್ಲ ಎಂದು ಒಪ್ಪಿಗೆ ಸೂಚಿಸಿದರು.

# ವೇತನ ಪರಿಷ್ಕರಣೆಗೆ 7ನೇ ವೇತನ ಆಯೋಗ

**(1ನೇ ಪುಟದಿಂದ)** ಹಲವು ವರ್ಷಗಳ ಬಳಿಕ 15 ಸಾವಿರ ಶಿಕ್ಷಕರ ನೇಮಕಕ್ಕೆ ಚಾಲನೆ ನೀಡಲಾಗಿದೆ. 16 ಸಾವಿರ ಪೊಲೀಸ್ ಹುದ್ದೆಗಳ ನೇಮಕಾತಿ ನಡೆಯುತ್ತಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ 14 ಸಾವಿರ ಹುದ್ದೆಗಳ ನೇಮಕಾತಿಗೆ ಆದೇಶ ನೀಡಲಾಗಿದೆ ಎಂದು ವಿವರಿಸಿದರು.

ಬಹುಕೋಟಿ ಐಎಂಎ ಹಗರಣದಲ್ಲಿ ಆರೋಪಿಗಳಾಗಿರುವ ಐಪಿಎಸ್ ಅಧಿಕಾರಿಗಳ ವಿರುದ್ಧವೂ ಮುಲ್ಲಾಜಿಲ್ಲದೆ ಕ್ರಮ ಜರುಗಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಇದೇ ಸಂದರ್ಭದಲ್ಲಿ ತಿಳಿಸಿದರು.

ಎನ್.ರವಿಕುಮಾರ್ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಮುಖ್ಯಮಂತ್ರಿ, ಹಗರಣದಲ್ಲಿ ಇಬ್ಬರು ಐಪಿಎಸ್ ಅಧಿಕಾರಿಗಳು ಭಾಗಿಯಾಗಿದ್ದಾರೆ. ಅವರ ವಿರುದ್ಧ ಅಭಿಯೋಜನೆಗೆ ಸಿಬಿಐ 2021ರ ಡಿಸೆಂಬರ್ 18ರಂದು ಅನುಮತಿ ಕೇಳಿತ್ತು. ಇಬ್ಬರ ವಿರುದ್ಧ ಅಭಿಯೋಜನೆಗೆ ಅದೇ ವರ್ಷ ಸೆಪ್ಟೆಂಬರ್ 9ರಂದು ರಾಜ್ಯ ಸರ್ಕಾರ ಅನುಮತಿ ನೀಡಿದೆ. ಸದರಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿದೆ ಎಂದರು.

ಆರೋಪಿ ಸ್ಥಾನದಲ್ಲಿರುವ ಐಪಿಎಸ್ ಅಧಿಕಾರಿ ಹೇಮಂತ್ ನಿಂಬಾಳ್ಕರ್ ಅಭಿಯೋಜನೆಗೆ (ಪ್ರಾಸಿಕ್ಯೂಷನ್) ಸರ್ಕಾರ ನೀಡಿರುವ ಅನುಮತಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಅಲ್ಲಿ ಅನುಮತಿ ವಜಾಗೊಂಡಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ, ಕೆಳಹಂತದ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿದೆ. ಜೊತೆಗೆ ಹೇಮಂತ್ ನಿಂಬಾಳ್ಕರ್ ವಿರುದ್ಧ 2021ರ ಫೆಬ್ರವರಿಯಲ್ಲೇ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

# ಕಡಲೆಕಾಳು ಖರೀದಿ: ಇಂದಿನಿಂದಲೇ ನೋಂದಣಿ



**(1ನೇ ಪುಟದಿಂದ)** ಕಡಲೆಕಾಳು ಖರೀದಿಗೆ ಫೆ. 18 ರಿಂದಲೇ ಜಗಳೂರು ಎಪಿಎಂಸಿ ಆವರಣದಲ್ಲಿ ರೈತರ ನೋಂದಣಿ ಕಾರ್ಯ ಪ್ರಾರಂಭಿಸಬೇಕು. ನೋಂದಣಿಗೂ ಮುನ್ನ ರೈತರು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಮಾಡಿರಬೇಕು.

ಅಲ್ಲದೇ ರೈತರು ಅವಸರ ಮಾಡಿ, ಬೇರೆ ಕಡೆಗೆ ಮಾರಾಟ ಮಾಡಿ ನಷ್ಟ ಅನುಭವಿಸುವುದು ಬೇಡ. ಖರೀದಿ ಕೇಂದ್ರದಲ್ಲಿಯೇ ಮಾರಾಟ ಮಾಡುವಂತೆ ರೈತರಲ್ಲಿ ಜಾಗೃತಿ ಮೂಡಿಸಬೇಕು. ಖರೀದಿಗೆ ಸಂಬಂಧಿಸಿದಂತೆ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಆದೇಶಿಸಿದರು.

ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳಿಯ ಶಾಖಾ ವ್ಯವಸ್ಥಾಪಕ ಶ್ರೀಕಾಂತ್ ಎಸ್. ಅವರು ಮಾಹಿತಿ ನೀಡಿ, ಎಫ್‌ಎಕ್ಯೂ ಗುಣಮಟ್ಟದ ಕಡಲೆಕಾಳಿಗೆ ಪ್ರತಿ ಕ್ವಿಂಟಾಲ್‌ಗೆ ರೂ. 5230 ರೂ. ಬೆಂಬಲ ಬೆಲೆ ನಿಗದಿಪಡಿಸಿದ್ದು, ಮಹಾ ಮಂಡಳಿಯೇ ಜಿಲ್ಲೆಗೆ ಖರೀದಿ ಏಜೆನ್ಸಿಯಾಗಿದೆ.

ಫೆ. 18 ರಿಂದ 45 ದಿನಗಳ ಕಾಲ ರೈತರಿಂದ ನೋಂದಣಿ ಕಾರ್ಯ ನಡೆಯಲಿದ್ದು, ಖರೀದಿಯೂ ಕೂಡ 45 ದಿನಗಳ ಕಾಲ ನಡೆಯಲಿದೆ ಎಂದರು. ಆಹಾರ ಇಲಾಖೆಯ ಜಂಟಿ ನಿರ್ದೇಶಕ ಮಂಟೇಸ್ವಾಮಿ, ಎಪಿಎಂಸಿ ಕಾರ್ಯದರ್ಶಿ ದೊರೆಸ್ವಾಮಿ, ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕ ಜೆ. ಪ್ರಭು ಇತರರು ಹಾಜರಿದ್ದರು.

# ನಗರದಲ್ಲಿ ಇಂದಿನಿಂದ ಕೃಷಿ ಮೇಳ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಯು.ಎಸ್. ಕಮ್ಯುನಿಕೇಶನ್ ಹಾಗೂ ದೇಶಪಾಂಡೆ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ನಗರದಲ್ಲಿ ಪ್ರಥಮ ಬಾರಿಗೆ ಬಾಲಕರ ಸರ್ಕಾರಿ ಪ್ರೌಢಶಾಲೆ ಮೈದಾನದಲ್ಲಿ 'ಕೃಷಿ ಮೇಳ' ನಡೆಯಲಿದೆ.

ಇಂದು ಬೆಳಿಗ್ಗೆ 11.45 ಕ್ಕೆ ಮಹಾಂತೇಶ್ ಬೀಳಗಿ ಕಾರ್ಯಕ್ರಮ ಉದ್ಘಾಟಿಸುವರು. ಡಾ. ವಿಜಯಮಹಾಂತೇಶ್ ಬಿ. ದಾನಮ್ಮನವರ, ಸಿ.ಬಿ. ರಿಷ್ಯಂತ್, ಶ್ರೀನಿವಾಸ ಚಿಂತಾಲ್, ರಾಘವೇಂದ್ರ ಪ್ರಸಾದ್, ವಿಜಯ ಪುರೋಹಿತ, ಈರಣ್ಣ ರೊಟ್ಟಿ, ಎನ್.ಜಿ. ಪುಟ್ಟಸ್ವಾಮಿ, ಶಾಮನೂರು ಹೆಚ್.ಆರ್. ಲಿಂಗರಾಜ್, ಎಸ್.ಕೆ. ಚಂದ್ರಶೇಖರ್ ಭಾಗವಹಿಸಲಿದ್ದಾರೆ.

# ನಕಲಿ ಕಾರ್ಮಿಕರ ನೋಂದಣಿ ತಡೆಗೆ ಸಮಿತಿ

**(1ನೇ ಪುಟದಿಂದ)** ವಿರುದ್ಧ ಕ್ರಮ ಜರುಗಿಸಲಾಗವುದು ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಕಟ್ಟಡ ಕಾರ್ಮಿಕರನ್ನು ನೋಂದಣಿ ಮಾಡಿಕೊಳ್ಳಬೇಕು ಎಂಬ ಸೂಚನೆ ನೀಡಿರುವುದಾಗಿ ತಿಳಿಸಿದರು.

# ಸಮಾನತೆಯ ಸೌಲಭ್ಯ ಸಿಗದಿದ್ದಾಗ ಹೋರಾಟ ಅನಿವಾರ್ಯ

## ಕುಣಿಬೆಳಕೆರೆ: ದೇವಸ್ಥಾನದ ಕಾರ್ಯಕ್ರಮದಲ್ಲಿ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಅಭಿಮತ

ಮಲೇಬೆನ್ನೂರು, ಫೆ. 17- ಸಮಾನತೆಯ ಸೌಲಭ್ಯ ಸಿಗದಿದ್ದಾಗ ಹೋರಾಟ ಅನಿವಾರ್ಯ ಎಂದು ನಿಜ ಶರಣ ಅಂಬಿಗರ ಚೌಡಯ್ಯ ಗುರುಪೀಠದ ಶ್ರೀ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ ಹೇಳಿದರು.

ಕುಣಿಬೆಳಕೆರೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಗಂಗಾ ಪರಮೇಶ್ವರಿ ದೇವಿಯ ದೇವಸ್ಥಾನದಲ್ಲಿ ನೂತನ ವಿಗ್ರಹದ ಪ್ರಾಣ ಪ್ರತಿಷ್ಠಾಪನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಹಿಂದುಳಿದಿರುವ ಗಂಗಾಮತ ಸಮಾಜವನ್ನು ಸಂವಿಧಾನದ ಆಶಯದಂತೆ ಎಸ್ಟಿ ಸೌಲಭ್ಯಕ್ಕೆ ಒಳಪಡಿಸದಿರುವುದು ದುರ್ದೈವದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಯಾವುದೇ ಹಿಂದುಳಿದ ಸಮಾಜ ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯ ವಾಗಿ ಬಲಿಷ್ಠವಾದಾಗ ಮಾತ್ರ ಆ ಸಮಾಜದ ಆರ್ಥಿಕ ಪ್ರಗತಿ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಗಂಗಾಮತ ಸಮಾಜದಲ್ಲಿ ಧಾರ್ಮಿಕ, ಶೈಕ್ಷಣಿಕ ಮತ್ತು ರಾಜಕೀಯ ಕ್ರಾಂತಿ ಆಗಬೇಕೆಂದು ಸ್ವಾಮೀಜಿ ಕರೆ ನೀಡಿದರು.



ಸಮಾರಂಭವನ್ನು ಉದ್ಘಾಟಿಸಿದ ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಈ ಗ್ರಾಮದಲ್ಲಿ ಗಂಗಾಮತ ಸಮಾಜ ಸಣ್ಣ ಸಮಾಜವಾಗಿದ್ದರೂ ಧಾರ್ಮಿಕವಾಗಿ ದೊಡ್ಡ ಸಾಧನೆ ಮಾಡಿದೆ. ನಂಬಿಕೆಗೆ ಮತ್ತೊಂದು ಹೆಸರೇ ಅಂಬಿಗರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಹಿಂದುಳಿದ ಸಮಾಜಗಳ ಸಂಘಟನೆ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಮಠ, ದೇವಸ್ಥಾನಗಳ ಅವಶ್ಯಕತೆ ಇದೆ. ಶ್ರೀಗಳು ಬಹಳ ಜವಾಬ್ದಾರಿ ವಹಿಸಿ ಸಮಾಜದ ಸಂಘಟನೆ ಮತ್ತು ಸಮಾಜಕ್ಕೆ ಸಿಗಬೇಕಾದ ಸೌಲಭ್ಯಗಳ ಕುರಿತು ಸದ್ದಿಲ್ಲದ ಸಾಧನೆ ಮಾಡುತ್ತಿದ್ದಾರೆ ಎಂದರು.

ಗಂಗಾಮತ ಸಮಾಜದ ಜಿಲ್ಲಾಧ್ಯಕ್ಷ ಬಿ.ಕೆ. ಮಂಜುನಾಥ್ ಮಾಗಾನಹಳ್ಳಿ ಮಾತನಾಡಿ, ಈ ಹಿಂದೆ ಹಳ್ಳಿಗಳಲ್ಲಿ ಹನುಮಪ್ಪ, ಬಸವಣ್ಣ ಮತ್ತು ದುರ್ಗಾಂಬಿಕಾ ದೇವಸ್ಥಾನ ಮಾತ್ರ ಇದ್ದವು. ಈಗ ಜಾತಿಗೊಂದು, ಓಣಿಗೊಂದು ದೇವಸ್ಥಾನಗಳಾಗಿ ಸಾಮರಸ್ಯದ ಜೀವನಕ್ಕೆ ಧಕ್ಕೆ ಉಂಟಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾಜದ ಮುಖಂಡ ಮಾಗಾನಹಳ್ಳಿ ಹಾಲಪ್ಪ ಮಾತನಾಡಿ, ಹಳ್ಳಿಗಳಲ್ಲಿರುವ ಗಂಗಾಮತ ಸಮಾಜದವರು ಇತರೆ ಸಮಾಜದವರ ಜೊತೆ ಪ್ರೀತಿ-ವಿಶ್ವಾಸದಿಂದಿರಬೇಕೆಂದು ಕಿವಿಮಾತು ಹೇಳಿದರು.

ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಗೋವಿನಾಳ್ ಬಸವರಾಜಪ್ಪ, ಉದ್ಯಮಿ ಕುಂಬಳೂರು ವಿರೂಪಾಕ್ಷಪ್ಪ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಸಮಾಜದ ಮುಖಂಡರಾದ ಕೆಂಚನಹಳ್ಳಿ ಮಹಾಂತೇಶಪ್ಪ, ಸಾರಥಿ ಹೊನ್ನಪ್ಪ, ಗ್ರಾಮದ ರುದ್ರಪ್ಪ, ನಿವೃತ್ತ ಡಿವೈಎಸ್ಪಿ ಕೆ. ನಾಗರಾಜಪ್ಪ, ಉಪ ತಹಶೀಲ್ದಾರ್ ಆರ್. ರವಿ, ಮಲೇಬೆನ್ನೂರು ಪುರಸಭೆ ಸದಸ್ಯ ಗೌಡ್ರ ಮಂಜಣ್ಣ, ಸಿಪಿಐ ಹನುಮಂತಪ್ಪ ಶಿರಹಳ್ಳಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಗಂಗಾಪರಮೇಶ್ವರಿ ದೇವಸ್ಥಾನ ಸಮಿತಿ ಅಧ್ಯಕ್ಷ ಕೂಲಂಬಿ ಮಹಾದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಕೆ.ಎಂ. ಶಿವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾರುತಿ ಬಾರ್ಕಿ ಸ್ವಾಗತಿಸಿದರು. ಉಪನ್ಯಾಸಕರಾದ ಶ್ರೀಮತಿ ಸುಮತಿ ಜಯ್ಯಪ್ಪ ನಿರೂಪಿಸಿದರು. ಟಿ.ಹೆಚ್. ನಾಗರಾಜ್ ವಂದಿಸಿದರು.

## ಮೆಳ್ಳೇಕಟ್ಟೆ ಗೌಡ್ರ ಚನ್ನಬಸಪ್ಪ ನಿಧನ



**ದಾವಣಗೆರೆ ತಾಲ್ಲೂಕು ಮೆಳ್ಳೇಕಟ್ಟೆ ಗ್ರಾಮದ ವಾಸಿ ಗೌಡ್ರ ದಿ. ಬಸಪ್ಪನವರ ಪುತ್ರರಾದ**

**ಜಿ.ಬಿ. ಚನ್ನಬಸಪ್ಪ**

ಇವರು ದಿನಾಂಕ 17.02.2022ರ ಗುರುವಾರ ರಾತ್ರಿ 8.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 54 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಸಹೋದರರು, ಇಬ್ಬರು ಸಹೋದರಿಯರು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.02.2022ರ ಶುಕ್ರವಾರ ಮಧ್ಯಾಹ್ನ 1.30ಕ್ಕೆ ಮೃತರ ಸ್ವಗ್ರಾಮ ದಾವಣಗೆರೆ ತಾಲ್ಲೂಕು ಮೆಳ್ಳೇಕಟ್ಟೆ ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ: **98450 38619, 97380 24705**

## ಹಳೇಬಾತಿ ಕೆಂಗೋಳ ಹೋಟೆಲ್ ಗದಿಗೆಮ್ಮ ನಿಧನ



ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ ದಿ. ಕೆಂಗೋಳ ರೇವಣಸಿದ್ದಪ್ಪನವರ ಧರ್ಮಪತ್ನಿ ಗದಿಗೆಮ್ಮ (65 ವರ್ಷ) ಇವರು ದಿನಾಂಕ 17.02.2022ರ ಗುರುವಾರ ರಾತ್ರಿ 9.20ಕ್ಕೆ ನಿಧನರಾದರು. ಏಳು ಜನ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.02.2022ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಹಳೇಬಾತಿ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

# ಖಾತ್ರಿ ಹಣ ದುರುಪಯೋಗ : ವಸೂಲಿಗೆ ಕ್ರಮ

**(1ನೇ ಪುಟದಿಂದ)** 3) ಅಳತೆಗಿಂತ ಹೆಚ್ಚುವರಿ ಎಂಬಿ ದಾಖಲಾದ ಕಾಮಗಾರಿಗಳಲ್ಲಿ ಇಂಜಿನಿಯರ್ ಶೇಕಡ 70ರಷ್ಟು, ಚೆಕ್ ಮೆಜರ್‌ಮೆಂಟ್ ಮಾಡಿದವರಿಂದ ಶೇಕಡ 30ರಷ್ಟು ಹಣ ವಸೂಲು ಮಾಡಲಾಗುವುದು.

4) ಬೇರೆ ಯೋಜನೆ ಅಡಿ ಅನುಷ್ಠಾನಗೊಂಡಿರುವ ಕಾಮಗಾರಿಗಳಿಗೆ ನರೇಗಾ ಯೋಜನೆ ಅಡಿ ಹಣ ಪಾವತಿ ಮಾಡಿದ ಕಾಮಗಾರಿಗಳಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಧ್ಯಕ್ಷರು ಹಾಗೂ ಎಂಬಿ ದಾಖಲಿಸಿದವರಿಂದ ತಲಾ ಶೇ.33ರಷ್ಟು ಹಣ ವಸೂಲು ಮಾಡಲಾಗುವುದು.

5) ಸತ್ತವರ ಮತ್ತು 18 ವರ್ಷದೊಳಗಿನ ವಿದ್ಯಾರ್ಥಿಗಳ ಹಾಗೂ ಅನರ್ಹರಿಗೆ ಕೂಲಿ ಪಾವತಿ ಮಾಡಿದ ಮೊತ್ತದಲ್ಲಿ ಗಣಕ ಯಂತ್ರ ನಿರ್ವಾಹಕ ಬಟವಾಡೆ ಅಧಿಕಾರಿ ಹಾಗೂ ಹಾಜರಾತಿ ಪಡೆದವರಿಂದ ಹಣ ವಸೂಲಾತಿ ಮಾಡಲಾಗುವುದು.

6) ಗೈರು ಹಾಜರಾದ ಕೂಲಿ ಕಾರ್ಮಿಕರಿಗೆ ಕೂಲಿ ಪಾವತಿಸಿದ ಪ್ರಕರಣಗಳಲ್ಲಿ ಹಾಜರಾತಿ ಪಡೆದವರಿಂದ ಶೇ.100ರಷ್ಟು ವಸೂಲಾತಿ ಮಾಡಲಾಗುವುದು.

ಸಾಮಗ್ರಿ ವೆಚ್ಚದಲ್ಲಿ ಅಗತ್ಯವಿರದ ಸಾಮಗ್ರಿ ಖರೀದಿಗೆ ಎರಡು ಬಾರಿ ಪಾವತಿ ಆಗಿರುವ ಸಾಮಗ್ರಿ ವೆಚ್ಚ ಆಗಿರುವ ಪ್ರಕರಣಗಳಲ್ಲಿ ಕಚೇರಿ ಮುಖ್ಯಸ್ಥರು ಶೇ.50, ಬಟವಾಡೆ ಅಧಿಕಾರಿ ಶೇ. 30 ಲೆಕ್ಕ ಸಹಾಯಕರು ಶೇಕಡ 20 ರಷ್ಟು ಹಣ ವಸೂಲಿ ಮಾಡಲು ಸರ್ಕಾರದ ಸುತ್ತೋಲೆಯಲ್ಲಿ ಸುದೀರ್ಘ ಹಾಗೂ ವಿವರವಾದ ಮಾನದಂಡಗಳನ್ನು ಗುರುತಿಸಲಾಗಿದೆ.

ಸಾಮಾಜಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ವಿವಿಧ ಮೂಲಗಳಿಂದ ವಸೂಲಾತಿ ಮತ್ತು ಆಕ್ಷೇಪಣೆಗೆ ಸೂಚಿಸಿರುವಂತೆ ಹಣ ಪಾವತಿಗೆ ಕಾರಣರಾದ ಅಧಿಕಾರಿ, ಸಿಬ್ಬಂದಿಗಳು ಮತ್ತು ಹೊರಗುತ್ತಿಗೆ ನೌಕರರು ಹಾಗೂ ಚುನಾಯಿತ ಪ್ರತಿನಿಧಿಗಳಿಂದ ಅವರುಗಳು ಜವಾಬ್ದಾರರಾಗಿರುವ ಮಟ್ಟಿಗೆ ಸುತ್ತೋಲೆಯಲ್ಲಿ ನಿಗದಿಪಡಿಸಿರುವಂತೆ ಶೇಕಡಾವಾರು ಪ್ರಮಾಣದಲ್ಲಿ ಹಣ ವಸೂಲಾತಿ ಮಾಡಿ ಜಿಪಂ ಸಿಇಓ ಅವರು ಸರ್ಕಾರದ ನರೇಗಾ ಯೋಜನೆ ಖಾತೆಗೆ ಜಮಾ ಮಾಡುವಂತೆ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಆದರೆ ಯಾವುದೇ ಕಾಲಮಿತಿ ನಿಗಧಿಪಡಿಸಿಲ್ಲ.

2013-14 ರಿಂದ 2019-20 ನೇ ಸಾಲಿನ ವರೆಗೆ ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದ ಆಕ್ಷೇಪಣೆ ಮತ್ತು ವಸೂಲಾತಿ ಮಾಹಿತಿ: ಜಗಳೂರು ತಾಲ್ಲೂಕು 22 ಗ್ರಾಮ ಪಂಚಾಯಿತಿ ಗಳಿಂದ 23.4 7.ಕೋಟಿ ರೂ ವಸೂಲಾತಿಗೆ ಸೂಚಿಸಲಾದ ಮೊತ್ತ.

22 ಗ್ರಾಮ ಪಂಚಾಯತಿಗಳಿಂದ 14.56 ಕೋಟಿ ರೂ. ಆಕ್ಷೇಪಣೆಗೆ ಸೂಚಿಸಿದ ಮೊತ್ತ.

ಈಗಾಗಲೇ ಜಗಳೂರು ತಾಪಂ ಇಓ ಅಧ್ಯಕ್ಷತೆಯ ತಾಲ್ಲೂಕು ಸಮಿತಿ ತನಿಖೆ ಆರಂಭಿಸಿದ್ದು ಸುಮಾರು 12 ಲಕ್ಷ ರೂ. ವಸೂಲಾತಿ ಮಾಡಿ ಸರ್ಕಾರಕ್ಕೆ ಜಮಾ ಮಾಡಿದೆ ಎಂದು ತಿಳಿದುಬಂದಿದೆ.

ಲೆಕ್ಕಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ ಮೊತ್ತದಲ್ಲಿ ಅನುಪಾಲನಾ ವರದಿ ಮೂಲಕ ಸುಮಾರು 5.02 ಕೋಟಿ ತಿರುವಳಿ ಮಾಡಲಾಗಿದೆ ಎಂದು ತಿಳಿದು ಬಂದಿದೆ.

# ಹಿಜಾಬ್‌ಗೆ ಅವಕಾಶ ನೀಡದಿದ್ದರೆ ಮಕ್ಕಳನ್ನು ಕಾಲೇಜಿಗೆ ಕಳುಹಿಸಲ್ಲ

**(1ನೇ ಪುಟದಿಂದ)** ಗುರುವಾರ 21 ವಿದ್ಯಾರ್ಥಿನಿಯರು ಕಾಲೇಜಿಗೆ ಬಂದಿದ್ದರು. ಇದರಲ್ಲಿ 4 ವಿದ್ಯಾರ್ಥಿನಿಯರು ಮಾತ್ರ ತರಗತಿಗೆ ಹಾಜರಾಗಿದ್ದರು. ಉಳಿದ 17 ವಿದ್ಯಾರ್ಥಿನಿಯರು ಹಿಜಾಬ್ ತೆರವು ಮಾಡದೇ ಮನೆಗೆ ವಾಪಸ್ಸಾದರು.

ಇನ್ನೋರ್ವ ನೋಡಲ್ ಅಧಿಕಾರಿಗಳಾದ ಜಿಲ್ಲಾ ಬಿಸಿಎಂ ಆಫೀಸರ್ ಅಮಿತ್ ಬಿದರಿ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮೀರ್ ಅಜಾಂ, ಸದಸ್ಯರಾದ ಹಾಲಿವಾಣದ ರೇವಣಸಿದ್ದಪ್ಪ, ಕೊಕ್ಕನೂರಿನ ಚಂದ್ರಪ್ಪ, ಉಪನ್ಯಾಸಕ ತಿಪ್ಪೇಸ್ವಾಮಿ, ಪಿಎಸ್ಐ ರವಿ ಕುಮಾರ ಸೇರಿದಂತೆ 20ಕ್ಕೂ ಹೆಚ್ಚು ಪೋಷಕರು ಸಭೆಯಲ್ಲಿದ್ದರು.

# ಒಳ್ಳೆಯದು ಸ್ಮರಿಸುವ, ಕೆಟ್ಟದ್ದು ಮರೆಯುವ ಗುಣ ಇರಲಿ

## ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿಗಳ 14 ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ



ಸಾಣೇಹಳ್ಳಿ, ಫೆ. 17-ಒಳ್ಳೆಯದನ್ನು ಸ್ಮರಿಸುವ, ಕೆಟ್ಟದ್ದನ್ನು ಮರೆಯುವ ಗುಣ ಬೆಳೆಸಿಕೊಳ್ಳಬೇಕು ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿದರು.

ಇಲ್ಲಿನ ಎಸ್.ಎಸ್. ರಂಗಮಂದಿರದಲ್ಲಿ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಚರಪಟ್ಟಾಧ್ಯಕ್ಷರಾಗಿದ್ದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರ 14 ನೇ ಪುಣ್ಯಸ್ಮರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಶ್ರೀಗಳು ಮಾತನಾಡಿದರು.

ಇಂತಹ ಪೂಜ್ಯರುಗಳನ್ನು ಸ್ಮರಿಸಿಕೊಳ್ಳುವುದೇ ಒಂದು ಸ್ಫೂರ್ತಿ. ಈ ಮೂಲಕ ತರಳಬಾಳು ಗುರು ಪರಂಪರೆಯ ಪರಿಚಯವನ್ನು ಮಕ್ಕಳಿಗೆ ಮಾಡಿಸುತ್ತಿರುವುದು ಸ್ತುತ್ಯಾರ್ಹ ಕೆಲಸವೂ ಆಗಿದೆ ಎಂದರು.

ಶ್ರೀ ತರಳಬಾಳು ಬೃಹನ್ಮಠದಲ್ಲಿ ಪಟ್ಟ, ಚರ, ವಿರಕ್ತ ಎನ್ನುವ ಮೂರು ರೀತಿಯ ಗುರು ವರ್ಗ ಇತ್ತು. ನಾವು ಮಠಕ್ಕೆ ಬಂದಾಗ ಪಟ್ಟದಲ್ಲಿದ್ದವರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾ ಸ್ವಾಮಿಗಳು. ಚರಪಟ್ಟದಲ್ಲಿದ್ದವರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು. ವಿರಕ್ತ ಸ್ವಾಮಿಗಳಾಗಿದ್ದವರು ಶ್ರೀ ಕಾಶಿ ಮಹಲಿಂಗ ಸ್ವಾಮಿಗಳು. ನಮಗೆ ಈ ಮೂರೂ ಗುರುಗಳ ದರ್ಶನಾಶೀರ್ವಾದ ಲಭಿಸಿದ್ದು ನಮ್ಮ ಪುಣ್ಯ. ಮಲ್ಲಿಕಾರ್ಜುನ ಶ್ರೀಗಳು ಸರಳ ಜೀವನ ಸಾಗಿಸಿದವರು. ಕೃಷಿಯನ್ನು, ಕೃಷಿಕರನ್ನು ಬಹುವಾಗಿ ನಂಬಿಕೊಂಡಿದ್ದವರು. ಪೂಜ್ಯರು ನಮಗಿಂತ ಮೂವತ್ತು ವರ್ಷಗಳಷ್ಟು ಹಿರಿಯರಾದರೂ ನಮ್ಮನ್ನು ತುಂಬಾ ಗೌರವದಿಂದ ಕಾಣುತ್ತಿದ್ದರು. ಕಾವಿಧಾರಿಗಳೆಲ್ಲರೂ ಒಂದೇ ಎನ್ನುವ ಭಾವನೆ ಅವರಲ್ಲಿತ್ತು.

ಹಗಲಿರುಳೆನ್ನದೆ ನಿತ್ಯವೂ ಹೊಲ-ತೋಟಗಳಿಗೆ ಭೇಟಿ ನೀಡುತ್ತಿದ್ದರು. ಇಂದಿನ ಮಠದ ಆರ್ಥಿಕ ಸ್ಥಿತಿ ಸುಧಾರಿಸುವಲ್ಲಿ ಅವರು ಹಾಕಿ ಬೆಳೆಸಿದ ಅಡಿಕೆ, ತೆಂಗು, ಹೊಲಗದ್ದೆಗಳ ಆದಾಯವೂ ಕಾರಣ. ಈ ಹಿನ್ನೆಲೆಯಲ್ಲಿ ಅವರು ಕರ್ಮಯೋಗಿಯೆಂದೇ ಹೆಸರಾಗಿದ್ದರು ಎಂದು ನುಡಿದರು.

ಮುಖ್ಯ ಉಪನ್ಯಾಸಕ ಐ.ಜಿ. ಚಂದ್ರಶೇಖರಯ್ಯ ಮಾತನಾಡಿ, ಮಲ್ಲಿಕಾರ್ಜುನ ಸ್ವಾಮಿಗಳವರು ವಿಭೂತಿ ಪುರುಷರು, ತ್ರಿವಿಧ ದಾಸೋಹಿಗಳು, ನೇಗಿಲ ಯೋಗಿಗಳು, ವಿವೇಕಕ್ಕೆ, ವಿದ್ಯೆಗೆ, ವಿಧೇಯತೆಗೆ ಮಾದರಿಯಾದವರು. ಇಂತಹ ಪೂಜ್ಯರ ಸ್ಮರಣೆ ಎಲ್ಲರಿಗೂ ಪ್ರೇರಣದಾಯಕವಾದುದು ಎಂದರು.

ಪ್ರಾಸ್ತಾವಿಕವಾಗಿ ಅಧ್ಯಾಪಕ ಹೆಚ್.ಎಸ್. ದ್ಯಾಮೇಶ್ ಮಾತನಾಡಿದರು. ಶಿವಸಂಚಾರದ ಹೆಚ್. ಎಸ್. ನಾಗರಾಜ್ ಮತ್ತು ಶರಣ್ ವಚನಗೀತೆ ಹಾಡಿದರು. ಅಧ್ಯಾಪಕ ಜಯಣ್ಣ ಕಾರ್ಯಕ್ರಮ ನಡೆಸಿಕೊಟ್ಟರೆ, ಸಂತೋಷ್ ವಂದಿಸಿದರು.

# ಓದದ ಮಕ್ಕಳಿಗಿಂತ ಓದಲು ಬಯಸುವ ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಪುಣ್ಯ ಲಭ್ಯ



ರಾಣೇಬೆನ್ನೂರು, ಫೆ.17- ಓದಲು ಇಷ್ಟಪಡದ ನಿಮ್ಮ ಮಕ್ಕಳಿಗಿಂತ, ಓದಲು ಬಯಸುವ ಇತರರ ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಬಹಳಷ್ಟು ಪುಣ್ಯ ಸಂಪಾದಿಸುವಿರಿ ಎಂದು ಶಿರಹಟ್ಟಿ ಭಾವೈಕ್ಯ ಮಠದ ನೂತನ ಜಗದ್ಗುರು ಶ್ರೀ ಫಕೀರ ದಿಂಗಾಲೇಶ್ವರ ಸ್ವಾಮೀಜಿ ನುಡಿದರು.

ಇಲ್ಲಿನ ಪ್ರಾಚೀನ ಬನಶಂಕರಿ ದೇವಸ್ಥಾನದಲ್ಲಿ ನಡೆದ ಮಂಡಲ ಪೂಜೆ ಹಾಗೂ ಚಂಡಿಕಾ ಹೋಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಹೊಸ ಗುಡಿಗಳನ್ನು ಕಟ್ಟದೇ ಹಾಳಾದ ಗುಡಿಗಳನ್ನು ಜೀರ್ಣೋದ್ಧಾರ ಮಾಡಿ, ಕಟುಕರ ಕೈಗೆ ಹೋಗುವ ಆಕಳುಗಳನ್ನ ರಕ್ಷಿಸಿ, ಪರೋಪಕಾರದೊಂದಿಗೆ ಬದುಕಿನಲ್ಲಿ ಆನಂದ, ಪರಮಾನಂದ ಪಡೆದುಕೊಳ್ಳಿರಿ ಎಂದು ಶ್ರೀಗಳು ಬೋಧಿಸಿದರು.

'ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಢ ಶರಣರ ನುಡಿಗಡಣವೇ ಕಡೆಗೀಲು' ಕಾಣಾ ರಾಮನಾಥ ಎನ್ನುವ ಶರಣರ ನುಡಿಯಂತೆ, ಹತ್ತಾರು ವಿಷಯಗಳಿಂದ ತುಂಬಿದ ಮನುಷ್ಯನ ಬದುಕಿಗೆ ಸದ್ಗುರುವಿನ ಬೋಧನೆ ಕಡೆಗೀಲಾಗಿ ಬಂಡಿ ಉರುಳದಂತೆ ಕಾಯುತ್ತದೆ ಎಂದು ಲಿಂಗನಾಯ್ಕನಹಳ್ಳಿ ಜಂಗಮ ಕ್ಷೇತ್ರದ ಶ್ರೀ ಚನ್ನವೀರ ಮಹಾಸ್ವಾಮಿಗಳು ನುಡಿದರು.

ಕಲ್ಲಿಗೆ ಸಂಸ್ಕಾರ ನೀಡಿ ಅದು ಪೂಜೆಗೊಳ್ಳುವಂತೆ ಮಾಡುವ ಶಿಲ್ಪಿಯಂತೆ, ಗುರುಗಳು ಸಂಸ್ಕಾರದ ಸಂಸ್ಕೃತಿ ನೀಡಿ ಅಹಂಕಾರವನ್ನು ಹೋಗಲಾಡಿಸಿ, ಮಮಕಾರವನ್ನು ನೀಡುವುದರೊಂದಿಗೆ ಕಡುದರ್ಪವೇರಿದ ಮನುಷ್ಯನೆಂಬ ಬಂಡಿ ಉರುಳದಂತೆ ಕಡೆಗೀಲಾಗಿ ಕಾರ್ಯನಿರ್ವಹಿಸುತ್ತಾರೆಂದು ಶ್ರೀಗಳು ನುಡಿದರು.

ಕೆಜಿಗಟ್ಟಲೇ ತುಪ್ಪ ಸುರಿದು, ಉತ್ತಮವಾದ ಮಡಿ ಅರ್ಪಿಸುವುದಕ್ಕಿಂತ, ನಮ್ಮಲ್ಲಿರುವ ದುರಾಚಾರ, ದುರ್ನಡತೆ, ದುರ್ಗುಣ, ದುರ್ವಿಚಾರ ಮುಂತಾದವುಗಳನ್ನು ಹೋಮಕ್ಕೆ ಅರ್ಪಿಸಿದಾಗ ನಮ್ಮ ಬದುಕು ಸಾರ್ಥಕತೆ ಪಡೆಯಲಿದೆ. ಅತ್ತೆ ಹೆಸರಿಟ್ಟರೆ, ತನ್ನ ಉಸಿರು ನೀಡಿ ನಮ್ಮ ಹುಟ್ಟಿಗೆ ಕಾರಣಳಾಗುವ ತಾಯಿಯನ್ನು ತನ್ನ ಉಸಿರಿರುವವರೆಗೂ ಗೌರವಿಸುವವರ ಬದುಕು ಊರ್ಜಿತಗೊಳ್ಳಲಿದೆ ಎಂದು ಶ್ರೀಗಳು ಹೇಳಿದರು.

ದೇವಸ್ಥಾನ ಸಮಿತಿಯ ಅಧ್ಯಕ್ಷ ಮಂಜುನಾಥ ಗೌಡ್ರ ಶಿವಣ್ಣನವರ ದೇವಸ್ಥಾನ ನಿರ್ಮಾಣದಲ್ಲಿ ನಡೆದ ಎಲ್ಲರ ಸಹಕಾರವನ್ನು ಸ್ಮರಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಖಜಾಂಚಿ ಶಿವಪ್ಪ ಹೆದ್ದೇರಿ ಸ್ವಾಗತಿಸಿದರು. ವಾಸ್ತು ತಜ್ಞ ರುದ್ರಪ್ಪ ಕಮ್ಮಾರ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ಮುಖಂಡರುಗಳಾದ ಭಾರತಿ ಜಂಬಗಿ, ಭಾರತಿ ಅಳವಂಡಗಿ, ಕರಿಬಸಪ್ಪ ಮಾಕನೂರ, ಅರ್ಚಕ ಗಿರೀಶ ಶರ್ಮಾ ಮತ್ತಿತರರಿದ್ದರು.

### ಚೀಟಿ ಮೂಲಕ ದೊರೆತ ಪಟ್ಟ....

**ಭಾವೈಕ್ಯತೆಯನ್ನು ಆಚರಣೆಯಲ್ಲಿ ತೊಡಗಿಸಿಕೊಂಡಿದ್ದ ನನಗೆ ಈ ಪಟ್ಟ ಕೊಡಲು ಈಗಿನ ಜಗದ್ಗುರುಗಳು ಕಳೆದ 18 ವರ್ಷಗಳಿಂದ ಪ್ರಯತ್ನ ನಡೆಸಿದ್ದರು. ನಾನು ಸಮ್ಮತಿ ನೀಡಿರಲಿಲ್ಲ. ತಮ್ಮ ಮನಸ್ಸಿನಲ್ಲಿದ್ದ ಹತ್ತಾರು ಶ್ರೀಗಳ ಹೆಸರು ಹಾಕಿ ಸುಮಾರು 50 ಬಾರಿ ಚೀಟಿ ಎತ್ತಿದರೂ ನನ್ನ ಹೆಸರೇ ಬಂದಿತೆನ್ನುವ ಅವರ ಒತ್ತಡ, ಹಾಗಾಗಿ ನಾನು ಈ ಜವಾಬ್ದಾರಿ ವಹಿಸಿಕೊಂಡೆ ಎಂದು ಶಿರಹಟ್ಟಿ ಮಠದ ಪೀಠಾಧಿಕಾರ ತಮಗೆ ದೊರೆತ ಬಗ್ಗೆ ವಿವರಿಸಿದ ಫಕೀರ ದಿಂಗಾಲೇಶ್ವರ ಶ್ರೀಗಳು ಅಲ್ಲಿನ ಆಚರಣೆ, ಧಾರ್ಮಿಕ ವಿಧಿ, ವಿಧಾನಗಳ ಬಗ್ಗೆ ವಿವರಿಸಿದರು.**

# ಕರವೇ ಮಹಿಳಾ ಜಿಲ್ಲಾ ಘಟಕದ ಗೌರವಾಧ್ಯಕ್ಷರಾಗಿ ಅಮೀರ ಬಾನು



ದಾವಣಗೆರೆ, ಫೆ.17 - ಕರ್ನಾಟಕ ರಕ್ಷಣಾ ವೇದಿಕೆಯ ಮಹಿಳಾ ಜಿಲ್ಲಾ ಗೌರವಾಧ್ಯಕ್ಷರಾಗಿ ಶ್ರೀಮತಿ ಅಮೀರ ಬಾನು ಅವರನ್ನು ಆಯ್ಕೆ ಮಾಡಲಾಯಿತು.

ಜಿಲ್ಲಾ ಉಪಾಧ್ಯಕ್ಷರಾಗಿ ಶ್ರೀಮತಿ ಶಾಂತಮ್ಮ ಅವರನ್ನು ಇಂದು ಜಿಲ್ಲಾ ಕಚೇರಿಯಲ್ಲಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಬಸಮ್ಮ ಅವರ ನೇತೃತ್ವದಲ್ಲಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ ನಾಡು, ನುಡಿ, ಭಾಷೆ, ಸಂಸ್ಕೃತಿ ಕನ್ನಡಿಗರ ಬದುಕನ್ನು ಕಟ್ಟುವ ನಿಟ್ಟಿನಲ್ಲಿ ಸಂಘಟನಾತ್ಮಕವಾಗಿ ಕಾರ್ಯಪ್ರವೃತ್ತರಾಗಬೇಕು, ಸಂಘಟನೆಯಲ್ಲಿ ಮಹಿಳೆಯರನ್ನು ಅತಿ ಹೆಚ್ಚು ತೊಡಗಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಘಟಕದ ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷೆ ಶ್ರೀಮತಿ ಮಂಜುಳ ಮಾಂತೇಶ್, ಜಿಲ್ಲಾ ಕೋಶಾಧಿಕಾರಿ ರವಿಕುಮಾರ್ ಉದ್ದಿಮೆದಾರರ ಘಟಕದ ಉಪಾಧ್ಯಕ್ಷ ಮಹೇಶ್ವರಪ್ಪ ನಗರ ಘಟಕ ಅಧ್ಯಕ್ಷ ಜಿ.ಎಸ್. ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು

# ಸಂವಿಧಾನ ಸಂರಕ್ಷಣಾ ಒಕ್ಕೂಟದಿಂದ ವಿಧಾನ ಸೌಧ- ಹೈಕೋರ್ಟ್ ಚಲೋ

ದಾವಣಗೆರೆ, ಫೆ.17- ಗಣರಾಜ್ಯೋತ್ಸವ ದಿನದಂದು ಅಂಬೇಡ್ಕರ ಭಾವಚಿತ್ರ ತೆರವುಗೊಳಿಸಿದರೆ ಮಾತ್ರ ಧ್ವಜಾರೋಹಣ ಮಾಡುವುದಾಗಿ ಉದ್ಧಟತನದ ಹೇಳಿಕೆ ನೀಡಿದ ಸಂವಿಧಾನ ವಿರೋಧಿ ರಾಯಚೂರಿನ ಜಿಲ್ಲಾ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಗೌಡ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಇದೇ ದಿನಾಂಕ 19 ರಂದು ಶನಿವಾರ ವಿಧಾನ ಸೌಧ-ಹೈಕೋರ್ಟ್ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಚಿಂತಕ, ನಿವೃತ್ತ ಪ್ರಾಧ್ಯಾಪಕ ಡಾ. ಎ.ಬಿ. ರಾಮಚಂದ್ರಪ್ಪ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂವಿಧಾನಕ್ಕೆ ಅಪಚಾರವೆಸಗಿರುವ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ, ಇಡೀ ರಾಜ್ಯಾದ್ಯಂತ ವಿವಿಧ ಸಂಘಟನೆಗಳು ಚಳವಳಿಗಳನ್ನು ನಡೆಸಿದರೂ, ಸಂವೇದನೆ ಇಲ್ಲದ ಸರ್ಕಾರಕ್ಕೆ ದಲಿತರ ದನಿ ಕೇಳುತ್ತಿಲ್ಲ. ಸರ್ಕಾರ ಮೌನ ವಹಿಸಿರುವುದನ್ನು ನೋಡಿದರೆ ಮಲ್ಲಿಕಾರ್ಜುನ ಗೌಡರ ಪರ ಇದೆ ಎಂದುಕೊಳ್ಳಬೇಕಿದೆ ಎಂದರು.

ಸಂವಿಧಾನ ಮತ್ತು ಅಂಬೇಡ್ಕರ್ ಅವರಿಗೆ ಅವಮಾನವಾಗುವ ರೀತಿಯಲ್ಲಿ ನಡೆದುಕೊಂಡಿರುವ ಮಲ್ಲಿಕಾರ್ಜುನ ಗೌಡ ಅವರನ್ನು ಕೂಡಲೇ ವಜಾಗೊಳಿಸಬೇಕು, ಕಠಿಣ ಕಾನೂನು ಕ್ರಮ ಜರುಗಿಸುವಂತೆ ಪ್ರಗತಿಪರರು, ಅಂಬೇಡ್ಕರ್ ಅನುಯಾಯಿಗಳು, ವಿದ್ಯಾರ್ಥಿ ಸಂಘಟನೆಗಳು, ದಲಿತ ಸಂಘಟನೆಗಳು ಬೀದಿಗಿಳಿದು ಹೋರಾಟ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಹೈಕೋರ್ಟ್ ಸಹ ತಾರ್ಕಿಕ ಅಂತ್ಯ ಕೊಟ್ಟಿಲ್ಲ. ಕೇವಲ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಸಂವಿಧಾನ ದಿನದಂದು ಮಾತ್ರ ಅಂಬೇಡ್ಕರ್ ಭಾವಚಿತ್ರ ಇಡಲು ತೀರ್ಮಾನ ಕೈಗೊಂಡಿದೆ ಎಂದರು.

ಎಲ್ಲಾ ಹಂತದ ನ್ಯಾಯಾಲಯಗಳ ಸಭಾಂಗಣದಲ್ಲಿ ಅಂಬೇಡ್ಕರ್ ಭಾವಚಿತ್ರ ಹಾಕುವ ಬಗ್ಗೆಯಾಗಲೀ, ಮಲ್ಲಿಕಾರ್ಜುನ ಗೌಡ ಅವರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆಯಾಗಲೀ ತೀರ್ಮಾನ ಕೈಗೊಳ್ಳದಿರುವುದು ದಲಿತ ಸಮುದಾಯದ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಹೇಳಿದರು. ಸಂವಿಧಾನ ವಿರೋಧಿ ಹುಮ್ನಾಬಾದ್ ತಹಶೀಲ್ದಾರ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಹೆಗ್ಗೆರೆ ರಂಗಪ್ಪ, ಹೊನ್ನಾಳಿಯ ಎ.ಡಿ. ಈಶ್ವರಪ್ಪ, ಕಬ್ಬಳ್ಳಿ ಮೈಲಪ್ಪ, ಅನಿಸ್ ಪಾಷ, ಕುಂದುವಾಡದ ಮಂಜುನಾಥ್, ಸಿ. ಬಸವರಾಜ್, ರಾಮಪ್ಪ, ಕತ್ತಲಗೆರೆ ತಿಪ್ಪಣ್ಣ, ಕಬ್ಬೂರು ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

# ಶ್ರೀ ವಿನಾಯಕ ದೇವಸ್ಥಾನ ಅಭಿವೃದ್ಧಿಗೆ ಸಹಾಯ ಧನ



ದಾವಣಗೆರೆ, ಫೆ. 17- ನಗರದ ಶ್ರೀ ಶಂಕರ ವಿಹಾರ ಬಡಾವಣೆ ಬಿ ಬ್ಲಾಕ್‌ನ ಶ್ರೀ ಸರ್ವ ಸಿದ್ಧಿ ವಿನಾಯಕ ದೇವಸ್ಥಾನದ ಕಟ್ಟಡ ಅಭಿವೃದ್ಧಿಗಾಗಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯಿಂದ 1 ಲಕ್ಷ ರೂ.ಗಳನ್ನು ಡಿ.ಡಿ. ಮುಖಾಂತರ ಗ್ರಾಮೀಣಾಭಿವೃದ್ಧಿ ಯೋಜನಾಧಿಕಾರಿ ಶ್ರೀನಿವಾಸ್, ಸೇವಾ ಸಮಿತಿ ಗೌರವಾಧ್ಯಕ್ಷರಾದ ಆಶಾ ಉಮೇಶ್ ಹಾಗೂ ಅಧ್ಯಕ್ಷ ಮಹೇಶ್ವರಯ್ಯ ಅವರಿಗೆ ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿಯ ಮೇಲ್ವಿಚಾರಕರಾದ ಮಾರುತಿ, ಪಾಟೀಲ್, ದೇವಮ್ಮ, ಸೇವಾ ಪ್ರತಿನಿಧಿಗಳಾದ ಪ್ರೇಮಾ, ಭಾಗ್ಯಮ್ಮ, ಒಕ್ಕೂಟದ ಅಧ್ಯಕ್ಷರಾದ ದಾಕಾಯಣಮ್ಮ, ಸೇವಾ ಸಮಿತಿ ಉಪಾಧ್ಯಕ್ಷರಾದ ಕಲ್ಲಪ್ಪ ಅರಳಿ, ಚಂದ್ರಪ್ಪ, ಬಿ.ಪಿ. ಹರೀಶ್, ನಿರ್ದೇಶಕರಾದ ರುದ್ರಪ್ಪ, ಕೆ.ಎಂ. ವೀರಯ್ಯಸ್ವಾಮಿ, ರಾಕೇಶ್, ಸಂತೋಷ್, ಗಿರೀಶ್, ಕರಿಬಸಪ್ಪ ದಾಪ್ಪೇರ್ ಇಂದ್ರಮ್ಮ ಉಪಸ್ಥಿತರಿದ್ದರು.

# ಮಹಿಳಾ ದಿನಾಚರಣೆ : ವನಿತಾ ಸಮಾಜದಿಂದ ಸಾಂಸ್ಕೃತಿಕ ಸ್ಪರ್ಧೆಗಳು

ದಾವಣಗೆರೆ, ಫೆ. 17- ವಿಶ್ವ ಮಹಿಳಾ ದಿನಾಚರಣೆ ಹಾಗೂ ವನಿತಾ ಸಮಾಜದ ವಾರ್ಷಿಕೋತ್ಸವದ ಅಂಗವಾಗಿ ವನಿತಾ ಸಮಾಜದ ವತಿಯಿಂದ ವಿವಿಧ ಸಂಸ್ಥೆಗಳ ಸದಸ್ಯೆಯರಿಗೆ ವನಿತಾ ಸಮಾಜದ ಆವರಣದಲ್ಲಿ ಇದೇ ದಿನಾಂಕ 24 ರಿಂದ 27 ರವರೆಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ .

24 ರಂದು ಮಧ್ಯಾಹ್ನ 2.30 ಕ್ಕೆ ಚರ್ಚಾ ಸ್ಪರ್ಧೆ (ವಿಷಯ: ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಆನ್‌ಲೈನ್ ತರಗತಿಗಳು ಸೂಕ್ತವೇ), 25 ರಂದು ಸಂಜೆ 4.30 ಕ್ಕೆ ಜಾನಪದ ನೃತ್ಯ, 26 ರಂದು ಮಧ್ಯಾಹ್ನ 2.30 ಕ್ಕೆ ರಸಪ್ರಶ್ನೆ ಸ್ಪರ್ಧೆ ಹಾಗೂ 27 ರಂದು ಮಧ್ಯಾಹ್ನ 2.30 ಕ್ಕೆ ಆರೋಗ್ಯವಂತ ಮಹಿಳೆ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಆರೋಗ್ಯವಂತ ಮಹಿಳಾ ಸ್ಪರ್ಧೆಗೆ 50 ರಿಂದ 70 ವರ್ಷಗಳ ವಯೋಮಾನದ ಮಹಿಳೆಯರು ಭಾಗವಹಿಸಬಹುದು. (ಒಂದು ಸಂಸ್ಥೆಯಿಂದ ಒಬ್ಬರು ಮಾತ್ರ ). ಭಾಗವಹಿಸಲಿಚ್ಛಿಸುವ ಮಹಿಳೆಯರು ಇದೇ ದಿನಾಂಕ 22 ರೊಳಗಾಗಿ ವನಿತಾ ಸಮಾಜದಲ್ಲಿ ಅರ್ಜಿ ಸಲ್ಲಿಸಬಹುದು.

ವಿವರಕ್ಕೆ ನಾಗರತ್ನ ಜಗದೀಶ್ (9844168469), ಹೇಮಾ ಶ್ರೀನಿವಾಸ್ (9986283555), ಪದ್ಮ ಪ್ರಕಾಶ್ (9449811407), ಪುಷ್ಪ ಎನ್.ಹೆಚ್. (9964913202) ಅವರನ್ನು ಸಂಪರ್ಕಿಸಬಹುದು.

# ವಸತಿ ಯೋಜನೆಗೆ ಅರ್ಜಿ ಆಹ್ವಾನ

ದಾವಣಗೆರೆ, ಫೆ.17- ಡಾ ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳ ಅಭಿವೃದ್ಧಿ ಕೋಶದ ವಸತಿ ಯೋಜನೆಯಡಿ ಫಲಾಪೇಕ್ಷಿಗಳಿಂದ ಮನೆ ನಿರ್ಮಿಸಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಫಲಾಪೇಕ್ಷಿಗಳು ಅರ್ಜಿಯನ್ನು ಆನ್‌ಲೈನ್ ಮೂಲಕ www.adcl.karnataka.gov.in ಅಥವಾ ಆಫ್‌ಲೈನ್ ಮೂಲಕ ಅರ್ಜಿ ನಮೂನೆ ಡೌನ್‌ಲೋಡ್ ಮಾಡಿಕೊಂಡು ಅಗತ್ಯ ದಾಖಲಾತಿಗಳೊಂದಿಗೆ ನಿಗಮದ ಜಿಲ್ಲಾ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ.

ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಫಲಾಪೇಕ್ಷಿಗಳು ನಿಗಮ, ಕೋಶದ ಜಿಲ್ಲಾ ಕಚೇರಿಯನ್ನು ಸಂಪರ್ಕಿಸಿ ಉಚಿತವಾಗಿ ಅರ್ಜಿ ಪಡೆದು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 28 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ಡಾ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಪ.ಜಾತಿ ಅಲೆಮಾರಿ ಅಭಿವೃದ್ಧಿ ಕೋಶರವರ ಕಚೇರಿ, ನಂ.337/16ಎ-16, ಗಣೇಶ್ ಲೇಔಟ್, 1ನೇ ಕ್ರಾಸ್, ಪಿ.ಬಿ ರಸ್ತೆ, ದಾವಣಗೆರೆ ಇವರನ್ನು ಸಂಪರ್ಕಿಸಬಹುದು.

# ವನಿತಾ ಸಮಾಜದಿಂದ ನಿರಾಶ್ರಿತರಿಗೆ ಅರ್ಜಿ ಆಹ್ವಾನ

ದಾವಣಗೆರೆ, ಫೆ.17-ವನಿತಾ ಸಮಾಜದ ಅಂಗ ಸಂಸ್ಥೆಯಾದ 'ಆಶ್ರಯ' ಹಿರಿಯ ವನಿತೆಯರ ಆನಂದಧಾಮವು ನಿರಾಶ್ರಿತರಿಗೆ ಆಸರೆ ನೀಡುತ್ತಾ ಬಂದಿದ್ದು, ಈ ಆನಂದ ಧಾಮದಲ್ಲಿ ಕೆಲವೇ ಸ್ಥಾನಗಳು ತೆರವಾಗಿವೆ. ಆಸಕ್ತಿ ಇರುವ 60 ವರ್ಷ ಮೇಲ್ಪಟ್ಟ ಮಹಿಳೆಯರು ಅರ್ಜಿ ಸಲ್ಲಿಸಬಹುದಾಗಿದೆ.

ವಿವರಗಳಿಗೆ 94806 87273, 98448 50414, 98451 66724 ಈ ಸಂಖ್ಯೆಗಳಿಗೆ ಸಂಪರ್ಕಿಸಬಹುದಾಗಿದೆ.

# ಈ ಬಾರಿಯೂ ಕೊನೆ ಭಾಗದ ರೈತರಿಗೆ ನೀರಿನ ತೊಂದರೆಯಾಗದಂತೆ ಕ್ರಮ



ಮಲೇಬೆನ್ನೂರು, ಫೆ. 17- ಕೊನೆ ಭಾಗದ ರೈತರಿಗೆ ಈ ಬಾರಿಯೂ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿ ಭದ್ರಾ ಕಾಡಾ ಅಧ್ಯಕ್ಷೆ ಶ್ರೀಮತಿ ಪವಿತ್ರ ರಾಮಯ್ಯ ಭರವಸೆ ನೀಡಿದರು.

ಅವರು ಮಂಗಳವಾರ ಇಲ್ಲಿನ ಭದ್ರಾ ನಾಲಾ ನಂ.3 ವಿಭಾಗದ ಕಾರ್ಯಪಾಲಕ ಅಭಿಯಂತರ ಕಚೇರಿಗೆ ಭೇಟಿ ನೀಡಿ ಕೊನೆ ಭಾಗದ ರೈತರೊಂದಿಗೆ ನೀರಿನ ಸಮಸ್ಯೆ ಕುರಿತು ಚರ್ಚಿಸಿದರು.

ಕಳೆದ 4 ದಿನಗಳಿಂದ ಹಿಂದೆ ಮುಖ್ಯ ಕಾಲುವೆಯಲ್ಲಿ ಯುವಕನೊಬ್ಬ ಬಿದ್ದು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಶವದ ಹುಡುಕಾಟಕ್ಕಾಗಿ ಕಾಲುವೆಯಲ್ಲಿ ನೀರು ನಿಲ್ಲಿಸಲಾಗಿತ್ತು. ಇದರಿಂದಾಗಿ ಕೊನೆ ಭಾಗದ ರೈತರಿಗೆ ತೊಂದರೆ ಆಗಿದ್ದು, ನೀರಿನ ರೊಟೇಷನ್ ಪದ್ಧತಿಯಲ್ಲಿ ಮಲೇಬೆನ್ನೂರು ಮತ್ತು ಬಸವಾಪಟ್ಟಣ ಉಪವಿಭಾಗದ ಕೊನೆ ಭಾಗದ ರೈತರಿಗೆ 10 ದಿನಗಳ ಜೊತೆಗೆ 2 ದಿನ ಹೆಚ್ಚಾಗಿ ನೀರು ಹರಿಸುವಂತೆ ಪವಿತ್ರಾ ರಾಮಯ್ಯ ಅವರು ಎಇಇ ಗಳಾದ ಸಂತೋಷ್ ಮತ್ತು ಧನಂಜಯ ಅವರಿಗೆ ಸೂಚಿಸಿದರು.

ಈ ರೈತ ಸಂಘದ ಕೆ.ಎನ್. ಹಳ್ಳಿ ಪ್ರಭುಗೌಡ, ನಂದಿತಾವರೆ ಮುರುಗೇಂದ್ರಯ್ಯ, ಮಂಜುಳಮ್ಮ ಅವರು ಮೇಲ್ಭಾಗದಲ್ಲಿರುವ ಅಕ್ರಮ ಪಂಪ್‌ಸೆಟ್‌ಗಳ ತೆರವಿಗೆ ವಿಷಯ ಪ್ರಸ್ತಾಪಿಸಿದಾಗ ಪವಿತ್ರಾ ರಾಮಯ್ಯ ಅವರು ಅಧಿಕಾರಿಗಳು ಬಡವರ ಅಕ್ರಮ ಪಂಪ್‌ಸೆಟ್ ತೆರವು ಮಾಡಿಸಿ ಫೋಟೋ , ವಿಡಿಯೋ ತೆಗೆಸಿಕೊಂಡು ಕೋರ್ಟ್‌ಗೆ ಸಲ್ಲಿಸಿದ್ದಾರೆ. ಬಲಾಢ್ಯರ ಅಕ್ರಮ ಪಂಪ್‌ಸೆಟ್‌ಗಳನ್ನು ತೆರವು ಮಾಡಿಸುವ ತಾಕತ್ತು ಯಾರಿಗೂ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಬಿ. ವೀರಯ್ಯ, ಜಿಗಳಿಯ ಬಿಳಸನೂರು ಚಂದ್ರಪ್ಪ, ಭಾನುವಳ್ಳಿಯ ಹೆಚ್. ನಾರಾಯಣಪ್ಪ, ಪವಾಡಿ ಬಸವರಾಜಪ್ಪ, ಟಿ. ರಂಗನಾಥ್, ಕುಂಬಾರ ಬಸವರಾಜ್, ಕೆಂಚಪ್ಪ, ಚಂದ್ರಪ್ಪ, ಕುಮಾರ್, ನಿಟ್ಟೂರಿನ ಧನಂಜಯ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ವಿದ್ಯಾರ್ಥಿ ವೇತನ : ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ದಾವಣಗೆರೆ, ಫೆ.17 - ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ-1 ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ನೀಡಲಾಗುವ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 28 ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪತ್ರಿಕೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಸಪ್ತಗಿರಿ ವಿದ್ಯಾಲಯದಲ್ಲಿ ಪಾದಪೂಜೆ



ದಾವಣಗೆರೆ, ಫೆ. 17- ನಗರದ ಕುಂದುವಾಡ ರಸ್ತೆಯಲ್ಲಿನ ಚಿಗಟೇರಿ ಲೇ ಔಟ್ ನ ಸಪ್ತಗಿರಿ ವಿದ್ಯಾಲಯದಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಂದ ಪಾಲಕ-ಪೋಷಕರಿಗೆ ಪಾದಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಸಪ್ತಗಿರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಮಹಾಂತೇಶ ಭಾರತಿ, ಶಾಲೆಯ ಪ್ರಾಂಶುಪಾಲ ದೇವರಾಜ್, ಶಾಲೆಯ ಮುಖ್ಯೋಪಾಧ್ಯಾಯಿನಿ ಶೈಲಜ ರಮೇಶ್ ಉಪಸ್ಥಿತರಿದ್ದರು.

ಕನ್ನಡ ಶಿಕ್ಷಕ ಹಾಲಸ್ವಾಮಿ ನಿರೂಪಿಸಿದರು. ವಿದ್ಯಾರ್ಥಿಗಳಾದ ಕಾಂಚನ ತಂಡದವರು ಪ್ರಾರ್ಥಿಸಿದರು. ಆಂಗ್ಲ ಭಾಷಾ ಶಿಕ್ಷಕ ಯಶವಂತ ಸ್ವಾಗತಿಸಿದರು. ಗಣಿತ ಶಿಕ್ಷಕ ತ್ರಿಗುಣ್ ವಂದಿಸಿದರು.

# ವ್ಯಕ್ತಿತ್ವ ವಿಕಸನದಿಂದ ಉನ್ನತ ಹುದ್ದೆ ಹೊಂದಲು ಸಾಧ್ಯ : ತರಳಬಾಳು ಶ್ರೀ



ಸಿರಿಗೆರೆ, ಫೆ.17- ವಿದ್ಯಾರ್ಥಿಗಳು ಕಿವಿಕೊಟ್ಟು ಕೇಳುವುದರ ಜೊತೆಗೆ ಮನನ ಮಾಡಿಕೊಂಡು ಅದರ ಬಗ್ಗೆ ವಿಚಾರ ಮಾಡುವುದು ಸೂಕ್ತ. ಕೇಳುವಾಗ ಶ್ರದ್ಧೆಯಿಂದ ಕೇಳಬೇಕು. ನಂತರ ವಿಚಾರಿಸಿ ಬಳಸಿಕೊಳ್ಳಬೇಕು. ಚೆನ್ನಾಗಿ ಓದದೇ ಇದ್ದರೆ ಜೀವನ ಪರಿವರ್ತನೆಯಾಗುವುದಿಲ್ಲ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ಇಲ್ಲಿನ ಶ್ರೀ ಗುರುಶಾಂತೇಶ್ವರ ದಾಸೋಹ ಭವನದಲ್ಲಿ ತರಳಬಾಳು ಹುಣ್ಣಿಮೆ ಮಹೋತ್ಸವದ ಮೂರನೇ ದಿನದ ಕಾರ್ಯಕ್ರಮದಲ್ಲಿ ವ್ಯಕ್ತಿತ್ವ ವಿಕಸನ ವಿಚಾರ ಗೋಷ್ಠಿಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ವ್ಯಕ್ತಿತ್ವ ವಿಕಸನದಿಂದ ಉನ್ನತ ಹುದ್ದೆ ಹೊಂದಲು ಸಾಧ್ಯ. ಪ್ರತಿಕ್ರಿಯೆ ನೀಡಿದ ರೀತಿ ನೀವುಗಳು ಪ್ರತಿಜ್ಞಾ ವಿಧಿಯನ್ನು ಪಾಲಿಸಬೇಕು. ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಚಿಂತನೆ, ತಪಸ್ಸು ಮಾಡಿ ಉತ್ತಮ ಜ್ಞಾನಿಗಳಾಗಬೇಕು ಎಂದು ಹೇಳಿದರು.

ಶಿಕಾರಿಪುರ ಸಾಧನಾ ಅಕಾಡೆಮಿಯ ಸಂಸ್ಥಾಪಕ ಬಿ. ಮಂಜುನಾಥ್, ಎಸ್ಸೆಸ್ಸೆಲ್ಸಿ, ಪಿಯುಸಿ ನಂತರ ಮುಂದೇನು ಎಂಬ ವಿಷಯದ ಬಗ್ಗೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಬದುಕಿನ ಆಯ್ಕೆ ಹೇಗಿರಬೇಕೆಂದರೆ ನಾವು ಗುಣಾತ್ಮಕವಾಗಿ ಯೋಚಿಸುವ ಆಯ್ಕೆಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಇನ್ನೊಬ್ಬರ ಸಿದ್ಧಾಂತಗಳಿಗೆ ಸಿಲುಕಬೇಡಿ. ನಿಮ್ಮದೇ ಆದ ಸಿದ್ಧಾಂತಗಳನ್ನು ರೂಪಿಸಿಕೊಳ್ಳಿ. ಆಗ ಮಾತ್ರ ಬದುಕಿನ ಫಲಿತಾಂಶ ವೃದ್ಧಿಸುತ್ತದೆ. ವಿದ್ಯಾರ್ಥಿಗಳಾದ ನಿಮಗೆ ಜೀವನದಲ್ಲಿ ಅತ್ಯುತ್ತಮ ಶಕ್ತಿ ಇದೆ. ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು.

ಮೈಸೂರಿನ ವ್ಯಕ್ತಿತ್ವ ವಿಕಸನ ತರಬೇತುದಾರ ಡಾ. ಚೇತನ್ ರಾಮ್ ಮಾತನಾಡಿ, ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ವ್ಯಕ್ತಿತ್ವ ಇರುತ್ತದೆ. ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಇರುವುದನ್ನು ತಿಳಿದರೆ ಮುಂದಿನದನ್ನು ಯೋಚಿಸಿ, ಕಂಡುಹಿಡಿದು ಬದಲಾವಣೆ ತಂದು ಇನ್ನು ಉತ್ತಮಗೊಳಿಸಬಹುದು. ಆಗ ಮಾತ್ರ ಬದಲಾವಣೆ ತರಲು ಸಾಧ್ಯ.

ಪ್ರತಿಯೊಬ್ಬರೂ ಅಗತ್ಯವಾದುದನ್ನು ಮಾತ್ರ ಬಳಸಿಕೊಳ್ಳಿ. ಸಾಧನೆಗಾಗಿ ಬದಲಾವಣೆ ಅಗತ್ಯ. ಸಮಯ ಚಿಕ್ಕದಾದರೂ ಸರಿ ಒಬ್ಬ ಮನುಷ್ಯ ಒಂದಷ್ಟು ಹೊತ್ತು ಒಂದೇ ಕೆಲಸವನ್ನು ಮಾಡಿದರೆ ಅದೇ ಏಕಾಗ್ರತೆ ಎಂದರು.

ಕಾರ್ಯಕ್ರದಲ್ಲಿ ಜಿ.ಮಂಜುನಾಥ್, ಡಾ.ಆರ್.ಎ. ಚೇತನ್‌ರಾಮ್, ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಎಸ್. ಬಿ.ರಂಗನಾಥ್, ವಿಶೇಷಾಧಿಕಾರಿ ಎಚ್.ವಿ.ವಾಮದೇವಪ್ಪ, ಶಾಲಾ-ಕಾಲೇಜುಗಳ ಪ್ರಾಚಾರ್ಯರು, ಉಪನ್ಯಾಸಕ ವರ್ಗ, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕೆ. ಎನ್.ನಟರಾಜ್ ಸ್ವಾಗತಿಸಿದರು, ಎಚ್.ವಿ. ನವೀನ್‌ಕುಮಾರ್ ನಿರೂಪಿಸಿದರು, ಸಿ.ಜಿ.ಗೋವರ್ಧನ್ ಶರಣು ಸಮರ್ಪಿಸಿದರು.

# ಯೋಗಪಟು ಪರಶುರಾಮ್‌ಗೆ ಬೆಸ್ಟ್ ಸೋಷಿಯಲ್ ವರ್ಕ್ಸ್ ಅವಾರ್ಡ್



ದಾವಣಗೆರೆ, ಫೆ.17- ಮೈ ಸ್ಮೈಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಇತ್ತೀಚೆಗೆ ಬೆಂಗಳೂರಿನ ಯಲಹಂಕದ ಅಂಬೇಡ್ಕರ್ ಸಭಾ ಭವನದಲ್ಲಿ ಹಮ್ಮಿಕೊಂಡಿದ್ದ 'ನನ್ನ ನಗು' ಕಾರ್ಯಕ್ರಮದಲ್ಲಿ ನಗರದ ಎಸ್‌ಎಸ್‌ಎಸ್ ಯೋಗ ಫೆಡರೇಷನ್ ಸಂಸ್ಥಾಪಕ ಅಧ್ಯಕ್ಷರು ಹಾಗೂ ಅಂತರರಾಷ್ಟ್ರೀಯ ಯೋಗಪಟು, ಯೋಗಾಚಾರ್ಯ ಎನ್.ಪರಶುರಾಮ್ ಅವರು ಬೆಸ್ಟ್ ಸೋಷಿಯಲ್ ವರ್ಕ್ಸ್ ಅವಾರ್ಡ್‌ಗೆ ಭಾಜನರಾಗಿದ್ದಾರೆ.

ಪರಶುರಾಮ್ ಅವರನ್ನು ಎಸ್‌ಎಸ್‌ಎಸ್ ಯೋಗ ಫೆಡರೇಷನ್ ಅಧ್ಯಕ್ಷ ರುದ್ರಪ್ಪ, ಉಪಾಧ್ಯಕ್ಷ ಗೋಪಾಲ್‌ರಾವ್ ಎಂ.ಎನ್. ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ ರಾಯ್ಕರ್ ನಿರ್ದೇಶಕರುಗಳಾದ ಎಸ್.ರಾಜಶೇಖರ್, ಅಜ್ಜಯ್ಯ, ಎಂ.ವೈ.ಸತೀಶ್, ರಾಘವೇಂದ್ರ ಚೌವ್ಹಾಣ್, ನಾಗರಾಜ್, ಜೆ.ಎಸ್. ವೀರೇಶ್ ಸೇರಿದಂತೆ ಅನೇಕ ಗಣ್ಯರು ಅಭಿನಂದಿಸಿದ್ದಾರೆ.

# ರಾಜನಹಳ್ಳಿ ಶ್ರೀಗಳ ಹೋರಾಟಕ್ಕೆ ವಿವಿಧ ಮಠಾಧೀಶರ ಬೆಂಬಲ



ಬೆಂಗಳೂರು, ಫೆ.17- ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಗೊಳಿಸುವಂತೆ ಹಾಗೂ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಗುರುವಾರ 8ನೇ ದಿನಕ್ಕೆ ಕಾಲಿಟ್ಟಿದೆ.

ಈ ದಿನದ ಧರಣಿಯಲ್ಲಿ ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಸಮುದಾಯದ ಹಿತಕ್ಕಾಗಿ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಆಗ್ರಹಿಸುವುದಕ್ಕಾಗಿ ಸತ್ಯಾಗ್ರಹ ಕೈಗೊಂಡಿರುವುದು ನ್ಯಾಯಯೋಚಿತವಾದದ್ದು ಎಂದರು.

ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿ, ಶ್ರೀಗಳು ಕೈಗೊಂಡಿರುವ ಸತ್ಯಾಗ್ರಹ 152 ಜಾತಿಗಳ ಶಿಕ್ಷಣ ಮತ್ತು ಉದ್ಯೋಗದಲ್ಲಿ ಜನಸಂಖ್ಯೆ ಗನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕು. ಇದು ಯಾವುದೇ ಒಂದು ಸಮುದಾಯದ ಬೇಡಿಕೆಯಲ್ಲ, 152 ಸಮುದಾಯಗಳ ಬೇಡಿಕೆ ಎಂದು ಹೇಳಿದರು.

ಸಿರಗುಪ್ಪ ಶಾಸಕ ಎಸ್. ಸೋಮಲಿಂಗಪ್ಪ, ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಗೌರಿಬಿದನೂರು ಶಾಸಕ ಶಿವಶಂಕರ್, ಹೂವಿನಹಡಗಲಿ ಶಾಸಕ ಪಿ. ಟಿ.ಪರಮೇಶ್ವರ್ ನಾಯ್ಕ್, ಶಿರಹಟ್ಟಿ ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ, ಗೋಕಾಕ್ ಮಾಜಿ ಶಾಸಕ ಮುತ್ತಣ್ಣ, ಸೋಮಣ್ಣ ಬೇವಿನಮರದ, ಸಿ.ಎಸ್.ನಾಯಕ, ಪವಾಡಿ ಹನುಮಂತಪ್ಪ, ರಾಯಚೂರು ಶ್ರೀಮತಿ ರೂಪ ಶ್ರೀನಿವಾಸ ನಾಯಕ, ನಾಗವೇಣಿ, ಶುಭಾ ವೇಣು ಗೋಪಾಲ್, ಮಂಜುಳ ಶ್ರೀನಿವಾಸ್ ಸೇರಿದಂತೆ ಹಲವು ಮಹಿಳಾ ಮುಖಂಡರು ಭಾಗವಹಿಸಿದ್ದರು.

ಬಿ.ಎಸ್.ಪಿ ರಾಜ್ಯ ಉಸ್ತುವಾರಿ ಹಾಗೂ ದಲಿತ ಮುಖಂಡರಾದ ಮಾರಸಂದ್ರ ಮುನಿಯಪ್ಪ, ಅಂಬೇಡ್ಕರ್ ವಿಚಾರವಾದಿಗಳಾದ ಗೋಪಿನಾಥ್, ರಿಪಬ್ಲಿಕನ್ ಪಾರ್ಟಿ ರಾಜ್ಯಾಧ್ಯಕ್ಷ ಎನ್.ವೆಂಕಟಸ್ವಾಮಿ, ದಲಿತ ಮುಖಂಡರು, ಹೋರಾಟಗಾರರಾದ ಮಾವಳ್ಳಿ ಶಂಕರ್, ಬಿಬಿಎಂಪಿ ಮಾಜಿ ಸದಸ್ಯರಾದ ನರಸಿಂಹ ನಾಯಕರು ಮಾತನಾಡಿದರು.

ಶ್ರೀ ಸಂಜಯ್ ಕುಮಾರ ಸ್ವಾಮೀಜಿ, ಶ್ರೀ ಮಲ್ಲಿಕಾರ್ಜುನ್ ಸ್ವಾಮೀಜಿ ಆಶೀರ್ವಚನ ನೀಡಿದರು.

ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಮಾಜಿ ಅಬ್ದುಲ್ ಜಬ್ಬಾರ್, ಮುಖಂಡರಾದ ಟಿ.ಈಶ್ವರ್, ಸಿರಿಗೆರೆ ತಿಪ್ಪೇಶ್, ಹರ್ತಿಕೋಟೆ ವೀರೇಂದ್ರ ಸಿಂಹ, ಹೊಸಪೇಟೆ ಜಂಬಣ್ಣ ನಾಯಕ, ನಿವೃತ್ತ ಡಿ.ಸಿ ಬಿ.ಶಿವಪ್ಪ, ಕೆ.ಎಸ್.ಮೃತ್ಯುಂಜಯಪ್ಪ, ಕ.ರಾ.ಪ.ಪಂ.ಸ ನೌಕರರ ಸಂಘದ ಅಧ್ಯಕ್ಷ ತಿಪ್ಪೇಸ್ವಾಮಿ, ಪ್ರಧಾನ ಕಾರ್ಯದರ್ಶಿ ರಾಜಶೇಖರ್ ಸಂಘಟನಾ ಕಾರ್ಯದರ್ಶಿ ಮಂಜುನಾಥ್, ಪ್ರಭುಸ್ವಾಮಿ ಇನ್ನೂ ಮುಂತಾದವರು ಹಾಜರಿದ್ದರು.

# ಕಟ್ಟುನಿಟ್ಟಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ಸಿದ್ಧರಾಗಲು ಕರೆ



**ಹರಿಹರ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ**

ಹರಿಹರ, ಫೆ. 17- ಕಳೆದ ವರ್ಷ ಕೊರೊನ ರೋಗವು ಹೆಚ್ಚಿನ ಪ್ರಮಾಣದಲ್ಲಿ ಹರಡಿದ್ದ ಪರಿಣಾಮವಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆ ತಕ್ಕಮಟ್ಟಿಗೆ ನಡೆಯಿತು. ಆದರೆ ಈ ಬಾರಿ ಕೊರೊನ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬಂದಿರುವುದರಿಂದ ಕಟ್ಟುನಿಟ್ಟಾಗಿ ನಡೆಯಲಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ.ಬಿ.ಸಿ. ಸಿದ್ದಪ್ಪ ಹೇಳಿದರು.

ನಗರದ ಶ್ರೀಮತಿ ಹಾಲಮ್ಮ ಶಾಮನೂರು ಶಿವಪ್ಪ ಪ್ರೌಢಶಾಲಾ ಸಭಾಂಗಣದಲ್ಲಿ ಎಸ್ಸೆಸ್ಸೆಲ್ಸಿ ಪೂರ್ವ ಸಿದ್ಧತೆ ಪರೀಕ್ಷಾ ಕ್ರಮ ಹಾಗೂ ಶಿಕ್ಷಕರ ಜವಾಬ್ದಾರಿಗಳ ಕುರಿತು ಹಮ್ಮಿಕೊಂಡಿದ್ದ ಸಭೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಎಲ್ಲಾ ಮುಖ್ಯಶಿಕ್ಷಕರು ಸರ್ಕಾರದ ಮಾರ್ಗಸೂಚಿ ಅನ್ವಯ ಶಾಲೆಯಲ್ಲಿ ಯಾವುದೇ ರೀತಿಯ ತೊಂದರೆಗಳು ನಡೆಯದಂತೆ ಪರೀಕ್ಷಾ ಸಿದ್ದತೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಪರೀಕ್ಷೆ ಸಮಯದಲ್ಲಿ ಮಕ್ಕಳಿಗೆ ಯಾವುದೇ ರೀತಿಯ ತೊಂದರೆ ಬರದಂತೆ ಮುತುವರ್ಜಿ ವಹಿಸಬೇಕು. ಸರ್ಕಾರದ ಮಾರ್ಗಸೂಚಿ ವಿಧಾನವನ್ನು ಮಕ್ಕಳ ಹಾಗೂ ಪೋಷಕರ ಗಮನಕ್ಕೆ ತರಬೇಕು. ಶಾಲೆಯ ಆವರಣದೊಳಗೆ ಅಪರಿಚಿತರು ಬರದಂತೆ ಎಚ್ಚರ ವಹಿಸಬೇಕು. ಪರೀಕ್ಷೆ ವಿಚಾರಕ್ಕೆ ಸಂಬಂಧಿಸಿದಂತೆ ಏನಾದರೂ ಸಮಸ್ಯೆ ಉಲ್ಬಣವಾದರೆ ಹಿರಿಯ ಅಧಿಕಾರಿಗಳ ಗಮನಕ್ಕೆ ಮತ್ತು ಮಕ್ಕಳ ಪೋಷಕರ ಗಮನಕ್ಕೆ ಆದಷ್ಟು ಬೇಗ ತರಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಜಯಣ್ಣ, ರಾಜ್ಯ ಸರ್ಕಾರಿ ನೌಕರರ ಸಂಘ ಹರಿಹರ ತಾಲ್ಲೂಕು ಘಟಕದ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ಶ್ರೀಮತಿ ಹಾಲಮ್ಮ ಶಾಮನೂರು ಶಿವಪ್ಪ ಪ್ರೌಢಶಾಲೆ ಮುಖ್ಯ ಶಿಕ್ಷಕ ಚನ್ನಬಸಪ್ಪ, ತಾಲ್ಲೂಕು ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಗೌರವ ಅಧ್ಯಕ್ಷ ಶ್ರೀನಿವಾಸ್, ಶಿಕ್ಷಣ ಸಂಯೋಜಕ ಮಂಜುನಾಥ್ ಎಸ್ ಇತರರು ಉಪಸ್ಥಿತರಿದ್ದರು.

# ಅಂಬೇಡ್ಕರ್ ಪ್ರತಿಮೆ : ದಲಿತ ಸಮುದಾಯವನ್ನು ಕಡೆಗಣಿಸಿದ ಜಿಲ್ಲಾಡಳಿತ

ದಾವಣಗೆರೆ, ಫೆ.17- ನಗರದ ಅಂಬೇಡ್ಕರ್ ವೃತ್ತದಲ್ಲಿ ಇದೇ ದಿನಾಂಕ 13 ರಂದು ಡಾ. ಬಿ.ಆರ್. ಅಂಬೇಡ್ಕರ್ ಕಂಚಿನ ಪ್ರತಿಮೆ ಲೋಕಾರ್ಪಣೆ ಕಾರ್ಯಕ್ರಮವನ್ನು ತರಾತುರಿಯಲ್ಲಿ ಮಾಡುವುದಲ್ಲದೇ, ದಲಿತ ಸಮುದಾಯವನ್ನು ಕಡೆಗಣಿಸಲಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಡಾ. ಬಿ.ಆರ್. ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಹೆಚ್. ಮಲ್ಲೇಶ್ ನೇರವಾಗಿ ಆರೋಪಿಸಿದರು.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೊಂದು ಬಿಜೆಪಿ ಕಾರ್ಯಕ್ರಮ ಎನ್ನುವಂತೆ ಬಿಂಬಿಸಿದ್ದು, ನಿಗದಿಪಡಿಸಿದ ಸಮಯಕ್ಕಿಂತ ಮುಂಚೆಯೇ ಕಾರ್ಯಕ್ರಮವನ್ನು ಮುಗಿಸಿದ್ದು, ಯಾವುದೇ ದಲಿತ ಸಂಘಟನೆಗಳನ್ನು ಆಹ್ವಾನಿಸದೇ ಸಂಸದರು, ಶಾಸಕರು ದಲಿತ ಸಮುದಾಯವನ್ನು ಅವಮಾನಗೊಳಿಸಿದ್ದಾರೆಂದು ಕಿಡಿಕಾರಿದರು.

ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಪಾಲಿಕೆ ಆಯುಕ್ತರು, ಸ್ಮಾರ್ಟ್ ಸಿಟಿ ಅಧಿಕಾರಿಗಳು, ಸಮಾಜ ಕಲ್ಯಾಣಾಧಿಕಾರಿಗಳು ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯಗಳನ್ನು ಗಾಳಿಗೆ ತೂರಿದ್ದಾರೆ ಎಂದು ದೂರಿದರು.

ಜಿಲ್ಲಾ ಕೇಂದ್ರದಲ್ಲಿ ಅದರಲ್ಲೂ ನಗರದ ಮಧ್ಯೆ ಭಾಗದಲ್ಲಿ ಅಂಬೇಡ್ಕರ್ ಭವನ ನಿರ್ಮಿಸುವಂತೆ ಆಗ್ರಹಿಸಿ, ಸುಮಾರು 15-20 ವರ್ಷಗಳಿಂದ ನಡೆಸಿರುವ ಹೋರಾಟವನ್ನು ನಿರ್ಲಕ್ಷಿಸುವ ಮೂಲಕ ಜಿಲ್ಲಾಡಳಿತ ದಲಿತ ವಿರೋಧಿ ನೀತಿ ಅನುಸರಿಸುತ್ತಿದೆ. ಇಂತಹ ಅವಮಾನಗಳನ್ನು ಕೊನೆಗಾಣಿಸಲು, ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಒತ್ತಾಯಿಸಿ, ನಿರಂತರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಶೋಷಿತ ಸಮುದಾಯವನ್ನು ನಿರ್ಲಕ್ಷಿಸಿರುವುದರ ವಿರುದ್ಧ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಪ್ರಗತಿಪರ ದಲಿತ ಚಿಂತಕರು, ದಲಿತ ಚಳವಳಿಗಾರರು, ಅಂಬೇಡ್ಕರ್ ಅನುಯಾಯಿಗಳ ಜೊತೆಗೂಡಿ ಜಿಲ್ಲೆಯಲ್ಲಿ ಜನಾಂದೋಲನ ರೂಪಿಸುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ದಲಿತ ಸಂಘರ್ಷ ಸಮಿತಿಯ ಎಸ್.ಜಿ. ವೆಂಕಟೇಶ್ ಬಾಬು, ಹೆಚ್.ಸಿ. ಮಲ್ಲಪ್ಪ, ಡಿ. ತಿಪ್ಪಣ್ಣ, ಸಿ. ಬಸವರಾಜ್, ಡಿ. ಸಮಾದೆಪ್ಪ ಶಾಮನೂರು, ವಕೀಲರಾದ ಅನಿಸ್ ಪಾಷ ಮತ್ತಿತರರು ಉಪಸ್ಥಿತರಿದ್ದರು.

# ಚನ್ನಗಿರಿ : ಕ.ಸಾ.ಪ.ದಿಂದ ಕಣವಿ ಅವರಿಗೆ ಶ್ರದ್ಧಾಂಜಲಿ



ಚನ್ನಗಿರಿ, ಫೆ. 17- ಕನ್ನಡದ ಸಮನ್ವಯ ಕವಿ, ನಾಡೋಜ ಡಾ. ಚೆನ್ನವೀರ ಕಣವಿ ಅವರ ನಿಧನದ ಪ್ರಯುಕ್ತ ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ನಿವೃತ್ತ ನೌಕರರ ಭವನದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಹಾಗೂ ನುಡಿ ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಪಾಂಡೋಮಟ್ಟಿ ವಿರಕ್ತಮಠದ ಡಾ. ಶ್ರೀ ಗುರುಬಸವ ಮಹಾಸ್ವಾಮೀಜಿ ವಹಿಸಿದ್ದರು. ಚನ್ನಗಿರಿ ಕಸಾಪ ಅಧ್ಯಕ್ಷ ಬಸವಾಪಟ್ಟಣದ ಎಲ್.ಜಿ. ಮಧುಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ನಿಕಟಪೂರ್ವ ಕಸಾಪ ಅಧ್ಯಕ್ಷ ಎಂ.ಯು. ಚನ್ನಬಸಪ್ಪ, ಕಾರ್ಯದರ್ಶಿ ಎಂ.ಎಸ್. ಬಸವನಗೌಡ, ಕೋಶಾಧ್ಯಕ್ಷ ಬಿ.ಇ. ಸಿದ್ದಪ್ಪ, ನಿರ್ದೇಶಕರಾದ ಟಿ.ವಿ.ಚಂದ್ರಣ್ಣ ಪಾಂಡೋಮಟ್ಟಿ, ಬಾರಾ ಮಹೇಶಣ್ಣ, ನಿವೃತ್ತ ನೌಕರರ ಸಂಘದ ಜಂಟಿ ಕಾರ್ಯದರ್ಶಿಗಳಾದ ಜಿ.ಚಿನ್ನಸ್ವಾಮಿ, ಗಂಗಾ ಪ್ಯಾರಾಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಹೊನ್ನಾಳಿ : ಮಾಯಾಂಬಿಕಾ ದೇವಿ ಅಡ್ಡಪಲ್ಲಕ್ಕಿ ಜಾತ್ರಾ ಮಹೋತ್ಸವ



ಹೊನ್ನಾಳಿ, ಫೆ. 17- ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದ ಶ್ರೀ ಮಾಯಾಂಬಿಕಾದೇವಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ವತಿಯಿಂದ ಭರತ ಹುಣ್ಣಿಮೆ ಪ್ರಯುಕ್ತ ಮಾಯಾಂಬಿಕಾ ದೇವಿ ಅಡ್ಡಪಲ್ಲಕ್ಕಿ ಜಾತ್ರಾ ಮಹೋತ್ಸವ ಹಾಗೂ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಗ್ರಾ.ಪಂ. ಜನಪ್ರತಿನಿಧಿಗಳು, ಜಿ.ಪಂ. ಸದಸ್ಯೆ, ಗ್ರಾಮದ ವಿವಿಧ ದೇವಸ್ಥಾನಗಳ ಸಮಿತಿ ಅಧ್ಯಕ್ಷರು, ಯರೇಹಳ್ಳಿ ವ್ಯವಸಾಯ ಸಹಕಾರ ಸಂಘದ ಆಡಳಿತ ಮಂಡಳಿಯವರಿಗೆ ಮತ್ತು ಗ್ರಾಮದ ವಿವಿಧ ಜನಾಂಗದ ನಿವೃತ್ತಿಯಾದ ನೌಕರ ವರ್ಗದವರಿಗೆ ವಿಶೇಷವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಅಧ್ಯಕ್ಷರಾದ ದೀಪಾ ಜಗದೀಶ್, ಗ್ರಾ.ಪಂ. ಅಧ್ಯಕ್ಷ ದಯಾನಂದ, ಗ್ರಾಮದ ನಿವೃತ್ತ ಪಿಡಬ್ಲ್ಯೂಡಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ದಾವಣಗೆರೆ) ಎಸ್.ಎಲ್. ಆನಂದಪ್ಪ, ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕೆ.ಆರ್. ಶಂಭುಲಿಂಗಪ್ಪ, ನಿವೃತ್ತ ಉಪನ್ಯಾಸಕ ಜಿ.ಎಸ್. ರುದ್ರಪ್ಪ, ನಿವೃತ್ತ ಶಿಕ್ಷಕ ಎಂ.ತಿಪ್ಪಣ್ಣ, ಶಿವಕುಮಾರಸ್ವಾಮಿ, ರೇವಣಸಿದ್ದಪ್ಪ, ಮಹೇಶ್ವರಪ್ಪ, ಜಯಪ್ಪ, ಬಸವರಾಜಪ್ಪ, ಹಾದಿಮನೆ ರಾಜಣ್ಣ, ತುಮಕೂರು ಗೃಹಮಂಡಳಿ ಸಹಾಯಕ ಕಾರ್ಯ ಪಾಲಕ ಅಭಿಯಂತರ ಎಸ್.ಎಲ್. ಹಾಲೇಶಪ್ಪ, ದೊಡ್ಡರಂಗಪ್ಪ, ಪರಮೇಶ್ವರಪ್ಪ, ಯು. ಆರ್. ಸತೀಶ್, ಯು.ಆರ್. ಅಶೋಕ್, ಬಸವರಾಜ, ರಾಜಪ್ಪ, ತಿಪ್ಪೇಶ್, ಮಂಜು, ಮಹೇಶ್ವರಪ್ಪ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

# ಸಿದ್ದಮ್ಮನಹಳ್ಳಿಯಲ್ಲಿ ಶೇಂಗಾ ಬೆಳೆ ಪ್ರಾತ್ಯಕ್ಷಿಕೆ



ದಾವಣಗೆರೆ, ಫೆ.17 - ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ವತಿಯಿಂದ ಜಗಳೂರು ತಾಲ್ಲೂಕಿನ ಸಿದ್ದಮ್ಮನಹಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಎಣ್ಣೆಕಾಳು ಯೋಜನೆ ಅಡಿಯಲ್ಲಿ ಗುಚ್ಛ ಗ್ರಾಮಗಳ ಶೇಂಗಾ ಬೆಳೆಯಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಂಡಿದ್ದರು.

ಕೃಷಿ ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್, ಶೇಂಗಾ ಬೆಳೆ ಮೊಳಕೆ ಒಡೆದು, ಹೂವಾಡುವ ಹಂತದಲ್ಲಿ ಇದೆ. ಈ ಸಮಯದಲ್ಲಿ ಹಸಿರು ಹುಳುವಿನ ನಿರ್ವಹಣೆಗಾಗಿ ಕ್ಲೋರೋಪೈರಿಫಾಸ್ 2 ಎಂ.ಎಲ್ ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪರಣೆ ಮಾಡಬೇಕು ಹಾಗೂ ನೀರಿನಲ್ಲಿ ಕರಗುವ ಪೊಟ್ಯಾಶಿಯಂ ನೈಟ್ರೇಟ್ 5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪರಣೆ ಮಾಡುವುದರಿಂದ ಪೋಷಕಾಂಶಗಳ ನಿರ್ವಹಣೆಯನ್ನು ಮಾಡಬಹುದು ಎಂದರು.

ಶೇಂಗಾ ತಾಕುಗಳಿಗೆ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ದೇವರಾಜ್ , ಬಸವನಗೌಡ, ವಿಜ್ಞಾನಿಗಳು ಹಾಗೂ ಪ್ರಗತಿಪರ ರೈತರಾದ ಓಂಕಾರಪ್ಪ, ಕೃಷ್ಣಪ್ಪ ಕ್ಷೇತ್ರ ಭೇಟಿ ಮಾಡಿದರು.

# ಅಂತರ್‌ಶಾಲಾ ಟೇಬಲ್ ಟೆನ್ನಿಸ್ : ಜೈನ್ ವಿದ್ಯಾಲಯಕ್ಕೆ ಜಯ



ದಾವಣಗೆರೆ, ಫೆ. 17-ನಗರದ ಪಿ.ಜೆ. ಬಡಾವಣೆಯ ಜೈನ್ ವಿದ್ಯಾಲಯದಲ್ಲಿ ಈಚೆಗೆ ನಡೆದ ಅಂತರ್ ಶಾಲಾ ಟೇಬಲ್ ಟೆನ್ನಿಸ್ ಸ್ಪರ್ಧೆಯಲ್ಲಿ ಜೈನ್ ವಿದ್ಯಾಲಯದ ಸ್ಪರ್ಧಾಳುಗಳು ವಿಜೇತರಾಗಿದ್ದಾರೆ.

# ಹಿರಿಯ ಕವಿ ಚನ್ನವೀರ ಕಣವಿ ನಿಧನಕ್ಕೆ ಸಿಪಿಐ ಜಿಲ್ಲಾ ಮಂಡಳಿ ಸಂತಾಪ

ದಾವಣಗೆರೆ, ಫೆ. 17- ಸರಳ ಸಜ್ಜನಿಕೆಯ ಹಿರಿಯ ಕವಿ, ನಾಡೋಜ ಚನ್ನವೀರ ಕಣವಿ ನಿಧನಕ್ಕೆ ನಗರದ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ತೀವ್ರ ಸಂತಾಪ ಸೂಚಿಸಿದೆ. ಅವರೊಬ್ಬ ಭಾವಜೀವಿಯಾಗಿದ್ದರಲ್ಲದೇ, ರಾಜ್ಯದ ಸಾಹಿತ್ಯ, ಸಂಸ್ಕೃತಿಯ ರಾಯಭಾರಿಯಾಗಿದ್ದರು ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ಅಶೋಕ ರಸ್ತೆಯಲ್ಲಿರುವ ಕಾಂ. ಪಂಪಾಪತಿ ಭವನದಲ್ಲಿ ನಡೆದ ಸಂತಾಪ ಸಭೆಯಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾ ಮಂಡಳಿ ಸಹಕಾರ್ಯದರ್ಶಿಗಳಾದ ಹೆಚ್.ಜಿ. ಉಮೇಶ್, ಆವರಗೆರೆ ವಾಸು, ಖಜಾಂಚಿ ಆನಂದ ರಾಜ್, ಮುಖಂಡರುಗಳಾದ ಟಿ.ಎಸ್. ನಾಗರಾಜ್, ಎಂ.ಬಿ. ಶಾರದಮ್ಮ, ಎನ್.ಟಿ. ಬಸವರಾಜ್, ಕೆ.ಜಿ. ಶಿವಮೂರ್ತಿ, ಐರಣಿ ಚಂದ್ರು, ಸಿ. ರಮೇಶ್, ಎನ್. ಹೆಚ್. ರಾಮಣ್ಣ, ನರೇಗಾ ರಂಗನಾಥ್, ನಿಟುವಳ್ಳಿ ಬಸವರಾಜ್, ಸರೋಜಾ, ವಿ. ಲಕ್ಷ್ಮಣ ಉಪಸ್ಥಿತರಿದ್ದರು.


**ಸೈಟ್‌ಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ 40x60 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ 30x40 ಉತ್ತರ, ಭೂಮಿಕ ನಗರದಲ್ಲಿ 30x50 ಉತ್ತರ, ಬನಶಂಕರಿ ಬಡಾವಣೆ 30x50 ಪಶ್ಚಿಮ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಬೂಸ್ನೂರ್ : 98440-63409
ಬೆಂಗಳೂರು ಮತ್ತು ಮೈಸೂರಿನಲ್ಲೂ ಸಹ ಬೇಕಾಗಿದೆ

**ಬಾಡಿಗೆಗೆ**
3000 ಚ. ಅಡಿ ಮೊದಲನೇ ಮಹಡಿ, ಪಿ.ಜೆ. ಬಡಾವಣೆ, ಕಮರ್ಷಿಯಲ್ 22x55ರ 2 ಗೋಡೌನ್‌ಗಳು, ಬಸಾಪುರ ರಸ್ತೆ ಹತ್ತಿರ ಬಾಡಿಗೆ ಇವೆ.
94480 28103

**ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ**
ವಿದ್ಯಾನಗರ, ದಾವಣಗೆರೆ. ಸಂಪರ್ಕಿಸುವ ಸಮಯ : ಬೆಳಿಗ್ಗೆ 11.00 ರಿಂದ ಸಂಜೆ 5.00ವರೆಗೆ
ಫೋ. : 08192 254736

**WANTED**
Staff required for Hotel
1) South Indian Cheff
Davangere. Contact :
99009 26209
74065 59352

**ಮನೆ ಬಾಡಿಗೆಗೆ / ಲೀಸ್‌ಗೆ ಇವೆ**
ಸಿಂಗಲ್ ಬೆಡ್‌ರೂಂ, ಡಬಲ್ ಬೆಡ್‌ರೂಂ ಮನೆಗಳು ವಿದ್ಯಾನಗರ, ಶಿವಕುಮಾರ ಸ್ವಾಮಿ ಬಡಾವಣೆ, ಸರಸ್ವತಿ ನಗರ ಜಯನಗರದಲ್ಲಿ ಮನೆ ಬಾಡಿಗೆಗೆ / ಲೀಸ್‌ಗೆ ಇವೆ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715
½ ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ

**ರೂಮ್ಸ್ ಬಾಡಿಗೆಗೆ ಇವೆ**
ದಾವಣಗೆರೆ ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಪ್ರತ್ಯೇಕ ಅಟ್ಯಾಚ್ ಬಾತ್ ರೂಂವುಳ್ಳ ಮೂರು ರೂಂಗಳು ಬಾಡಿಗೆಗೆ ಇವೆ. (Only For Ladies) ಸಂಪರ್ಕಿಸಿ
97427 67274, 93538 97342

**ಡಾಲರ್ಸ್ ಕಾಲೋನಿಯಲ್ಲಿ, ಬನಶಂಕರಿ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ**
70x65 Corner, 30x50 South, 30x50, 30x50 West ಅಕ್ಕಪಕ್ಕ, 30x50, 30x50 South ಅಕ್ಕಪಕ್ಕ, 30x40 West 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮಾರಾಟಕ್ಕೆ/ಖರೀದಿಗೆ ವಿಚಾರಿಸಿರಿ**
ಬಸವೇಶ್ವರ ಲೇಔಟ್ 40 ಅಡಿ ರಸ್ತೆ, ಪೂರ್ವಕ್ಕೆ 30x50 ಸೈಟ್, 30x40 ಉತ್ತರ 30x40 3 ಸೈಟ್ ಪೂರ್ವಕ್ಕೆ
ಸುರೇಶ್ 95911 60520

**ಸೈಟ್ ಮಾರಾಟಕ್ಕಿದೆ**
ಶಿವ ಪಾರ್ವತಿ ಲೇಔಟ್ 30x40, 30x40 ಅಕ್ಕ-ಪಕ್ಕ, ಪಶ್ಚಿಮ ಸೈಟ್ ಮಾರಾಟಕ್ಕಿದೆ.
ರಿಯಲ್ ಎಸ್ಟೇಟ್ ಏಜೆಂಟ್
86181 82332

**ಮನೆ, ಮಳಿಗೆ ಬಾಡಿಗೆಗಿದೆ**
40 ಫೀಟ್ ರೋಡ್, ಡಿಸಿಎಂ ಹಿಂಭಾಗ, ಎಸ್. ಎಸ್. ಹಾಸ್ಪಿಟಲ್ ರೋಡ್, ಶಕ್ತಿ ನಗರ ಸರ್ಕಲ್, ದಾವಣಗೆರೆ ಇಲ್ಲಿ 30x60 ಪೂರ್ವ ಫೇಸ್ ವುಳ್ಳ ಮೊದಲನೆ ಮಹಡಿಯಲ್ಲಿ 2 ಬೆಡ್ ರೂಂವುಳ್ಳ ಮನೆ ಮತ್ತು ಕೆಳಗಡೆ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ:
99161 79135, 90080 30330

**ನವರ್ಣ ತಂತ್ರ ಶಕ್ತಿ**
ಜ್ಯೋತಿಷ್ಯ/ಸಂಖ್ಯಾ/ವಾಸ್ತು/ಹಸ್ತ ಶಾಸ್ತ್ರ
ಯಂತ್ರ, ಮಂತ್ರ, ತಂತ್ರ ಹಾಗೂ 6 ತರಹ ವಿದ್ಯೆಯನ್ನು ಕಲಿಸಿಕೊಡಲಾಗುವುದು. ಕಲಿತು ನೀವೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಹಾಗೂ ಎಂತಹ ಸಮಸ್ಯೆ ಇದ್ದರೂ ಮಂತ್ರ ಕೊಡಲಾಗುವುದು.
97409 55345

**ಬೇಕಾಗಿದ್ದಾರೆ**
3 ವರ್ಷ GST, IT & TALLY ಅನುಭವವಿರುವ (ಬಿ.ಕಾಂ ) ಅಕೌಂಟೆಂಟ್ ಹುದ್ದೆಗೆ ಬೇಕಾಗಿದ್ದಾರೆ. ವೇತನ ರೂ 08-10 ಸಾವಿರ. ಆಸಕ್ತರು ಸಂಪರ್ಕಿಸಿ
94481 32721
99866 21324

**SHOPS FOR RENT**
(With Wash Room Facility)
N.R. ROAD, DAVANGERE.
94483 69523

**S.R.S. Solar Energy**
10 ವರ್ಷ ವಾರಂಟಿಯುಳ್ಳ ಸೋಲಾರ ವಾಟರ್ ಹೀಟರ್‌ಗಳು, ಸೋಲಾರ್ ವಾಟರ್ ಪಂಪ್, ಹೋಂ ಲೈಟಿಂಗ್ ಸಿಸ್ಟಮ್ಸ್ ಇತ್ಯಾದಿ ಸೋಲಾರ್ ಉಪಕರಣಗಳು ದೊರೆಯುತ್ತವೆ. ಡೀಲರ್ಸ್ ಹಾಗು ಸೇಲ್ಸ್ ಪರ್ಸನ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ
72043 63665, 99005 47328

**ಬೇಕಾಗಿದ್ದಾರೆ**
ವೀರಶೈವ ಖಾನಾವಳಿಯಲ್ಲಿ ಕೆಲಸಕ್ಕೆ ಪುರುಷರು ಮತ್ತು ಮಹಿಳೆಯರು ಹೆಲ್ಪರ್ ಹಾಗು ಚಪಾತಿ ಮಾಡಲು ಬೇಕಾಗಿದ್ದಾರೆ.
99017 70830

**ಸೈಟ್‌ಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ (KHB)ಯ ಪಕ್ಕದ ಫೈನಲ್ ಅಪ್ರೂವಲ್ಡ್ ಲೇಔಟ್‌ನಲ್ಲಿ ಕಡಿಮೆ ದರದಲ್ಲಿ ನಿವೇಶನಗಳು ಮಾರಾಟಕ್ಕಿವೆ. ಅಳತೆ: 30x40, 30x45, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30 ಅಡಿಯ ಪಶ್ಚಿಮ ದಿಕ್ಕಿನ ಸೈಟ್ ಮಾರಾಟಕ್ಕಿದೆ (14 ಲಕ್ಷ ರೂಗಳು)
86182 84172 (ಏಜೆಂಟ್)
82965 58878

**ಡ್ರೈವರ್ ಬೇಕಾಗಿದ್ದಾರೆ**
ಅನುಭವವುಳ್ಳ ಕಾರ್ ಡ್ರೈವರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಊಟ ಹಾಗೂ ವಸತಿ ನೀಡಲಾಗುವುದು. ಬ್ಯಾಡ್ಜ್ ಉಳ್ಳವರು ಸಂಪರ್ಕಿಸಿ :
94489 80070
78991 90070

**ಕಮರ್ಷಿಯಲ್ ಜಾಗ ಬಾಡಿಗೆಗೆ ಬೇಕಾಗಿದೆ**
ದಾವಣಗೆರೆ ನಗರದ ಕುಂದವಾಡ ಕೆರೆಯ ಹತ್ತಿರದಲ್ಲಿ ಸುಮಾರು 10 ಸಾವಿರ ಚ.ಅಡಿ ಕಮರ್ಷಿಯಲ್ ಜಾಗ ಬಾಡಿಗೆಗೆ ಬೇಕಾಗಿದೆ.
98807 39392

**ಹೊಸಮನೆ ಮಾರಾಟಕ್ಕಿದೆ**
30x50 ರಲ್ಲಿ ಸ್ವಂತಕ್ಕೆ ಕಟ್ಟಿಕೊಂಡಿರುವ ಡೂಪ್ಲೆಕ್ಸ್ ಮನೆ ಶಾಮನೂರಿನ ಯುರೋ ಕಿಡ್ಸ್ ಸ್ಕೂಲ್‌ನ ಹತ್ತಿರ ಸಂಪರ್ಕಿಸಿ
73492 00928

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಬಿ' ಬ್ಲಾಕ್, ಕುವೆಂಪು ನಗರ, 5ನೇ ಮೇನ್, 19ನೇ ಕ್ರಾಸ್, 3993/105, ಎರಡು ಬೆಡ್ ರೂಂ, ಕಾರ್ ಪಾರ್ಕಿಂಗ್ ವ್ಯವಸ್ಥೆ ಇರುವ ಮನೆ ಬಾಡಿಗೆಗೆ ಇದೆ. ನೆಲಮಹಡಿ, ಎ.ಇ.ಹೆಚ್. ವಾಲ್‌ರೋಬ್‌ಗಳು, ಬೋರ್‌ವೆಲ್ ಹಾಗೂ ಕಾರ್ಪೊರೇಷನ್ ನೀರಿನ ಸೌಲಭ್ಯವಿದೆ.
ಫೋ. : 70190 89694

**ಸೈಟ್‌ಗಳು ಮಾರಾಟಕ್ಕಿವೆ**
ಎಂಸಿಸಿ 'ಬಿ' ಬ್ಲಾಕ್ 40x60 ಪೂರ್ವ, ಎನ್ ಆರ್. ಲೇಕ್ ಸಿಟಿ 30x50, 30x50 ಪಶ್ಚಿಮ, 1ಎಕರೆ ನೀರಾವರಿ ಜಮೀನು ಶಿರಮನಹಳ್ಳಿ, ಎಸ್.ಎಸ್. ಲೇಔಟ್ 40x60 ಪೂರ್ವ
ರಿಯಲ್ ಎಸ್ಟೇಟ್ ಏಜೆಂಟ್ ಪ್ರಶಾಂತ್
99726 70257

**ಸೈಟ್‌ಗಳು ಮಾರಾಟಕ್ಕಿವೆ**
ಜಯನಗರ ಹಾಸ್ಟೆಲ್ ಹತ್ತಿರ 44x50 ಪಶ್ಚಿಮ ಮತ್ತು ಬಾಡಾ ಕ್ರಾಸ್ ಬೈಪಾಸ್ ಹತ್ತಿರ 40x30, 40x30 ಅಪ್ರೂಡ್ ಸೈಟ್‌ಗಳು ಮಾರಾಟಕ್ಕಿವೆ. ಸಂಪರ್ಕಿಸಿ
97402 58276

**ಉದ್ಯೋಗಾವಕಾಶ**
ಯುವಕ/ಯುವತಿಯರಿಗೆ ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 10 ಸಾವಿರದಿಂದ 1 ಲಕ್ಷದವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ
63601 18665, 70194 26891

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವುಳ್ಳ, ಇಂಗ್ಲಿಷ್ ಓದಲು, ಬರೆಯಲು ಬರುವಂತಹ ಹುಡುಗಿಯರು ಹಾಗೂ ಕೋರಿಯರ್ ಪಾರ್ಸಲ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ (Two Wheeler Bike) ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು ಸಂಪರ್ಕಿಸಿ
94807 95548, 98800 42597
Whatsaap No. 70199 83025

**ಜೀವನ ಪರ್ಯಂತ ಪೆನ್ಷನ್**
LIC, IPO, ಖರೀದಿ ಮಾಹಿತಿ ಮ್ಯುಚ್ಯುವಲ್ ಫಂಡ್ ಪಾಲಿಸಿ, ಮಕ್ಕಳ ಮದುವೆ, ವಿದ್ಯಾಭ್ಯಾಸ, ಗೃಹ ನಿರ್ಮಾಣ, ಹಳೆಯ ಪಾಲಿಸಿಗಳ ಹಾಗು ವಾಹನಗಳ ವಿಮೆಯ ಮಾಹಿತಿಗಾಗಿ
86602 35013

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಪ್ರವಾಸ**
ದಾವಣಗೆರೆಯಿಂದ ಎರಡು ದಿನಗಳ ಗೋವಾ ಪ್ರವಾಸ ದಿ:25.02.2022 ರಿಂದ, ದೋನಪಾಲ್, ಮೀರಾ ಅಮರ್, ಮಾಂಡವಿ ರಿವರ್ ಕ್ರೂಜ್, ಕಲ್ಲಂಗೋಟ್, ಮಂಗೇಶ್ ಟೆಂಪಲ್. ಗೀತಾ ಟ್ರಾವೆಲ್ಸ್ ಮಹಿಳಾ ಸಮಾಜ ಕಾಂಪ್ಲೆಕ್ಸ್ ಅಶೋಕ ರೋಡ್, ದಾವಣಗೆರೆ.
99455 34966, 94481 62499

**ಬಾಡಿಗೆಗೆ ಇದೆ**
ವಿದ್ಯಾ ವಿಕಾಸ ಕಾನ್ವೆಂಟ್ ನಡೆಸುತ್ತಿದ್ದ ಕಟ್ಟಡ ಮೊದಲ ಮಹಡಿ ನಾಲ್ಕು ರೂಂಗಳು, ಎರಡನೇ ಮಹಡಿ ಎರಡು ರೂಂಗಳು 15 ನೇ ಕ್ರಾಸ್, 3ನೇ ಮುಖ್ಯರಸ್ತೆ ಕೆ.ಟಿ.ಜೆ. ನಗರ ದಾವಣಗೆರೆ ಇಲ್ಲಿ ಬಾಡಿಗೆಗೆ ಇವೆ. ವಿಚಾರಿಸಿ
94484 15049
87920 27551

**G-Shop**
Required Sales Representative
Qualification - PUC or Any degree
Salary : 10,000=00
Contact No.
Nidhi - 9620086824 ,
Akshata - 9071291672
Residential should be Davanagere and Harihar City

**WANTED**
BILLING/STORE SALES
BOLAS THE FACTORY OUTLET
DRY FRUIT SHOP
FOR LADIES ONLY
QUALIFICATION : ANY DEGREE WITH COMPUTER KNOWLEDGE
9900708999 / 9448454709

**ಮನೆ ಬಾಡಿಗೆಗೆ ಇದೆ**
ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
70194 37278

**ಬೇಕಾಗಿದ್ದಾರೆ**
ವಿಜಯ ಮಿತ್ರ ಎಜುಕೇಷನಲ್ ಅಕಾಡೆಮಿಯಲ್ಲಿ ಕೆಲಸ ನಿರ್ವಹಿಸಲು ಬ್ರಾಂಚ್ ಹೆಡ್ - any graduation ಮಹಿಳೆ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್- ಯಾವುದೇ ಪದವಿ
ನೇರವಾಗಿ ಸಂಪರ್ಕಿಸಿ:
ವಿಜಯ ಮಿತ್ರ ಎಜ್ಯುಕೇಷನಲ್ ಅಕಾಡೆಮಿ
#296/2-B, 2-C ಫಸ್ಟ್ ಫ್ಲೋರ್ ಡಾ. ಗುರುಪಾದಪ್ಪ ಮನೆ ಪಕ್ಕ, ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
Mob: 95139 15520

**ಸೇಲ್ಸ್ ಬಾಯ್ಸ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ.
ಸಿಟಿಜನ್ಸ್ ದಾ
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.
99727 77444
93421 95459
96863 63666

**PRINCE CORRESPONDENCE COLLEGE**
* ನೇರವಾಗಿ ದ್ವಿತೀಯ ಪಿಯುಸಿಗೆ ಪ್ರವೇಶ ಪಡೆಯಬಹುದು (NIOS)
* Arts, Commerce, Science
* B.A., B.Com., B.Sc., BBM.,
* M.A., M.Com., M.Sc., (all sub)
* Diploma, B.E. MBA., MCA.,
& All Courses
77609 55550, 96200 28627

**ಹೊಸಮನೆ ಮಾರಾಟಕ್ಕಿದೆ**
ಜೆ.ಎಚ್. ಪಟೇಲ್ ಬಡಾವಣೆಯಲ್ಲಿ ಗ್ರೀನ್ ಬಿಲ್ಡ್ ಇಂಜಿನಿಯರ್ಸ್ ಅಂಡ್ ಡೆವಲಪರ್ಸ್ ನಿರ್ಮಿಸಿರುವ ಉತ್ತರ ದಿಕ್ಕಿನ 20x30 ಅಳತೆಯ ಹೊಸ ಮನೆ ಮಾರಾಟಕ್ಕಿದೆ. ವಾಸ್ತು ಪ್ರಕಾರ ಗ್ರೌಂಡ್ ಮತ್ತು ಫಸ್ಟ್ ಫ್ಲೋರ್ ಪ್ರತ್ಯೇಕ ಇರುವ ಫರ್ನಿಷ್ಡ್ ಎರಡು ಬೆಡ್ ರೂಮ್ ಮತ್ತು ಸ್ವಂತ ಬೋರ್‌ವೆಲ್ ಹೊಂದಿರುವ ಮನೆ. ಸಂಪರ್ಕಿಸಿ:
63601 09142

**ಮನೆ ಬಾಡಿಗೆಗೆ**
ಜಯನಗರದಲ್ಲಿ 15x40 ವಿಸ್ತೀರ್ಣದ ಮೊದಲ ಮಹಡಿ ಪೂರ್ವ ದಿಕ್ಕಿನಲ್ಲಿರುವ ಮನೆ ಬಾಡಿಗೆಗೆ ಹಾಗೂ ಚಿಕ್ಕ ಮನೆಗಳು ಬಾಡಿಗೆಗೆ ದೊರೆಯುತ್ತವೆ.
94484 39639

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,450/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000
97392 15000

**ಬೋರ್‌ವೆಲ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ 1000 ಅಡಿವರೆಗೆ.
ಸಂಪರ್ಕಿಸಿ: ಬಸವರಾಜಪ್ಪ ಎಂ.ಟಿ.
ಜಲ ಪರಿಶೋಧಕರು
94492 02888

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

## ನಗರದಲ್ಲಿ ಇಂದು ಹರ್ಡೇಕರ್ ಮಂಜಪ್ಪ ಜಯಂತಿ



ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಹಾಗೂ ಬಸವ ಬಳಗ ಇವರ ಸಹಯೋಗದಲ್ಲಿ ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ್ ಮಂಜಪ್ಪನವರ ಜಯಂತಿಯನ್ನು ನಗರದ ಗಡಿಯಾರ ಕಂಬದ ಹತ್ತಿರವಿರುವ ಹರ್ಡೇಕರ್ ಮಂಜಪ್ಪ ವೃತ್ತದಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ (ಸಾಣೇಹಳ್ಳಿ) ದಿವ್ಯಸಾನ್ನಿಧ್ಯ ವಹಿಸುವರು. ಸಾನ್ನಿಧ್ಯವನ್ನು ಶ್ರೀ ಷ್ಠಿ ಸಿದ್ದರಾಮ ಶರಣರು, ಶ್ರೀ ಬಸವಪ್ರಭು ಮಹಾಸ್ವಾಮೀಜಿ ವಹಿಸುವರು.

ಪಾಲಿಕೆಯ ಮಹಾಪೌರ ಎಸ್.ಟಿ. ವೀರೇಶ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಬಿ.ಜಿ. ಅಜಯಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ, ಎಂ. ಶಿವಕುಮಾರ್, ಎ.ಹೆಚ್. ಹುಚ್ಚಪ್ಪ ಆಗಮಿಸುವರು.

ಅತಿಥಿಗಳು : ಎಂ. ಶಿವಪ್ರಕಾಶ್, ಎಸ್.ಬಿ. ರುದ್ರೇಗೌಡ, ಕು. ಹೆಚ್.ಸಿ. ಜಯಮ್ಮ ಶಿವನಗೌಡ ಬಿ. ಪಾಟೀಲ್, ಸೋಗಿ ಶಾಂತಕುಮಾರ್.

## ದುಗ್ಗಮ್ಮನ ಜಾತ್ರೆಗೆ ಅಗತ್ಯ ಸೌಲಭ್ಯ

**(1ನೇ ಪುಟದಿಂದ)** ಎಲ್ಲಾ ವೃತ್ತ ಹಾಗೂ ದೇವಸ್ಥಾನಗಳಿಗೆ ಸುಣ್ಣ ಬಣ್ಣ ಬಳಿಸಿ, ಜನರೇಟರ್ ವ್ಯವಸ್ಥೆ ಕಲ್ಪಿಸಿ ಕೊಳ್ಳಿ. ಕುಡಿಯುವ ನೀರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಿ ಎಂದರಲ್ಲದೆ, ವಿನೋಬನಗರದ ಚೌಡೇಶ್ವರಿ ದೇವಸ್ಥಾನದಲ್ಲಿ ಜಾತ್ರಾ ಪೂಜೆ ನಡೆಯಲಿದ್ದು, ಅಲ್ಲಿಯೂ ಮೂಲ ಸೌಕರ್ಯ ಕಲ್ಪಿಸುವಂತೆ ಹೇಳಿದರು.

ಸದಸ್ಯ ಆರ್.ಎಲ್. ಶಿವಪ್ರಕಾಶ್, ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಸಿಸಿ ಟಿವಿ ಅಳವಡಿಕೆಗೆ ಸಲಹೆ ನೀಡಿದರು. ಕೆ.ಎಂ. ವೀರೇಶ್, ದಸರಾ ವೇಳೆ ಮೈಸೂರಿನಲ್ಲಿ ಅಳವಡಿಸಿದಂತೆ ನಗರದ ಪ್ರಮುಖ ರಸ್ತೆಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸುವಂತೆ ಸಲಹೆ ನೀಡಿದರು. ಚಮನ್ ಸಾಬ್ ಕುಸ್ತಿ ಪಂದ್ಯಾವಳಿಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಮನವಿ ಮಾಡಿದರು.

# ಕಣವಿಯವರಿಗೆ ಮರಣೋತ್ತರವಾಗಿ ರಾಷ್ಟ್ರ ಕವಿ ಗೌರವ ಸಿಗಬೇಕು

### ಸರ್ಕಾರಕ್ಕೆ ಜಿಲ್ಲಾ ಕಸಾಪ ಅಧ್ಯಕ್ಷ ವಾಮದೇವಪ್ಪ ಮನವಿ



ದಾವಣಗೆರೆ, ಫೆ.17- ಸುನೀತ ಕವನಗಳ ವಿನೀತ ಕವಿಯಾಗಿದ್ದ ನಾಡೋಜ ಚೆನ್ನವೀರ ಕಣವಿಯವರು ಸದಾ ಸಾಮಾಜಿಕ ಬದಲಾವಣೆಗಾಗಿ ತುಡಿಯುತ್ತಿದ್ದ ಸಮನ್ವಯ ಕವಿಯಾಗಿದ್ದರು. ಹಾಗಾಗಿ ಸರ್ಕಾರವು ಚೆನ್ನವೀರ ಕಣವಿಯವರಿಗೆ ಮರಣೋತ್ತರವಾಗಿ ರಾಷ್ಟ್ರ ಕವಿ ಗೌರವ ನೀಡಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ನಾಡೋಜ ಚೆನ್ನವೀರ ಕಣವಿಯವರ ನಿಧನದ ಹಿನ್ನೆಲೆಯಲ್ಲಿ ಅವರ ಗೌರವಾರ್ಥ ಜಿಲ್ಲಾ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ವತಿಯಿಂದ ಇಂದು ಆಯೋಜಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರ ಕವಿ ಗೌರವ ಚೆನ್ನವೀರ ಕಣವಿಯವರಿಗೆ ಸಲ್ಲಬೇಕೆಂಬುದು ನಾಡಿನ ಹಲವಾರು ಸಾಹಿತ್ಯಾಸಕ್ತರ ಒತ್ತಾಸೆಯಾಗಿತ್ತು. ಇತ್ತೀಚಿಗೆ ಕಸಾಪ ಅಧ್ಯಕ್ಷ, ನಾಡೋಜ ಮಹೇಶ್ ಜೋಷಿಯವರು ಕೂಡಾ ಸರ್ಕಾರಕ್ಕೆ ಈ ಬಗ್ಗೆ ಮನವಿ ಮಾಡಿದ್ದರು.

ಆದರೆ, ಸರ್ಕಾರ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಮೊದಲೇ ಕಣವಿಯವರನ್ನು ನಾವು ಕಳೆದುಕೊಂಡಿದ್ದೇವೆ.

ಸರ್ಕಾರವು ಈಗಲಾದರೂ ಮರಣೋತ್ತರವಾಗಿ ಚೆನ್ನವೀರ ಕಣವಿಯವರಿಗೆ ರಾಷ್ಟ್ರ ಕವಿ ಗೌರವ ನೀಡಬೇಕೆಂದು ಮನವಿ ಮಾಡಿದರು.

ಸಾರಸ್ವತ ಲೋಕದ ಸಮಕಾಲೀನ ದಿಗ್ಗಜರು ಹಾಗೂ ಕಿರಿಯ ಕವಿಗಳೊಂದಿಗೂ ಅತ್ಯಂತ ಸಮನ್ವಯತೆಯಿಂದ ಇರುತ್ತಿದ್ದರು. ಯುವ ಪ್ರತಿಭೆಗಳನ್ನು ಪ್ರೀತಿಯಿಂದ ಬೆನ್ನು ತಟ್ಟಿ ಮಾರ್ಗದರ್ಶನ ಮಾಡಿ ಪ್ರೋತ್ಸಾಹಿಸುವ ಗುಣ ಅವರದಾಗಿತ್ತು ಎಂದು ಹೇಳಿದರು.

ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ ಮಾತನಾಡಿ, ನವೋದಯ-ನವ್ಯ ಕಾವ್ಯ ಕಾಲಘಟ್ಟದಲ್ಲಿ ಕಣವಿಯವರು ತಮ್ಮತನವನ್ನು ಉಳಿಸಿಕೊಳ್ಳುವ ಬದ್ಧತೆಯನ್ನು ತೋರಿದ್ದು ವಿಶೇಷವಾಗಿತ್ತು.

ಕಣವಿಯವರ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಹಸಿಗೋಡೆಯ ಹರಳಿನಂತೆ ಹುಸಿ ಹೋಗದ ಕನ್ನಡ ಎನ್ನುವ ಸೊಗಸಾದ ಕವನವು ಕನ್ನಡಿಗರಲ್ಲಿ ಭಾಷಾ ಅಭಿಮಾನದ ಪ್ರಜ್ಞೆ ಹೆಚ್ಚಿಸಲು ಕಾರಣವಾಗಿತ್ತು ಎಂದರು.

ರಂಗಕರ್ಮಿ ಬಾ.ಮ. ಬಸವರಾಜಯ್ಯ ಮಾತನಾಡಿ, ಕನ್ನಡದ ಶ್ರೇಷ್ಠ ಕವಿ ಹಾಗೂ ಬರಹಗಾರರಾಗಿದ್ದ ಚೆನ್ನವೀರ ಕಣವಿಯವರ ಸತ್ವಯುತ ಬರಹ ಹಾಗೂ ಮೌಲ್ಯಯುತ ಬದುಕು ಅನೇಕರಿಗೆ ಸ್ಫೂರ್ತಿ ಎಂದರು.

ಜಿಲ್ಲಾ ಕಸಾಪ ನಿಕಟ ಪೂರ್ವ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಮಾತನಾಡಿ, ಕನ್ನಡ ಕಾವ್ಯ ಲೋಕದ ಶ್ರೀಮಂತಿಕೆಗೆ ಕಣವಿಯವರ ಕೊಡುಗೆ ಗಣನೀಯವಾಗಿದೆ ಎಂದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎಸ್.ಬಿ. ರಂಗನಾಥ್, ವಿಶ್ರಾಂತ ಪ್ರಾಂಶುಪಾಲ ಎ.ಬಿ. ರಾಮಚಂದ್ರಪ್ಪ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ಜಿಲ್ಲಾ ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ತಾಲ್ಲೂಕು ಕಸಾಪ ಅಧ್ಯಕ್ಷರಾದ ಸುಮತಿ ಜಯಪ್ಪ ಅವರು ಅಗಲಿದ ಕಣವಿಯವರಿಗೆ ನುಡಿ ನಮನ ಸಲ್ಲಿಸಿದರು.

ಸಾಹಿತಿ ವೀಣಾ ಕೃಷ್ಣಮೂರ್ತಿ ಅವರು ಚೆನ್ನವೀರ ಕಣವಿಯವರ ಕುರಿತ ಸ್ವರಚಿತ ಕವನವನ್ನು ವಾಚಿಸಿ, ಕಾವ್ಯ ನಮನ ಸಲ್ಲಿಸಿದರು. ಜಿಲ್ಲಾ ಕಸಾಪ ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ಸ್ವಾಗತಿಸಿದರು.

ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ ನಿರೂಪಿಸಿದರು. ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ ವಂದಿಸಿದರು.

ಹಿರಿಯ ಛಾಯಾಗ್ರಾಹಕ ಹೆಚ್.ಬಿ. ಮಂಜುನಾಥ್, ಜಾನಪದ ಅಕಾಡೆಮಿ ಸದಸ್ಯರಾದ ಶ್ರೀಮತಿ ಸಿ.ಕೆ.ರುದ್ರಾಕ್ಷಿ ಬಾಯಿ, ಇಂದಿರಾ ಗುರುಸ್ವಾಮಿ, ಕನ್ನಡಪರ ಹೋರಾಟಗಾರ ಬಂಕಾಪುರ ಚನ್ನಬಸಪ್ಪ, ವಿಶ್ರಾಂತ ಉಪನ್ಯಾಸಕ ಸುಭಾಷ್ ಚಂದ್ರ ಭೋಸ್, ತಾಲ್ಲೂಕು ಕಸಾಪ ಮಾಜಿ ಅಧ್ಯಕ್ಷ ಕೆ.ಎನ್. ಸ್ವಾಮಿ, ಸಂತೆಬೆನ್ನೂರು ಕೆ.ಸಿ. ರಾಜ್ ಅಹಮದ್, ಬೇತೂರು ಷಡಾಕ್ಷರಪ್ಪ, ಗೋಪನಾಳ್ ಪಾಲಾಕ್ಷಪ್ಪ, ಎಮ್.ಬಿ. ರೇವಣಸಿದ್ದಪ್ಪ, ದಾಗಿನಕಟ್ಟೆ ಪರಮೇಶ್ವರಪ್ಪ, ಎಸ್.ಎಮ್. ಮಲ್ಲಮ್ಮ, ಜ್ಯೋತಿ ಉಪಾಧ್ಯಾಯ, ಸತ್ಯಭಾಮ ಮಂಜುನಾಥ, ಶಿಕ್ಷಕಿಯರಾದ ಎಮ್. ರಾಧಾ, ಕಲ್ಪನಾ, ಕೆ. ವೀಣಾ, ಎಲ್. ನಾಗವೇಣಿ, ರುಕ್ಮಾಬಾಯಿ, ಕೂಲಂಬಿ ಜಗದೀಶ್, ಬಿ.ಎಸ್. ಜಗದೀಶ್, ಸಿರಿಗೆರೆ ನಾಗರಾಜ, ಭೈರವೇಶ್ವರ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಮೆಕ್ಕೆಜೋಳ ಖರೀದಿಗೆ ಚಾಲನೆ



### ಹೊನ್ನಾಳಿ

ಹೊನ್ನಾಳಿ, ಫೆ.17 - ಈ ಭಾಗದಲ್ಲಿ ಅತಿ ಹೆಚ್ಚು ಮೆಕ್ಕೆಜೋಳ ಬೆಳೆ ಬೆಳೆಯಲಾಗುತ್ತಿದ್ದು, ಬೆಳಗಾರರಿಂದ ನೇರವಾಗಿ ಮೆಕ್ಕೆ ಜೋಳ ಖರೀದಿಗಾಗಿ ಇದೀಗ ಎ.ಪಿ.ಎಂ.ಸಿ. ಪ್ರಾಂಗಣದಲ್ಲಿ ಇ-ಟೆಂಡರ್ ಮೂಲಕ ಬೆಳೆ ಖರೀದಿಸುವ ವ್ಯವಸ್ಥೆ ಮಾಡಲಾಗಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಎ.ಪಿ.ಎಂ.ಸಿ. ಜಿಲ್ಲಾ ಸಹಾಯಕ ನಿರ್ದೇಶಕ ಹಾಗೂ ಹೊನ್ನಾಳಿ ಎ.ಪಿ.ಎಂ.ಸಿ. ಪ್ರಧಾನ ಕಾರ್ಯದರ್ಶಿ ಜೆ. ಪ್ರಭು ಹೇಳಿದರು.

ಅವರು ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಇ-ಟೆಂಡರ್ ಮೂಲಕ ಮೆಕ್ಕೆಜೋಳ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದರು. ಪ್ರಥಮವಾಗಿ ವಾಸವಿ ಟ್ರೇಡರ್ಸ್ ಮಾಲೀಕರಾದ ವಿನಾಯಕ ಶೆಟ್ಟಿ ಅವರು ಇ-ಟೆಂಡರ್ ಮೂಲಕ ಮೆಕ್ಕೆಜೋಳ ಖರೀದಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜೆ.ಪ್ರಭು, ಈ ಹಿಂದೆ ರೈತರಿಂದ ಕೆಲವಾರು ವರ್ತಕರು ಅವರ ಹಳ್ಳಿಗೆ ಹೋಗಿ ರೈತರ ಬೆಳೆ ಖರೀದಿ ಮಾಡುತ್ತಿದ್ದರು. ಈ ಹಂತದಲ್ಲಿ ರೈತರಿಗೆ ನ್ಯಾಯವಾದ ಬೆಲೆ ಹಾಗೂ ಸಕಾಲದಲ್ಲಿ ಹಣ ದೊರೆಯದೇ ಹಲವಾರು ಸಂದರ್ಭದಲ್ಲಿ ಮೋಸ ಹೋದ ಪ್ರಕರಣಗಳು ಇವೆ ಎಂದರು.

ಕೃಷಿ ಕಾಯ್ದೆ ತಿದ್ದುಪಡಿಯ ಫಲವಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಹಾಗೂ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಖರೀದಿ ವಹಿವಾಟು ಸೀಮಿತವಾಗಿರುವುದರಿಂದ ಇಲ್ಲಿ ನಡೆಯುವ ವ್ಯವಹಾರದ ಮೇಲೆ ನಿಯಂತ್ರಣ ವಿರುತ್ತದೆ ಎಂದರು. ಇದರಿಂದ ರೈತರಿಗೆ ಸ್ಪರ್ಧಾತ್ಮಕ ಬೆಲೆ, ನಿಖರವಾದ ತೂಕ ಹಾಗೂ ಸಕಾಲದಲ್ಲಿ ಹಣ ಪಾವತಿ ಸೌಲಭ್ಯ ದೊರೆಯಲಿದೆ. ಇದರಿಂದ ದಲಾಲರಿಗೆ ಕಮೀಷನ್, ಹಮಾಲರಿಗೆ ಕೂಲಿ ಹಾಗೂ ಮಾರುಕಟ್ಟೆ ಸಮಿತಿಗೂ ಕೂಡ ಆದಾಯವಾಗಲಿದೆ ಎಂದು ವಿವರಿಸಿದರು.

ಈಗಾಗಲೇ ದಾವಣಗೆರೆಯಲ್ಲಿ ಇ-ಟೆಂಡರ್ ಆರಂಭವಾಗಿರುವುದರಿಂದ 1500 ರೂ. ಆಗಿದ್ದ ಮೆಕ್ಕಜೋಳ ಪ್ರತಿ ಕ್ವಿಂಟಾಲ್‌ಗೆ ರೂ. 2 ಸಾವಿರ ದಾಟಿದೆ. ಇದನ್ನು ಮನಗಂಡು ಮಾರುಕಟ್ಟೆ ರಾಜ್ಯ ನಿರ್ದೇಶಕ ಕರೇಗೌಡ ಅವರು ಕೃಷಿ ಮಾರುಕಟ್ಟೆ ನಿರ್ದೇಶಕರ ಸಭೆ ನಡೆಸಿ, ಇ-ಟೆಂಡರ್ ವ್ಯವಸ್ಥೆಯನ್ನು ರಾಜ್ಯ ವ್ಯಾಪ್ತಿ ವಿಸ್ತರಿಸಿದ್ದಾರೆ ಎಂದು ತಿಳಿಸಿದರು.

ಹೊನ್ನಾಳಿ ಕೃಷಿ ಮಾರುಕಟ್ಟೆಯಲ್ಲಿ ಇ- ಟೆಂಡರ್ ಜಾರಿಯಾದ ಮೊದಲ ದಿನವೇ ಮೆಕ್ಕೆಜೋಳ ಕ್ವಿಂಟಾಲ್‌ಗೆ 1950 ರೂ.ನಂತೆ ಮಾರಾಟವಾಗಿದ್ದು, ರೈತರು ಬೆಳೆದ ಮೆಕ್ಕೆಜೋಳವನ್ನು ಇ. ಟೆಂಡರ್ ಮೂಲಕವೇ ಮಾರಾಟ ಮಾಡಲು ಮುಂದೆ ಬರಬೇಕೆಂದು ಹೇಳಿದರು. ಇದರ ಜೊತೆಗೆ ದರ ಆಯ್ಕೆ ಅವಕಾಶ ರೈತರಿಗೆ ಲಭ್ಯವಿದೆ. ತನ್ನ ಬೆಳೆಗೆ ನಿರೀಕ್ಷಿತ ಬೆಲೆ ಸಿಗದಿದ್ದರೆ ಆ ದಿನದ ಇ -ಟೆಂಡರ್ ರದ್ದು ಪಡಿಸುವ ಅಧಿಕಾರ ರೈತರಿಗಿದೆ ಎಂದು ಹೇಳಿದರು.


ಎ.ಪಿ.ಎಂ.ಸಿ. ಅಧ್ಯಕ್ಷ ಜಿ.ವಿ.ಎಂ. ರಾಜು, ಉಪಾಧ್ಯಕ್ಷ ಹನುಮಂತಪ್ಪ, ಮಾಜಿ ಅಧ್ಯಕ್ಷ ಎಸ್.ಎಸ್. ಬೀರಪ್ಪ, ಎ.ಜಿ.ಪ್ರಕಾಶ್, ಸುರೇಶ್, ಸದಸ್ಯ ಕೆ.ಪಿ. ಕುಬೇಂದ್ರಪ್ಪ, ಕೃಷ್ಣನಾಯ್ಕ, ಗಣೇಶಪ್ಪ, ಕಾಯಿ ಬಸಣ್ಣ, ಬಿ.ಎಚ್. ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಗುಣ ನಿಯಂತ್ರಣ ಅಧಿಕಾರಿ ಆಗಮನ

ದಾವಣಗೆರೆ,ಫೆ.17- ರಾಷ್ಟ್ರೀಯ ಗುಣ ನಿಯಂತ್ರಣ ಅಧಿಕಾರಿ ಸುನೀಲ್ ಕುಮಾರ್ ಇದೇ ದಿನಾಂಕ 17 ರಿಂದ 21ರ ವರೆಗೆ ದಾವಣಗೆರೆ ವಿಭಾಗಕ್ಕೆ ಸಂಬಂಧಿಸಿದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಹಂತ-3 ರ ಕಾಮಗಾರಿಗಳ ಪರಿವೀಕ್ಷಣೆ ಮಾಡಲಿದ್ದಾರೆ. ಸಾರ್ವಜನಿಕರು ದಿನಾಂಕ 21 ರ ಬೆಳಗ್ಗೆ 10.30ಕ್ಕೆ, ಹೋಟೆಲ್ ಸಾಯಿ ಇಂಟರ್‌ನ್ಯಾಷನಲ್‌ನಲ್ಲಿ ನಿಯಂತ್ರಣಾಧಿಕಾರಿಗಳನ್ನು ಭೇಟಿ ಮಾಡಬಹುದು. ಯೋಜನಾ ವಿಭಾಗದ ಕಛೇರಿ ದೂರವಾಣಿ ನಂ 08192-296576 ಆಗಿರುತ್ತದೆ.

# ಕಾವ್ಯವೇ ಜೀವನವೆಂದು ಬದುಕಿದ ಅಗ್ರಗಣ್ಯ ಕವಿ ಕಣವಿ

### ಹರಿಹರದ ಶ್ರದ್ಧಾಂಜಲಿ ಸಭೆಯಲ್ಲಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಸ್.ಹೆಚ್.ಹೂಗಾರ್ ಆಗ್ರಹ



ಹರಿಹರ, ಫೆ.17- ಕನ್ನಡದ ಸಮನ್ವಯ ಕವಿ, ಸುನೀತಗಳ ಸಾಮ್ರಾಟ ಎಂದು ಖ್ಯಾತರಾದ ಹೊಸಗನ್ನಡ ಕಾವ್ಯದ ಪ್ರಮುಖ ಕವಿ ನಾಡೋಜ ಚನ್ನವೀರ ಕಣವಿ ನಿಧನದಿಂದ ನಾಡಿಗೆ ತುಂಬಲಾರದ ನಷ್ಟವಾಗಿದೆ. ಕಣವಿಯವರಿಗೆ ಮರಣೋತ್ತರ ರಾಷ್ಟ್ರಕವಿ ಬಿರುದನ್ನು ನೀಡಬೇಕೆಂದು ಎಂದು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಸ್.ಹೆಚ್.ಹೂಗಾರ್ ಆಗ್ರಹಿಸಿದರು.

ನಗರದ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಪ್ರೌಢಶಾಲೆಯ ಆವರಣದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ ನಾಡೋಜ ಚನ್ನವೀರ ಕಣವಿಯವರ ಭಾವಪೂರ್ಣ ಶ್ರದ್ಧಾಂಜಲಿ ಮತ್ತು ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಕಾವ್ಯವೇ ಜೀವನ ಎಂದು ಬದುಕಿದ ನಾಡಿನ ಅಗ್ರಗಣ್ಯ ಹಾಗೂ ಚೆಂಬೆಳಕಿನ ಖ್ಯಾತಿಯ ಹಿರಿಯ ಕವಿಯಾಗಿದ್ದರು. ಕನ್ನಡನಾಡು ಕಂಡ ಸೃಜನಶೀಲ ಸಾಹಿತಿ, ಸರಳ ಸಜ್ಜನಿಕೆಯ, ಮೃದು ಸ್ವಭಾವದ ಮಾನವೀಯ ಮೌಲ್ಯಗಳನ್ನು ಹೊಂದಿರುವ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ್ದರು. ವಿಶ್ವಭಾರತಿಗೆ ಕನ್ನಡದಾರತಿ ಬೆಳಗಿ ಕನ್ನಡಿಗರ ಮನಸ್ಸಿನಲ್ಲಿ ಕನ್ನಡದ ಜಾಗೃತಿ ಮೂಡಿಸಿದ ಹೆಮ್ಮೆಯ ಕವಿ ಚನ್ನವೀರ ಕಣವಿಯವರಾಗಿದ್ದರು. ಈಗಾಗಲೇ ಚಂಪಾ, ಪ್ರೊ.ಸಿದ್ಧಲಿಂಗಯ್ಯನವರನ್ನು ಕಳೆದುಕೊಂಡ ಬೆನ್ನಲ್ಲೇ ಚನ್ನವೀರ ಕಣವಿಯವರ ನಿಧನ ತುಂಬಾ ನೋವುಂಟುಮಾಡಿದೆ. ಇಂತಹ ಮಹನೀಯರ ಸ್ಮರಣೆಯಿಂದ ಪ್ರೇರಣೆ ಪಡೆದು ಹೊಸ ಸಾಹಿತಿಗಳು, ಚಿಂತಕರು ಬೆಳೆಯಬೇಕು ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಬಿಎಜೆಎಸ್ಎಸ್ ಕಾಲೇಜಿನ ಪ್ರಾಂಶುಪಾಲ ಮೃತ್ಯುಂಜಯ, ಆಧುನಿಕ ಕನ್ನಡ ಕಾವ್ಯದ ಮೇರು ಪ್ರತಿಭೆಗಳಲ್ಲಿ ಒಬ್ಬರಾದ ಚೆಂಬಳಕಿನ ಕವಿ, ಸುನೀತಗಳ ಸಾಮ್ರಾಟರೆಂದೇ ಕನ್ನಡಿಗರ ಹೃದಯ ಗೆದ್ದ ಕವಿ ಚನ್ನವೀರ ಕಣವಿ ನಿಧನದಿಂದ ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾಗದ ನಷ್ಟವಾಗಿದೆ. ಕಣವಿಯವರ ಕಾವ್ಯಗಳಲ್ಲಿ ರಮ್ಯ ಮನೋಧರ್ಮ, ಆದರ್ಶಪ್ರಿಯತೆ, ಉತ್ತಮ ವ್ಯಕ್ತಿತ್ವ ನಿರ್ಮಾಣದ ಹಂಬಲಗಳು ಎದ್ದು ಕಾಣುತ್ತವೆ. ಬದುಕನ್ನು ಸ್ನೇಹ, ಪ್ರೀತಿ, ವಾತ್ಸಲ್ಯದಿಂದ ಸವಿಯಬೇಕು. ಕವಿತೆಗಳು ಜನರಿಗೆ ತಲುಪಬೇಕು ಎಂದು ಬಯಸಿ ನಿಸರ್ಗ, ಪ್ರಾಣಿ-ಪಕ್ಷಿ, ಮಕ್ಕಳು ಹಾಗೂ ದಾಂಪತ್ಯವನ್ನು ಕುರಿತು ಕವಿತೆಗಳನ್ನು ಬರೆದಿದ್ದಾರೆ. ಅದಮ್ಯ ಜೀವನ ಪ್ರೀತಿಯ ಕಣವಿಯವರ ಕಾವ್ಯಗಳು ಬದುಕಿನ ನೋವು ನಲಿವುಗಳನ್ನು ಪ್ರತಿಬಿಂಬಿಸುತ್ತವೆ. ಮೂರು ಗಳಿಗೆಯ ಬಾಳು ಮಗಮಗಿಸುತಿರಲಿ ಎಂಬುದು ಅವರ ಕಾವ್ಯಗಳ ಹಾರೈಕೆಯಾಗಿತ್ತು. ಬದುಕನ್ನು ಹಿತವಾಗಿಸಿಕೊಂಡು ನೆಮ್ಮದಿಯಿಂದ ಬದುಕುವ ಅಗತ್ಯವನ್ನು ಅವರ ಕಾವ್ಯಗಳು ಒತ್ತಿ ಹೇಳುತ್ತವೆ ಎಂದು ತಿಳುಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ತಾಲ್ಲೂಕು ಕಸಾಪ ಅಧ್ಯಕ್ಷ ಡಿ.ಎಂ.ಮಂಜುನಾಥಯ್ಯ, ಚನ್ನವೀರ ಕಣವಿಯವರಿಗೆ ಮರಣೋತ್ತರ ರಾಷ್ಟ್ರಕವಿ ಪ್ರಶಸ್ತಿ ನೀಡುವುದರ ಜೊತೆಗೆ ಅವರ ಸಮಗ್ರ ಸಾಹಿತ್ಯವನ್ನು ಸಂಪುಟಗಳಲ್ಲಿ ಕರ್ನಾಟಕ ಸರ್ಕಾರ ಪ್ರಕಟಿಸಬೇಕೆಂದು ಮುಖ್ಯ ಮಂತ್ರಿಗಳನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಬಿ.ಬಿ. ರೇವಣ್ಣನಾಯ್ಕ್, ಪರಸ್ಪರ ಬಳಗದ ಸಂಚಾಲಕ ಎ. ರಿಯಾಜ್ ಆಹ್ಮದ್, ಹಿರಿಯ ಸಾಹಿತಿಗಳಾದ ಪ್ರೊ. ಎಸ್.ಎ. ಭೀಕ್ಷಾವರ್ತಿ ಮಠ್, ಪ್ರೊ. ಸಿ.ವಿ. ಪಾಟೀಲ್, ಜೆ. ಕಲೀಂಭಾಷಾ, ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ. ಕೊಟ್ರೇಶ್, ಎನ್.ಇ. ಸುರೇಶ್, ಈಶಪ್ಪ ಬೂದಿಹಾಳ್, ಅಬ್ದುಲ್ ಸಲೀಂ, ನಾಗರಾಜ್, ಕೃಷ್ಣಪ್ಪ ಭಜಂತ್ರಿ ಇತರರು ಹಾಜರಿದ್ದರು.

## ಜಲಸಿರಿ 'ಕ್ರೆಡಿಟ್' ಗಾಗಿ ಜಟಾಪಟಿ

**(1ನೇ ಪುಟದಿಂದ)** ಫಲವಾಗಿ ಬ್ಯಾರೇಜ್ ನಿರ್ಮಾಣಕ್ಕೆ ಚರ್ಚಿಸಿ, ಅನುದಾನ ತರಿಸಿದ್ದಾಗಿ ಹೇಳಿದರು.

ಕಳೆದ ಮೂರು ವರ್ಷಗಳಿಂದ ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಸಂಸದರು, ಶಾಸಕರು ಶ್ರಮಿಸುತ್ತಿದ್ದಾರೆ. ಕೇವಲ ಒಬ್ಬರಿಂದಲೇ ಯೋಜನೆಯಾಗಿಲ್ಲ ಎಂದು ಪ್ರಸನ್ನಕುಮಾರ್ ಹೇಳಿದರು.

ಹಿರಿಯ ಸದಸ್ಯ ಚಮನ್ ಸಾಬ್ ಮಧ್ಯ ಪ್ರವೇಶಿಸಿ, ಜಲಸಿರಿ ಯೋಜನೆ ಅನುದಾನ 110 ಕೋಟಿ ರೂ.ಗಳಿಂದ 660 ಕೋಟಿ ರೂ.ಆಗಲು ಎಸ್ಸೆಸ್, ಎಸ್ಸೆಸ್ಸೆಂ ಅವರೇ ಕಾರಣ ಎಂದರು. ದನಿಗೂಡಿಸಿದ ನಾಗರಾಜ್ ಗುಂಡಿ ತೋಡಿಸಿ, ಪೈಪ್ ಹಾಕುವ ಕೆಲಸ ಯಾರಾದರೂ ಮಾಡಿಸುತ್ತಾರೆ. ಆದರೆ ಅನುದಾನ ತರಲು ಇಚ್ಛಾಶಕ್ತಿ ಬೇಕು ಎಂದು ಕುಟುಕಿದರು.

ನಿಮ್ಮನ್ನು (ಬಿಜೆಪಿ)ಆಯ್ಕೆ ಮಾಡಿ ಜನರು ಪಶ್ಚಾತ್ತಾಪ ಪಡುತ್ತಿದ್ದಾರೆ ಎಂದಾಗ, ಉತ್ತಮ ಕೆಲಸ ಮಾಡಿದ್ದಕ್ಕೇ ಜನ ಬಿಜೆಪಿ ಬೆಂಬಲಿಸಿದ್ದಾರೆ ಎಂದು ಮೇಯರ್ ವೀರೇಶ್ ಹೇಳಿದರೆ, ಮುಂದಿನ ಚುನಾವಣೆ ನೋಡೋಣ ಜನರು ಯಾರನ್ನು ಬೆಂಬಲಿಸುತ್ತಾರೆಂದು ಎನ್ನುವ ಮೂಲಕ ಚಮನ್ ಸಾಬ್ 'ಕ್ರೆಡಿಟ್' ಚರ್ಚೆಗೆ ತೆರೆ ಎಳೆದರು.

## ನಗರದ ಶಾರದಾಂಬ ದೇವಸ್ಥಾನದಲ್ಲಿ ಇಂದು ಸಾಮೂಹಿಕ ಕುಂಕುಮಾರ್ಚನೆ

ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಗಣಪತಿ, ಶ್ರೀ ಶಾರದಾಂಬ, ಶ್ರೀ ಚಂದ್ರಮೌಳೇಶ್ವರ ಮತ್ತು ಶ್ರೀ ಶಂಕರಾಚಾರ್ಯರ ದೇವಸ್ಥಾನದ ವತಿಯಿಂದ ಇಂದು ಮತ್ತು ನಾಳೆ ಶಂಕರ ಸಾಮೂಹಿಕ ಕುಂಕುಮಾರ್ಚನೆ, ವಿಶೇಷ ಪೂಜೆ ಏರ್ಪಡಿಸಲಾಗಿದೆ.

ಇಂದು ಸಂಜೆ 5.30 ಕ್ಕೆ ಸಾಮೂಹಿಕ ಕುಂಕುಮಾರ್ಚನೆ, ಸಂಜೆ 7-30ಕ್ಕೆ ಶ್ರೀ ಶಾರದಾಂಬಾ ದೇವಿಗೆ ಪಾಲಕಿ ಉತ್ಸವ, ರಥ ಸೇವಾ, ಅಷ್ಟಾವಧಾನ, ಮಂತ್ರಪುಷ್ಪ, ಮಂಗಳಾರತಿ ನಡೆಯಲಿದೆ.

ನಾಳೆ ಶನಿವಾರ ಬೆಳಿಗ್ಗೆ 8 ಗಂಟೆಗೆ ಕಲಾಹೋಮ ಮತ್ತು ಬೆಳಿಗ್ಗೆ 9 ಗಂಟೆಗೆ ಪೂರ್ಣಾಹುತಿ, ನಂತರ ಶ್ರೀ ಗಣಪತಿ ಮೂಲ ವಿಗ್ರಹಕ್ಕೆ ಅಥರ್ವಶೀರ್ಷದಿಂದ ಅಭಿಷೇಕ, ಶ್ರೀ ಚಂದ್ರಮೌಳೀಶ್ವರರಿಗೆ ರುದ್ರಾಭಿಷೇಕ, ಶ್ರೀ ಶಾರದಾಂಬ ಮೂಲ ಮೂರ್ತಿಗೆ ಮಹಾಭಿಷೇಕ, ವಿವಿಧ ಪೂಜೆ ನಡೆಯಲಿದ್ದು, ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

# ಅಧಿಕಾರಿ, ಸಿಬ್ಬಂದಿ ಬದ್ಧತೆಯಿಂದ ಕೆಲಸ ಮಾಡಿದರೆ ಮಾತ್ರ ಅಭಿವೃದ್ಧಿ ಸಾಧ್ಯ

### ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಡಾ. ಬಿ.ಡಿ. ಭೂಕಾಂತ್



ದಾವಣಗೆರೆ, ಫೆ.17- ಅಧಿಕಾರಿ ಮತ್ತು ಸಿಬ್ಬಂದಿ ಬದ್ಧತೆಯಿಂದ ಕೆಲಸ ಮಾಡಿದರೆ ಮಾತ್ರ ಸಹಕಾರ ಸಂಘಗಳು ಅಭಿವೃದ್ದಿ ಹೊಂದಲು ಸಾಧ್ಯ ಎಂದು ಕರ್ನಾಟಕ ರಾಜ್ಯ ಸಹಕಾರ ತೋಟಗಾರಿಕೆ ಮಹಾಮಂಡಳದ ಅಧ್ಯಕ್ಷರೂ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಡಾ. ಬಿ.ಡಿ. ಭೂಕಾಂತ್ ಹೇಳಿದರು.

ನಗರದ ಬಾಪೂಜಿ ಎಂಬಿಎ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಸಹಕಾರ ಇಲಾಖೆ, ಜಿಲ್ಲಾ ಸಹಕಾರ ಒಕ್ಕೂಟ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟ ಇವರ ಸಂಯುಕ್ತಾಶ್ರಯದಲ್ಲಿ ನಡೆದ ರಾಜ್ಯಮಟ್ಟದ 'ವಿಶೇಷ ಕಾರ್ಯದಕ್ಷತೆ' ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಶಿಕ್ಷಣ ಮತ್ತು ತರಬೇತಿ ಇದ್ದರೆ ಬದ್ಧತೆಯಿಂದ ಕೆಲಸ ನಿರ್ವಹಿಸಲು ಸಾಧ್ಯ ಎಂದರು.

ರಾಜ್ಯದ ಎಲ್ಲಾ 29 ಯೂನಿಯನ್‌ಗಳ ಮುಖಾಂತರ ಅಧಿಕಾರಿ ವರ್ಗದವರಿಗೆ, ಸಹಕಾರಿ ಸಂಘದ ಸದಸ್ಯರುಗಳಿಗೆ ಸಹಕಾರ ಕಾಯಿದೆ, ಉಪ ನಿಯಮ ಇನ್ನಿತರೆ ವಿಷಯಗಳ ಬಗ್ಗೆ ಕಾರ್ಯಾಗಾರಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ-ಹರಿಹರ ಅರ್ಬನ್ ಕೋ-ಆಪ್ ಬ್ಯಾಂಕಿನ ಅಧ್ಯಕ್ಷರೂ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರೂ ಆದ ಎನ್.ಎ. ಮುರುಗೇಶ್ ಮಾತನಾಡಿ, ಆರ್‌ಬಿಐ ಸೂಚನೆಯ ಮೇರೆಗೆ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಸಹ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಕಡ್ಡಾಯ ವಾಗಿ ಅಳವಡಿಸಿಕೊಳ್ಳಬೇಕೆಂದು ಸುತ್ತೋಲೆ ಯನ್ನು ನೀಡಿರುವುದರ ಮೇರೆಗೆ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು ಸಹ ವ್ಯವಹಾರಗಳನ್ನು ಆನ್‌ಲೈನ್ (ಕೋರ್ ಬ್ಯಾಂಕಿಂಗ್) ವ್ಯವಸ್ಥೆಯಡಿಯಲ್ಲಿ ತಂದಿರುತ್ತದೆ ಎಂದರು.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಜೆ.ಎಸ್. ವೇಣುಗೋಪಾಲ್ ರೆಡ್ಡಿ ಮಾತನಾಡಿ, ಗಣಕೀಕರಣ ವ್ಯವಸ್ಥೆಯಿಂದ ಸಹಕಾರ ಸಂಘಗಳನ್ನು ಪಾರದರ್ಶಕವಾಗಿ, ಪರಿಣಾಮಕಾರಿಯಾಗಿ ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕನಕ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಲೋಕಿಕೆರೆ ಸಿದ್ದಪ್ಪ ಮಾತನಾಡಿ, ಬ್ಯಾಂಕುಗಳು ಗ್ರಾಹಕರಿಗೆ ಸಾಲ ನೀಡುವ ಸಂದರ್ಭದಲ್ಲಿ ಸಹಕಾರ ಕಾಯ್ದೆ ಮತ್ತು ಬ್ಯಾಂಕಿನ ಉಪ ವಿಧಿಗಳ ರೀತ್ಯಾ ದಾಖಲಾತಿಗಳನ್ನು ಸಂಗ್ರಹಿಸಿ ಸಾಲ ವಿತರಿಸಿದರೆ ಸಾಲ ಮರುಪಾವತಿ ಸುಲಭ ಸಾಧ್ಯವಾಗುತ್ತದೆ ಎಂದು ಹೇಳಿದರು.

ದಾವಣಗೆರೆ ಅರ್ಬನ್ ಬ್ಯಾಂಕ್ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ ಮಾತನಾಡಿ, ದಾವಣಗೆರೆ ಜಿಲ್ಲೆಯ 11 ಪಟ್ಟಣ ಸಹಕಾರ ಬ್ಯಾಂಕುಗಳು ನಿಯಮಾವಳಿಯ ಪ್ರಕಾರ ಸದಸ್ಯರಿಗೆ ಸಾಲ-ಸೌಲಭ್ಯಗಳನ್ನು ನೀಡಿದ್ದರಿಂದ ಬ್ಯಾಂಕು ಉತ್ತಮ ಸ್ಥಿತಿಯಲ್ಲಿವೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಶ್ರೀ ಕನ್ನಿಕಾ ಪರಮೇಶ್ವರಿ ಕೋ-ಆಪರೇಟೀವ್ ಬ್ಯಾಂಕಿನ ಅಧ್ಯಕ್ಷ ಆರ್.ಜಿ. ಶ್ರೀನಿವಾಸಮೂರ್ತಿ, ಸಿಟಿ ಕೋ-ಆಪರೇಟೀವ್ ಬ್ಯಾಂಕಿನ ನಿರ್ದೇಶಕ ಪರಶುರಾಮಪ್ಪ ಮಾತನಾಡಿದರು. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಬಿ. ಶೇಖರಪ್ಪ, ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ಹೆಚ್. ಬಸವರಾಜಪ್ಪ, ಸಿರಿಗೆರೆ ರಾಜಣ್ಣ ಮತ್ತಿತರರು ಭಾಗವಹಿಸಿದ್ದರು.

ಸಂಗೀತ ರಾಘವೇಂದ್ರ ಪ್ರಾರ್ಥಿಸಿದರು. ಕೆ.ಹೆಚ್. ಸಂತೋಷ್ ಕುಮಾರ್ ಸ್ವಾಗತಿಸಿದರು. ಕೆ.ಎಂ. ಜಗದೀಶ್ ವಂದಿಸಿದರು.

# ಚಿತ್ರದುರ್ಗದಲ್ಲಿ ಹೊಸ ಮೆಡಿಕಲ್ ಕಾಲೇಜು ಸ್ಥಾಪನೆಗೆ ರಾಜ್ಯ ಸರ್ಕಾರದಿಂದ ಗ್ರೀನ್ ಸಿಗ್ನಲ್

### ಚಿತ್ರದುರ್ಗ ಮೆಡಿಕಲ್ ಕಾಲೇಜು ಆರಂಭಕ್ಕೆ ಆಡಳಿತಾತ್ಮಕ ಅನುಮೋದನೆ; ರೂ.500 ಕೋಟಿ ಮೀಸಲು

ಬೆಂಗಳೂರು, ಫೆ.17- ರಾಜ್ಯದಲ್ಲಿ ಆರೋಗ್ಯ ಮೂಲಸೌಕರ್ಯದ ಬಲವರ್ಧನೆಗಾಗಿ ಹೊಸ ಮೆಡಿಕಲ್ ಕಾಲೇಜುಗಳನ್ನು ಆರಂಭಿಸುವ ಕಾರ್ಯದಲ್ಲಿ ಇನ್ನಷ್ಟು ಪ್ರಗತಿ ಕಂಡುಬಂದಿದ್ದು, ಈಗ 500 ಕೋಟಿ ರೂ. ವೆಚ್ಚದ ಚಿತ್ರದುರ್ಗ ಮೆಡಿಕಲ್ ಕಾಲೇಜು ಆರಂಭಕ್ಕೆ ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಕುರಿತು ಮಾಹಿತಿ ನೀಡಿರುವ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್, ಈ ಮಹತ್ವದ ಹೆಜ್ಜೆಯಿಂದಾಗಿ ಗುಣಮಟ್ಟದ ಆರೋಗ್ಯ ಸೇವೆ ನೀಡುವ ಕಾರ್ಯಕ್ಕೆ ಮತ್ತಷ್ಟು ಆದ್ಯತೆ ದೊರೆತಿದೆ ಎಂದು ತಿಳಿಸಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಈ ಶೈಕ್ಷಣಿಕ ವರ್ಷದಿಂದಲೇ 100 ಎಂಬಿಬಿಎಸ್ ಸೀಟುಗಳ ಕಾಲೇಜು ಆರಂಭವಾಗಲಿದ್ದು, ನೂತನ ಕಟ್ಟಡ ನಿರ್ಮಾಣ ಭರದಿಂದ ಸಾಗಿದೆ. ಈ ನಡುವೆಯೇ, ಚಿತ್ರದುರ್ಗದಲ್ಲಿ 150 ಎಂಬಿಬಿಎಸ್ ಸೀಟುಗಳನ್ನು ಹೊಂದಲಿರುವ 'ಚಿತ್ರದುರ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ' ನಿರ್ಮಾಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ. ಸಿವಿಲ್ ಕಾಮಗಾರಿ ಸೇರಿ ಒಟ್ಟು 500 ಕೋಟಿ ರೂ. ಖರ್ಚಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಜನಸಂಖ್ಯೆಗೆ ಅನುಗುಣವಾಗಿ ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆಗೆ ಸರ್ಕಾರ ಮುಂದಾಗಿದೆ. ರಾಜ್ಯದಲ್ಲಿರುವ 17 ಸರ್ಕಾರಿ ವೈದ್ಯಕೀಯ ಕಾಲೇಜುಗಳ ಜೊತೆ ಹೊಸದಾಗಿ 4 ಸಂಸ್ಥೆಗಳ ಕಾಮಗಾರಿ ಪ್ರಗತಿಯಲ್ಲಿದೆ. ಚಿಕ್ಕಬಳ್ಳಾಪುರ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ 100 ಎಂಬಿಬಿಎಸ್ ಸೀಟುಗಳ ಪ್ರವೇಶ ಮಿತಿಯೊಂದಿಗೆ 2022-23 ನೇ ಸಾಲಿಗೆ ಲೆಟರ್ ಆಫ್ ಇಂಟೆಂಟ್ ನೀಡಲಾಗಿದೆ. ಇದರ ಜೊತೆಗೆ ಈಗ ಚಿತ್ರದುರ್ಗದಲ್ಲೂ ಕಾಲೇಜು ಕಟ್ಟಡದ ನಿರ್ಮಾಣಕ್ಕೆ ಅನುಮೋದನೆ ದೊರೆತಿದೆ ಎಂದು ತಿಳಿಸಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಯ ನಿಯಮಗಳ ಪ್ರಕಾರ ಪ್ರತಿ 1,000 ಜನಸಂಖ್ಯೆಗೆ ಒಬ್ಬ ವೈದ್ಯರು ಇರಬೇಕು. ಆದರೆ ಕರ್ನಾಟಕದಲ್ಲಿ 1,800 ಜನಸಂಖ್ಯೆಗೆ ಒಬ್ಬ ವೈದ್ಯರ ಲಭ್ಯತೆ ಇದೆ. ಈ ಅಸಮತೋಲನ ಸರಿಪಡಿಸಲು ಹಾಗೂ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪಡೆಯಲು ಸರ್ಕಾರ ಕ್ರಮಗಳನ್ನು ಕೈಗೊಂಡಿದೆ. ಇದೇ ಪ್ರಯತ್ನದ ಭಾಗವಾಗಿ ಚಿತ್ರದುರ್ಗದಲ್ಲಿ ಹೊಸ ವೈದ್ಯಕೀಯ ಕಾಲೇಜು ಆರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು ಎಂದು ಸಚಿವರು ಹೇಳಿದ್ದಾರೆ.

2014-15ನೇ ಸಾಲಿನ ಆಯವ್ಯಯದಲ್ಲಿನ ಘೋಷಣೆಯಂತೆ ಚಿತ್ರದುರ್ಗದಲ್ಲಿ 150 ಸೀಟುಗಳ ಎಂಬಿಬಿಎಸ್ ಕಾಲೇಜನ್ನು 2015-16ರಲ್ಲೇ ಸ್ಥಾಪಿಸಲು ತಾತ್ವಿಕ ಒಪ್ಪಿಗೆ ನೀಡಲಾಗಿತ್ತು. ಆದರೆ 2013-14 ರ ಆರ್ಥಿಕ ವರ್ಷದಲ್ಲಿ ಕಲಬುರ್ಗಿ, ಗದಗ, ಕೊಪ್ಪಳ, ಕಾರಾವಾರ, ಕೊಡಗು ಮತ್ತು ಚಾಮರಾಜನಗರದಲ್ಲಿ ಹೊಸ 6 ಮೆಡಿಕಲ್ ಕಾಲೇಜುಗಳ ನಿರ್ಮಾಣಕ್ಕೆ ಅಗತ್ಯ ಅನುದಾನ ಹೊಂದಿಸಿಕೊಳ್ಳಬೇಕಾಗಿದ್ದರಿಂದ ತುಮಕೂರು, ಚಿತ್ರದುರ್ಗ, ಬಾಗಲಕೋಟೆ, ಚಿಕ್ಕಬಳ್ಳಾಪುರ, ಹಾವೇರಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆ ಮುಂದೂಡಲಾಗಿತ್ತು. 2021-22ನೇ ಸಾಲಿನ ಬಜೆಟ್ ನಲ್ಲಿ, ಚಿತ್ರದುರ್ಗ ಜಿಲ್ಲೆಯಲ್ಲಿ ಪಿಪಿಪಿ ಮಾದರಿಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆಗೆ ಪ್ರಸ್ತಾವ ಸಲ್ಲಿಸಲಾಗಿತ್ತು ಎಂದು ಸಚಿವರು ವಿವರಿಸಿದ್ದಾರೆ.

ಚಿತ್ರದುರ್ಗದ ಮೆಡಿಕಲ್ ಕಾಲೇಜನ್ನು 2023-24 ನೇ ಸಾಲಿನಿಂದ ಆರಂಭಿಸಲು ಅಗತ್ಯ ಪ್ರಕ್ರಿಯೆಗಳನ್ನು ನಡೆಸಬೇಕೆಂದು ರಾಜ್ಯ ಸರ್ಕಾರ ಸೂಚಿಸಿದೆ.

# ಮಕ್ಕಳಲ್ಲಿನ ರಕ್ತಹೀನತೆ, ಅಪೌಷ್ಟಿಕತೆ ನಿವಾರಣೆಯ ಗುರಿ

## ಅರಸಾಪುರದಲ್ಲಿ ಎಸ್.ಎಸ್.ಕೇರ್ ಟ್ರಸ್ಟ್ ಆರೋಗ್ಯ ಕಾರ್ಯಕ್ರಮದಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಫೆ. 17 - 3 ರಿಂದ 6 ವರ್ಷದ ಮಕ್ಕಳಲ್ಲಿ ಕಂಡುಬರುವ ರಕ್ತಹೀನತೆ ಹಾಗೂ ಅಪೌಷ್ಟಿಕತೆಯನ್ನು ಹೋಗಲಾಡಿಸುವುದು ನಮ್ಮ ಗುರಿ ಹಾಗೂ ಈ ಸೌಲಭ್ಯವನ್ನು ನಂತರದ ದಿನಗಳಲ್ಲಿ ಗರ್ಭಿಣಿ ಸ್ತ್ರೀಯರಿಗೂ ವಿಸ್ತರಿಸಲಾಗುವುದು ಎಂದು ಸಾಮಾಜಿಕ ಸೇವಾ ಕಾರ್ಯಕರ್ತರೂ, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ನಿರ್ದೇಶಕರೂ ಆದ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

'ನಮ್ಮನಡೆ ಆರೋಗ್ಯದೆಡೆ' ಎಂಬ ಗುರಿಯೊಂದಿಗೆ ಅರಸಾಪುರದಲ್ಲಿ ಎಸ್.ಎಸ್. ಕೇರ್ ಟ್ರಸ್ಟ್ ಹಾಗೂ ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಇಂದು ನಡೆದ ಆರೋಗ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹಿರಿಯ ಮಕ್ಕಳ ತಜ್ಞರಾದ ಡಾ|| ಲತಾ ಶಾಮನೂರು ಅವರು ಮಾತನಾಡಿ, ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಉತ್ತಮ ಪೌಷ್ಟಿಕ ಆಹಾರದ ಅವಶ್ಯಕತೆ ತಿಳಿಸಿದರು.

ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ|| ಬಿ.ಎಸ್. ಪ್ರಸಾದ್ ಮಾತನಾಡಿ, ಈ ಕಾರ್ಯಕ್ರಮದಡಿಯಲ್ಲಿ ನೀಡುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಗ್ರಾಮದ ಜನತೆಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ 3 ರಿಂದ 6 ವರ್ಷದ ಮಕ್ಕಳಿಗೆ ರಕ್ತಹೀನತೆ ಹಾಗೂ ಅಪೌಷ್ಟಿಕತೆಯನ್ನು ಪರೀಕ್ಷಿಸಲಾಯಿತು. ರಕ್ತಹೀನತೆ ಹಾಗೂ ಅಪೌಷ್ಟಿಕತೆ ಕಂಡುಬಂದ ಮಕ್ಕಳಿಗೆ ಉಚಿತವಾಗಿ ಐರನ್ ಸಿರಪ್ ಹಾಗೂ ಪೌಷ್ಟಿಕ ಪೌಡರ್ ಗಳನ್ನು ಉಚಿತವಾಗಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದ ಡಾ|| ಎನ್.ಕೆ. ಕಾಳಪ್ಪನವರ್, ಡಾ|| ಶಾಂತಲಾ ಅರುಣ್ ಕುಮಾರ್, ಡಾ|| ಅಶ್ವಿನ್ ಕುಮಾರ್, ಡಾ|| ಶೀಲ ಹಾವೇರಿ, ಡಾ|| ರಂಗನಾಥ್ ಹಾಗೂ ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ|| ಎಸ್.ಬಿ. ಮುರುಗೇಶ್, ಡಾ|| ಕುಮಾರ್ ವೈದ್ಯಕೀಯ ನಿರ್ದೇಶಕರು ಬಾಪೂಜಿ ಆಸ್ಪತ್ರೆ, ಡಾ|| ಮೂಗನಗೌಡ, ಡಾ|| ಬಾಲು ಪಿ.ಎಸ್., ಜಿಲ್ಲಾ ಆರ್.ಸಿ.ಎಚ್. ಅಧಿಕಾರಿಗಳಾದ ಡಾ|| ಮೀನಾಕ್ಷಿ, ಅರಸಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ|| ರುದ್ರೇಶ್, ಗ್ರಾಮದ ಮುಖಂಡರುಗಳಾದ ಗ್ರಾಮ ಪಂಚಾಯತಿ ಅಧ್ಯಕ್ಷರು, ಮಾಜಿ ಅಧ್ಯಕ್ಷರು ಹಾಗೂ ಸದಸ್ಯರುಗಳಾದ ಬಿ.ಕೆ. ಪರಶುರಾಮ್, ಮುದೇಗೌಡ್ರು, ಗಿರೀಶ್, ಮೇಕಾ ಮುರಳಿಕೃಷ್ಣ, ರಾಘವೇಂದ್ರ ನಾಯ್ಕ್, ಶ್ರೀಮತಿ ಮಂಜುಳಾ ಬಾಯಿ, ಬಾಬಣ್ಣ, ಪ್ರಭಾಕರ್ ಮತ್ತು ಇತರರು ಉಪಸ್ಥಿತರಿದ್ದರು.

## ಅಂತಿಮ ಬಿ.ಎ: ನೀಲುಫರ್‌ಗೆ 9ನೇ ರ್‍ಯಾಂಕ್



ಚಿತ್ರದುರ್ಗ, ಫೆ. 17 - ನಗರದ ಎಸ್.ಜೆ.ಎಂ. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ (ಡೆಂಟಲ್ ಕಾಲೇಜ್ ಕ್ಯಾಂಪಸ್)ದ ವಿದ್ಯಾರ್ಥಿನಿ ನೀಲುಫರ್ 2021-22ನೇ ಸಾಲಿನಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯ ನಡೆಸಿದ ಅಂತಿಮ ಬಿ.ಎ. ಪರೀಕ್ಷೆಯಲ್ಲಿ 9ನೇ ರ್‍ಯಾಂಕ್ ಗಳಿಸಿದ್ದಾರೆ.

ಎಸ್.ಜೆ.ಎಂ. ವಿದ್ಯಾಪೀಠದ ಪೀಠಾಧ್ಯಕ್ಷರಾದ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಹಾಗೂ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಕಾಲೇಜಿನ ಪ್ರಾಂಶುಪಾಲ ಡಾ. ಎಲ್. ಈಶ್ವರಪ್ಪ ವಿದ್ಯಾರ್ಥಿನಿಯನ್ನು ಅಭಿನಂದಿಸಿದ್ದಾರೆ.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಾಮನೂರು, ಜೆ.ಎಚ್. ಪಟೇಲ್ ನಗರ, ಡಾಲರ್ಸ್ ಕಾಲೋನಿ, ಶಿವ ಪಾರ್ವತಿ ಲೇಔಟ್, ವಾಜಪೇಯಿ ಲೇಔಟ್, ಸಂಭ್ರಮ ಹೋಟೆಲ್ ಹಿಂಭಾಗ, ಹೊಸಕುಂದವಾಡ, ಹಳೇಕುಂದವಾಡ, ಕೆ.ಎಚ್.ಬಿ. ಕಾಲೋನಿ, ಮತ್ತು ರಶ್ಮಿ ಸ್ಕೂಲ್ ಜರೀಕಟ್ಟೆ, ಮುದಹದಡಿ ಸುತ್ತಮುತ್ತಲಿನಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


**ದೈವಜ್ಞ ಸಮಾಜ ಸಂಘ (ರಿ)**
ಪಿ.ಬಿ. ರಸ್ತೆ, ದಾವಣಗೆರೆ.

**ಆಜೀವ ಸದಸ್ಯರಾಗಲು ಕಾಲಾವಕಾಶ**

ದೈವಜ್ಞ ಸಮಾಜ ಸಂಘದ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ ಸಮಾಜದ ಸರ್ವ ಸದಸ್ಯರ ಸಭೆಯನ್ನು ನಡೆಸಲು ದಿನಾಂಕ ನಿಗದಿಪಡಿಸಲಾಗಿದ್ದು ಸಮಾಜದ 18 ವರ್ಷ ಮೇಲ್ಪಟ್ಟವರು ಆಜೀವ ಸದಸ್ಯರಾಗಲು ದಿನಾಂಕ 15.03.2022ರವರೆಗೆ ಕಾಲಾವಕಾಶ ನೀಡಿರುತ್ತಾರೆ. ಪ್ರಯುಕ್ತ ಹೊಸದಾಗಿ ಆಜೀವ ಸದಸ್ಯತ್ವ ಪಡೆಯಲು ಸಂಘದ ಕಛೇರಿಯಲ್ಲಿ ಅರ್ಜಿಯನ್ನು ತೆಗೆದುಕೊಂಡು ಹೋಗಿ ಭರ್ತಿ ಮಾಡಿ ದಾಖಲೆಗಳೊಂದಿಗೆ ನಿಗದಿತ ಹಣವನ್ನು ಸಂದಾಯ ಮಾಡಿ ಆಜೀವ ಸದಸ್ಯತ್ವ ಪಡೆದುಕೊಳ್ಳಬೇಕಾಗಿ ವಿನಂತಿ.

ಈ ಹಿಂದೆ ಆಜೀವ ಸದಸ್ಯತ್ವ ಪಡೆದವರು ಸಂಘದ ಕಛೇರಿಯಲ್ಲಿ ಅರ್ಜಿ ತೆಗೆದುಕೊಂಡು ಭರ್ತಿ ಮಾಡಿ ದಾಖಲೆಗಳೊಂದಿಗೆ ದಿನಾಂಕ 15.03.2022ರೊಳಗಾಗಿ ಸಂಘದ ಕಛೇರಿಗೆ ತಲುಪಿಸಿ ಐ.ಡಿ. ಕಾರ್ಡ್ ಮಾಡಿ ಕೊಡಲು ಸಹಕರಿಸಬೇಕಾಗಿ ವಿನಂತಿ.

ಅಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿ, ದಾವಣಗೆರೆ.


## ವಿನೂತನ ಮಹಿಳಾ ಸಮಾಜದಲ್ಲಿ ವೀರಗಾಸೆ ಶಿಬಿರ



ದಾವಣಗೆರೆ, ಫೆ. 17- ವಿನೂತನ ಮಹಿಳಾ ಸಮಾಜದಲ್ಲಿ ಮಹಿಳೆಯರಿಗಾಗಿ ಹಮ್ಮಿಕೊಂಡಿದ್ದ ಉಚಿತ ವೀರಗಾಸೆ ಶಿಬಿರವನ್ನು ಅಧ್ಯಕ್ಷ ಪ್ರಸನ್ನ ಚಂದ್ರಪ್ರಭು ಬುಧವಾರ ಉದ್ಘಾಟಿಸಿದರು.

ಶಿಬಿರದಲ್ಲಿ ರೇಖಾ ಓಂಕಾರಪ್ಪ ವೀರಗಾಸೆ ತರಬೇತಿ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಶ್ರೀಮತಿ ಗಿರಿಜಾ ಪ್ರಾರ್ಥಿಸಿದರು. ಭಾರತಿ ಸ್ವಾಗತಿಸಿದರು. ಗಿರಿಜಾ ಬಿಲ್ಲಳ್ಳಿ ವಂದಿಸಿದರು. ಚಂದ್ರಿಕಾ ಜಗನ್ನಾಥ್ ನಿರೂಪಿಸಿದರು. ಲೀಲಾ ಶೇಖರ್, ಸಾವಿತ್ರಿ ಮತ್ತು ಶಿಬಿರಾರ್ಥಿಗಳು ಭಾಗವಹಿಸಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕೊಂಡಜ್ಜಿ ರಸ್ತೆ, ಎಸ್‌ಜೆಎಮ್ ನಗರ, ಸೇವಾದಳ ಕಾಲೋನಿ, ಹೊಸಕ್ಯಾಂಪ್, ಎಸ್‌ಎಂಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಬಿ.ಜೆ. ಎಮ್ ಸ್ಕೂಲ್, ಆರ್‌ಟಿಓ ಆಫೀಸ್, ಬೂದಿಹಾಳ್ ರಸ್ತೆ, ಬಾಬು ಜಗಜೀವನ್‌ರಾಮ್ ನಗರ, ಗೌರಸಂದ್ರ, ಮಾರಮ್ಮ ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


TANISHQ WE ARE HIRING
TANISHQ TANISHQ
RETAIL SALES OFFICER (M/F)
Min 1-2 Years Experience
Walk-in Interview on 18th Feb Friday
Between 11.00 am to 4.00 pm
Location: K.J. Hyundai, Avaragere, P.B.Road, Davanagere.
Send Portfolio to hrjewelsdvg@gmail.com or Call
7022001204



**ವಿದೇಶ ಪ್ರವಾಸ ಶುಭ-ಹಾರೈಕೆ**



ಕನಕ ಪಟ್ಟಣ ಸಹಕಾರ ಬ್ಯಾಂಕ್ ಮತ್ತು ಕವಿರತ್ನ ಕಾಳಿದಾಸ ಕ್ರೆಡಿಟ್ ಕೋ-ಆಪ್ ಸೊಸೈಟಿ ಸಂಸ್ಥಾಪಕರೂ, ಮಾಜಿ ಅಧ್ಯಕ್ಷರೂ ಆಗಿದ್ದ ದಿ|| ಈಶಣ್ಣ ಯರಗಲ್ ಅವರ ಸೋದರ ಅಳಿಯಂದಿರೂ, ಕಟೇಲರ ದಿ|| ಸಿದ್ದಮ್ಮ - ಸಿ.ಎಸ್. ಬಾಲಪ್ಪ ಹಾಗೂ ದಿ|| ಶಿವಮ್ಮ ಭೀಮಣ್ಣ ಯರಗಲ್ ಇವರ ಮೊಮ್ಮಗ ಮತ್ತು ಶ್ರೀಮತಿ ಸಿ.ಎ. ಲತಾ-ಸಿ.ಬಿ. ಆನಂದ್ ದಂಪತಿ ಪುತ್ರ

**ಸಿ.ಎ. ವಿನಯ್**

ಅವರು ಎಸ್.ಎಲ್.ಕೆ. ಕಂಪನಿ ವತಿಯಿಂದ ಸಿನ್ಸಿನಾಟಿ (ಅಮೆರಿಕ)ಗೆ ದಿನಾಂಕ: 18.02.2022ರ ಶುಕ್ರವಾರ ಪ್ರವಾಸ ಕೈಗೊಂಡಿದ್ದಾರೆ. ಇವರ ಪ್ರವಾಸವು ಸುಖಕರವಾಗಿರಲೆಂದು ಶುಭ ಹಾರೈಸುತ್ತೇವೆ.

ಕಟೇಲರ ಮತ್ತು ಯರಗಲ್ ವಂಶಸ್ಥರು, ಬಂಧು-ಮಿತ್ರರು.


## ಸಾಂಪ್ರದಾಯಿಕ, ಆಧುನಿಕ ಸೀರೆ ಉಟ್ಟು ಸಂಭ್ರಮಿಸಿದ ನೀರೆಯರು




ದಾವಣಗೆರೆ, ಫೆ. 17- ನಗರದ ಜೇನುಗೂಡು ಮಹಿಳಾ ಸಮಾಜದ ವತಿಯಿಂದ ಭಾರತೀಯ ಸಾಂಪ್ರದಾಯಿಕ ಹಾಗೂ ಆಧುನಿಕ ಸೀರೆ ಉಡುವ ಮತ್ತು ಸೀರೆ ಕುರಿತು ಮಾತನಾಡುವ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಭಾಗವಹಿಸಿದ ಎಲ್ಲಾ ಮಹಿಳೆಯರು ವಿವಿಧ ಬಗೆಯ ಸೀರೆಗಳನ್ನು ಉಟ್ಟು ಸಂಭ್ರಮಿಸಿದರು. ಉಪನ್ಯಾಸಕರಾದ ಶ್ರೀಮತಿ ಸುಮತಿ ಜಯ್ಯಪ್ಪ ಅವರು ಸಂಬಂಧಗಳ ಕುರಿತು ವಿವರಿಸಿದರು.

ಉಷಾ ಉಮೇಶ್ ಪ್ರಥಮ, ವಿಜಯಾ ವೀರೇಂದ್ರ ದ್ವಿತೀಯ, ಗಾಯತ್ರಿ ರವಿ ತೃತೀಯ ಹಾಗೂ ರತ್ನ ಕಾಟ್ವೆ, ತನುಷಾ ಬೆಳ್ಳುಳ್ಳಿ ಅವರು ಸಮಾಧಾನಕರ ಬಹುಮಾನ ಪಡೆದುಕೊಂಡರು.

ಜೇನುಗೂಡು ಮಹಿಳಾ ಸಮಾಜದ ಅಧ್ಯಕ್ಷರಾದ ಸುಜಾತ ನಾಗೇಶ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಾಧ್ಯಕ್ಷರಾದ ಮಧು ಉಮೇಶ್, ಪದಾಧಿಕಾರಿಗಳಾದ ರೇಖಾ ಸಿದ್ಧಪ್ಪ, ರೂಪ ಚನ್ನವೀರ ಕಣವಿ, ವಿದ್ಯಾ ಭಾಸ್ಕರ್, ಕೊಟ್ರಮ್ಮ ಮತ್ತಿತರರಿದ್ದರು.

ಮಮತಾ ಎಸ್. ಭಟ್ ಪ್ರಾರ್ಥಿಸಿದರು. ಸಿ.ಜೆ. ಶಾಂತ ಸ್ವಾಗತಿಸಿದರು. ಮಮತಾ ಕೊಟ್ರೇಶ್ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಪ್ರೀತಿ ಜೆ. ಮಠದ್ ನಿರೂಪಿಸಿದರು. ಎ. ಸುಮ ವಂದಿಸಿದರು.

## ಜಯರತ್ನ ದೇಹದಾನ



ದಾವಣಗೆರೆ, ಫೆ.17- ಇಲ್ಲಿನ ವಿದ್ಯಾನಗರದ ವಾಸಿ 65 ವರ್ಷ ವಯಸ್ಸಿನ ಜಯರತ್ನ ಅವರು ತಮ್ಮ ಮರಣದ ನಂತರ ದೇಹದಾನ ಮಾಡಲು ಜಜಮು ವೈದ್ಯಕೀಯ ಕಾಲೇಜಿಗೆ 2018ರಲ್ಲಿ ಸಲ್ಲಿಸಿದ್ದ ಮನವಿ ಪತ್ರವನ್ನು ಕಾಲೇಜ್ ಕೃತಜ್ಞತೆಯಿಂದ ಸ್ವೀಕರಿಸಿ ಪ್ರಶಂಸಾ ಪತ್ರ ನೀಡಿ, ತಮ್ಮ ಇಚ್ಛೆ ಪೂರೈಸುವುದಾಗಿ ತಿಳಿಸಿದೆ. ವೈದ್ಯಕೀಯ ಶಿಕ್ಷಣದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಹಿತದೃಷ್ಟಿಯಿಂದ ದೇಹದಾನ ಮಾಡಲು ಮುಂದಾಗಿರುವುದಾಗಿ ತಿಳಿಸಿರುವ ಜಯರತ್ನ ಅವರ ನಿರ್ಧಾರಕ್ಕೆ ಅವರ ಪತಿ ಮತ್ತು ಮಗಳು ಸಮ್ಮತಿ ಸೂಚಿಸಿದ್ದಾರೆ.

## ಹೂವಿನಹಡಗಲಿ : ಮೈಲಾರ ಲಿಂಗೇಶ್ವರನಿಗೆ ವಿಶೇಷ ಪೂಜೆ ಅಲಂಕಾರ



ಹೂವಿನಹಡಗಲಿ, ಫೆ.17- ತಾಲ್ಲೂಕಿನ ಸುಪ್ರಸಿದ್ಧ ಶ್ರೀ ಮೈಲಾರ ಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ತುಮಕೂರಿನ ಭಕ್ತರೊಬ್ಬರು, ವಿಶೇಷ ಹೂವಿನ ಪೂಜೆ ಅಲಂಕಾರ ಮಾಡಿಸಿದ್ದಾರೆ. ಸ್ವಾಮಿಯ ಅಲಂಕಾರಿಕ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಅಪಾರ ಭಕ್ತ ವೀಕ್ಷಣೆಗೆ ಕಾರಣವಾಗಿದೆ. ಇದರ ಜೊತೆಗೆ ವಿಶೇಷ ಪೂಜೆ ಪ್ರಾರ್ಥನೆಗೈದರು.

ದೇವಸ್ಥಾನದ ಕಾರ್ಯನಿರ್ವಹಣಾ ಅಧಿಕಾರಿ ಎಂ.ಹೆಚ್.ಪ್ರಕಾಶ್‌ರಾವ್ ಉಪಸ್ಥಿತರಿದ್ದರು. ನಾಳೆ ಶುಕ್ರವಾರ ಸಂಜೆ ಕಾರಣಿಕೋತ್ಸವ ಜರುಗಲಿದೆ. ಭಕ್ತರ ಪ್ರವೇಶ ನಿರ್ಬಂಧವನ್ನು ಸಡಿಲಗೊಳಿಸಲಾಗಿದೆ. ನಾಳೆ ಬೆಳಿಗ್ಗೆ 6 ರಿಂದ ಭಕ್ತರಿಗೆ ದರ್ಶನ ಲಭಿಸಲಿದೆ.


**23ನೇ ವರ್ಷದ ಪುಣ್ಯಸ್ಮರಣೆ**




ಶ್ರೀಮತಿ ಎನ್.ಎಸ್. ಸರಸ್ವತಮ್ಮ, ಶ್ರೀ ಎನ್. ಶಿವಯೋಗಪ್ಪ
ನಿವೃತ್ತ ಪ್ರಾಧ್ಯಾಪಕರು, ಮೋತಿ ವೀರಪ್ಪ ಹೈಸ್ಕೂಲ್, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ 23 ವರ್ಷಗಳು ಸಂದವು
ಸದಾ ನಿಮ್ಮ ಆಶೀರ್ವಾದ ನಮ್ಮಗಳ ಮೇಲೆ ಇರಲಿ ಎಂದು ಪ್ರಾರ್ಥಿಸುವ ...

ಶ್ರೀಮತಿ ಎನ್.ಎಸ್. ಲತಾ ಕೋಂ. ಲೇಟ್ ಕೆ.ಟಿ.ಜೆ. ನಾಗಭೂಷಣ, ದಾವಣಗೆರೆ.
ಶ್ರೀಮತಿ ಪ್ರಭಾವತಿ ಕೋಂ. ಎನ್.ಎಸ್. ಶಂಕರಮೂರ್ತಿ, ಶಿವಮೊಗ್ಗ.
ಶ್ರೀಮತಿ ವಿದ್ಯಾ ಕೋಂ. ಎನ್.ಎಸ್. ಗುರುಲಿಂಗಪ್ಪ, ದಾವಣಗೆರೆ.
ಶ್ರೀಮತಿ ವತ್ಸಲ ಕೋಂ ಎನ್.ಎಸ್. ಜಯದೇವ ಪ್ರಕಾಶ್, ಬೆಂಗಳೂರು.
ಶ್ರೀಮತಿ ಶಿಲ್ಪ ಕೋಂ ಎನ್.ಎಸ್. ಮುರುಗೇಶ್, ಹುಬ್ಬಳ್ಳಿ.
ಶ್ರೀಮತಿ ಉಷಾ ಕೋಂ ಚಂದ್ರಶೇಖರ ಮಂಚಾಳಿ, ಶಿರಾಳಕೊಪ್ಪ. ಶ್ರೀಮತಿ ಚೈತ್ರಗೌರಿ ಕೋಂ ಕೆ.ಎನ್. ನಿಶ್ಚಯ್, ಬೆಂಗಳೂರು.
ವಿನಯ್, ಕಾಂಚನ, ಸಹನ, ಸ್ತುತಿ, ಶಿವು, ಶ್ರೇಯಸ್, ಸಂಜನಾ, ಯಶಸ್, ಚಿ|| ಓಂ ಕೆ.ಎನ್.



**ಇಂದು ಪ್ರಾರಂಭ**
ಪ್ರಪ್ರಥಮ ಬಾರಿಗೆ ದಾವಣಗೆರೆಯಲ್ಲಿ
US COMMUNICATIONS
In Association with
Deshpande Foundation Hubballi
Presents
FREE ENTRY
Only 3 Days
**ಕೃಷಿಮೇಳ**
Exhibition
ದಿನಾಂಕ: 18, 19 & 20 ಫೆಬ್ರುವರಿ 2022
ಸ್ಥಳ: ಹೈಸ್ಕೂಲ್ ಮೈದಾನ, ಮಹಾನಗರ ಪಾಲಿಕೆ ಎದುರಿಗೆ, ದಾವಣಗೆರೆ
Also Visit: FURNITURE EXPO





ಡಾ. ಸಾಯಿಲ್
ದ್ರವರೂಪದ ಜೈವಿಕ ಗೊಬ್ಬರ

ಕೃಷಿ ಮೇಳಕ್ಕೆ ಆಗಮಿಸುತ್ತಿರುವ ರೈತಬಾಂಧವರಿಗೂ ಮತ್ತು ನಾಡಿನ ಖ್ಯಾತ ಸಾವಯವ ಕೃಷಿ ತಜ್ಞ ನಡೆದಾಡುವ ಕೃಷಿ ವಿಶ್ವಕೋಶ ಬಿರುದಾಂಕಿತ

**ಡಾ|| ಕೆ.ಆರ್. ಹುಲ್ಲುನಾಚೇಗೌಡರಿಗೆ ಸ್ವಾಗತ ಕೋರುವವರು**

**ಶ್ರೀ ಶಿವನಾರದಮುನಿ ಕೃಷಿ ಮಾಹಿತಿ ಮತ್ತು ಪರಿಕರ ಮಾರಾಟ ಕೇಂದ್ರ**
# 1346/2, RHS ಮ್ಯಾನ್ಷನ್, 3ನೇ ಮೇನ್, 8ನೇ ಕ್ರಾಸ್, ಅಂಬಿಕಾ ಡಿಸ್ಟ್ರಿಬ್ಯೂಟರ್ಸ್ ಎದುರು, ವಿದ್ಯಾರ್ಥಿ ಭವನ ಸರ್ಕಲ್ ಹತ್ತಿರ, ದಾವಣಗೆರೆ-577 002. ಮೊ : 9972699813

**ಶ್ರೀ ವಿನಾಯಕ ಸಾವಯವ ಕೃಷಿ ಮಾಹಿತಿ ಮತ್ತು ಪರಿಕರ ಮಾರಾಟ ಕೇಂದ್ರ**
# 16464, ಶಕ್ತಿ ಆರ್ಕೇಡ್, ರಾಯ್ಕರ್ ಬಿಲ್ಡಿಂಗ್, ಐ.ಸಿ.ಐ.ಸಿ.ಐ ಬ್ಯಾಂಕ್ ಕೆಳ ಮಹಡಿ, ಹಳೇ ಸರ್ಕಾರಿ ಆಸ್ಪತ್ರೆ ಎದುರು, ಟಿ.ಎಂ. ರಸ್ತೆ, ಹೊನ್ನಾಳಿ-577 217. ಮೊ : 9164332677



ಶ್ರೀ ಕೆ.ಬಿ. ಮಹದೇವಪ್ಪ ದಿದ್ದಿಗೆ
ನಿರ್ದೇಶಕರು, ರಾಜ್ಯ ಕೃಷಿ ಅಭಿಯಾನ ಟ್ರಸ್ಟ್, ಯಲಹಂಕ, ಬೆಂಗಳೂರು
ಡಾ. ಸಾಯಿಲ್ ಹೋಲ್‌ಸೇಲ್ ವಿತರಕರು, ದಾವಣಗೆರೆ ಜಿಲ್ಲೆ

ಡಾ|| ಕೆ.ಆರ್. ಹುಲ್ಲುನಾಚೇಗೌಡ
ಸಾವಯವ ಕೃಷಿ ತಜ್ಞರು ಹಾಗೂ
ಛೇರ್ಮನ್ ಮೈಕ್ರೋಬಿ ಅಗ್ರೋಟೆಕ್ ಪ್ರೈ.ಲಿ.,
ಯಲಹಂಕ, ಬೆಂಗಳೂರು.

ಹರ್ಷ ಹೆಚ್.ವಿ.
ಡಾ. ಸಾಯಿಲ್ ವಿತರಕರು, ಹೊನ್ನಾಳಿ

ಪರಶಿವಮೂರ್ತಿ, ಚರಣ್ ನಾಯ್ಕು, ರವಿ ಯೋಗರಾಜ್, ಆನಂದ್, ಮಹಾಸ್ವಾಮಿ, ವಿಜಯಕುಮಾರ್, ಪ್ರಶಾಂತ್, ಹರೀಶ್, ಮೆಹಬೂಬ್, ಮರಿ ಕೊಟ್ರೇಶ್, ಕಬೀರ್


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte